ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಜನೋನ್ಮಾದ ಮತ್ತು ಜನತಂತ್ರ

22 ಅಕ್ಟೋಬರ್ 2014 ಪುಟ 20 ರೂ. 15/-



ತೆಂಗಿ ಮಗನಿಗೆ ಪೆಟ್ಟ


ಮೂರು ಸಾವಿರ ಮಠ ಪೀಠ ತ್ಯಾಗದ ನಾಟಕ





ಶಾಮನೂರು–ಶೆಟ್ಟರ್ ಮ್ಯಾರೇಜ್ ಪಾಲಿಟಿಕ್ಸ್





ಜನೋನ್ಮಾದ ಮತ್ತು ಜನತಂತ್ರ

ಶಿಕ್ಷಣದಲ್ಲಿ ಸಮಾನತೆ ಇರಬೇಕೆಂದು ಹೋರಾಡುತ್ತಿರುವ ಅಖಿಲ ಭಾರತ ವೇದಿಕೆಯೊಂದರ ಸಮಿತಿ ಸಭೆ ನಿನ್ನೆ ಭೋಪಾಲ್‌ನಲ್ಲಿ ನಡೆಯಿತು. ಅದಕ್ಕೆ ಬರಲೇಬೇಕಿದ್ದ ತಮಿಳುನಾಡಿನ ಪ್ರತಿನಿಧಿ ಪ್ರಿನ್ಸ್ ಗಜೇಂದ್ರಬಾಬು ಅವರು ಬರಲಿಲ್ಲ. ಅವರು ಬಾರದೇ ಹೋದದ್ದಕ್ಕೆ ಕಾರಣ ಕೇಳಿ ಆಶ್ಚರ್ಯವಾಯಿತು. ತಮಿಳುನಾಡಿನ ಎಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು ಜೈಲಿಗೆ ಹೋದ 'ಅಮ್ಮ'ನ ಪರವಾಗಿ ಶಾಲಾ-ಕಾಲೇಜುಗಳನ್ನು (1200 ಶಾಲೆಗಳು ಮತ್ತು 500 ಕಾಲೇಜುಗಳು) ಬಂದ್ ಮಾಡಿ, ಆಕೆಯ ಪರವಾಗಿ ಮಕ್ಕಳ ರ್‍ಯಾಲಿ ಮಾಡಲು ಅಧಿಕೃತ ತೀರ್ಮಾನ ಮಾಡಿದ್ದವು. ಅದು ತಪ್ಪು ಎಂದು ಹೇಳಿ, ಅದರ ವಿರುದ್ಧ ಪರ್ಯಾಯ ಕಾರ್ಯಕ್ರಮ ರೂಪಿಸುವ ಸಲುವಾಗಿ ಪ್ರಿನ್ಸ್ ತಮಿಳುನಾಡಿನಲ್ಲಿ ಇರಲೇಬೇಕಿತ್ತು.

ಅವರ ವಾದ ಸರಳವಾಗಿದೆ. ಇದು ಯಾವುದೋ ಒಂದು ದಿನ ಶಾಲೆಗಳನ್ನು ಬಂದ್ ಮಾಡುವ ವಿಚಾರವಲ್ಲ; ಮಕ್ಕಳನ್ನು ಯಾವುದೋ ಒಂದು ಕಾರಣಕ್ಕೆ ಬೀದಿಯಲ್ಲಿ ಮೆರವಣಿಗೆ ಮಾಡಿಸುವುದೂ ಅಲ್ಲ. ಹೋರಾಟದ ಕಾರಣಕ್ಕಲ್ಲದೇ, ಸಾರ್ವಜನಿಕ ಹಣವನ್ನು ಭ್ರಷ್ಟ ಮಾರ್ಗದಿಂದ ತನ್ನದನ್ನಾಗಿಸಿಕೊಂಡ ರಾಜಕೀಯ ನಾಯಕಿಯೊಬ್ಬಳ ಪರವಾಗಿ ನಾವು ಶಾಲಾ ಮಕ್ಕಳನ್ನು ಬೀದಿಗಿಳಿಸುವ ಮೂಲಕ ಆ ಮಕ್ಕಳಿಗೆ ಏನು ಕಲಿಸುತ್ತಿದ್ದೇವೆ? ಇಂತಹ ಮಾದರಿಯನ್ನು ತಮ್ಮದನ್ನಾಗಿಸಿಕೊಳ್ಳುವ ಮಕ್ಕಳು ನಾಳೆ ಈ ದೇಶಕ್ಕೇನು ಕೊಡಬಲ್ಲರು? ತಮಿಳುನಾಡಿನಲ್ಲಿ ಇಂದು ಇರುವ ಪರಿಸ್ಥಿತಿಯಲ್ಲಿ ಇಂತಹ 'ಪರ್ಯಾಯ' ವಾದವನ್ನು ಮುಂದಿಡುವುದು ಅಷ್ಟು ಸುಲಭವಲ್ಲ. ಆದರೂ ಅದನ್ನು ಗಟ್ಟಿಯಾಗಿ ಹೇಳುವುದಕ್ಕೋಸ್ಕರ ಭೋಪಾಲ್‌ನ ಸಭೆಯನ್ನು ತಪ್ಪಿಸಿಕೊಂಡದ್ದು ಯಾರಿಗೂ ಸಮಸ್ಯೆಯಾಗಿ ಕಾಣಲಿಲ್ಲ.

ಆದರೆ ಈ ದೇಶದ ಸಮಸ್ಯೆ ಗಂಭೀರವಾಗಿಯಂತೂ ಇದೆ. ಶಾಲಾಮಕ್ಕಳು ಬೀದಿಗಿಳಿಯುವ ಮುನ್ನ ಇಡೀ ತಮಿಳು ಚಿತ್ರರಂಗ ಜಯಲಲಿತಾ ಪರವಾಗಿ ಬಂದ್ ಮಾಡಿತ್ತು. ರಾಜ್ಯಾದ್ಯಂತ ಜಯಲಲಿತಾ ಮಾಲೀಕತ್ವದ ಎಐಎಡಿಎಂಕೆ ಪಕ್ಷದ ಕಾರ್ಯಕರ್ತರಂತೂ ಮೊದಲ ದಿನದಿಂದ ಪ್ರತಿಭಟನೆ ನಡೆಸುತ್ತಲೇ ಇದ್ದಾರೆ. ಈ ಅವಧಿಯಲ್ಲಿ ನಡೆದ ಕೆಲವು ಆತ್ಮಹತ್ಯೆಗಳನ್ನು 'ಅಮ್ಮ'ನಿಗಾಗಿ ನಡೆದ ಆತ್ಮಹತ್ಯೆಗಳೆಂದು ಹೇಳಲಾಗುತ್ತಿದೆ. ಇದ್ದರೂ ಇರಬಹುದು. ಆದರೆ ತಮ್ಮದೇ ಹಣ ತಿಂದು ಜೈಲಿಗೆ ಹೋದ ವ್ಯಕ್ತಿಯೊಬ್ಬರ ಸುತ್ತ ನಡೆಯುವ ಇಂತಹ ಉನ್ಮಾದವನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬೇಕು?

ಇಂತಹುದೇ ಇನ್ನೊಂದು ಬೆಳವಣಿಗೆ ಕೆಲವು ದಿನಗಳ ಕೆಳಗೆ ನಡೆಯಿತು. ಲೋಕದಳದ ಅಧ್ಯಕ್ಷ ಅಜಿತ್‌ಸಿಂಗ್ ಕಳೆದ ಲೋಕಸಭಾ ಚುನಾವಣೆಯಲ್ಲಿ ಸೋತರು. ಅವರು ದೆಹಲಿಯಲ್ಲಿ ವಾಸಿಸುತ್ತಿದ್ದ ಮನೆಯನ್ನು ತೆರವುಗೊಳಿಸಲು ಸಂಬಂಧಪಟ್ಟ ಇಲಾಖೆ ನೋಟಿಸ್ ಕೊಟ್ಟಿತು. ಮೂರು ತಿಂಗಳು ದಾಟಿದರೂ ಅಜಿತ್‌ಸಿಂಗ್ ಮನೆ ತೆರವುಗೊಳಿಸಲಿಲ್ಲ. ಸೆಪ್ಟೆಂಬರ್ 6ರಂದು ಆ ಮನೆಗೆ ನೀರು ಮತ್ತು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಯಿತು. ಅವರ ತಂದೆ ಚರಣ್‌ಸಿಂಗ್ ಸಹ ಅದೇ ಮನೆಯಲ್ಲಿ ವಾಸವಿದ್ದರಂತೆ. ನಂತರ ಬೇರೆ ಬೇರೆ ಪಕ್ಷ/ಕೂಟಗಳ ಅಧಿಕಾರಾವಧಿಯಲ್ಲಿ ಅಜಿತ್‌ಸಿಂಗ್ ಮಂತ್ರಿಯಾಗಿ ಅದೇ ಮನೆಯಲ್ಲಿ ಇದ್ದರಂತೆ. 'ಉಳುವವನೇ ಭೂಮಿಯ ಒಡೆಯ' ರೀತಿಯಲ್ಲಿ 'ವಾಸವಿದ್ದವನದ್ದೇ ಸರ್ಕಾರೀ ಮನೆ' ಎಂಬ ನಿಯಮವೇನೂ ಇಲ್ಲ. ಆದರೂ ಅಜಿತ್‌ಸಿಂಗ್‌ಗೆ ಆ ಮನೆಯ ಮೇಲೇನೋ ಮಮಕಾರ. ಅವರು ಖಾಲಿ ಮಾಡಲು ತಯಾರಿರಲಿಲ್ಲ. ಈ ಕುರಿತು ಅವರ ವಾದ ಹೀಗಿತ್ತು: 'ಈಗ ಮೋದಿ ಸರ್ಕಾರದಲ್ಲಿರುವ ಕೆಲವು ಮಂತ್ರಿಗಳು, ತಾವು ಮಂತ್ರಿಗಳಾಗದಿದ್ದಾಗ್ಯೂ ಯುಪಿಎ ಸರ್ಕಾರದ ಅವಧಿಯಲ್ಲಿ 10 ವರ್ಷಗಳ ಕಾಲ ಅನಧಿಕೃತವಾಗಿ ಮಂತ್ರಿಗಳ ಬಂಗಲೆಯಲ್ಲಿದ್ದರು. ಅದು ಸರಿಯೇ?' ಇದು ಎನ್‌ಡಿಎ ಕೂಟದ ಅಪಾಧಭೂತಿತನವನ್ನು ಎತ್ತಿತೋರಿಸುತ್ತದೆಯೇ ಹೊರತು, ಅಜಿತ್‌ಸಿಂಗರು ಅದನ್ನೇ ಮಾಡಲು ಲೈಸೆನ್ಸನ್ನೇನೂ ನೀಡುವುದಿಲ್ಲ.

ಕೇವಲ ಇಷ್ಟನ್ನು ಹೇಳಿ, ಜನರನ್ನು ರೊಚ್ಚಿಗೆಬ್ಬಿಸುವುದು ಸಾಧ್ಯವಿಲ್ಲವಲ್ಲ. ಆದಕ್ಕೆ ಇನ್ನೊಂದು 'ಬೇಡಿಕೆ'ಯನ್ನು ಲೋಕದಳವು ಮುಂದಿಟ್ಟಿತು. 'ಈ ಮನೆಯಲ್ಲಿ 1987ರಲ್ಲಿ ನಿಧನರಾಗುವವರೆಗೆ ಮಾಜಿ ಪ್ರಧಾನಿ ಚೌಧರಿ ಚರಣ್‌ಸಿಂಗ್ ವಾಸಿಸುತ್ತಿದ್ದರು. ಆ ನಂತರ ಸತತವಾಗಿ ಸಂಸತ್ ಸದಸ್ಯರಾದ ಅಜಿತ್‌ಸಿಂಗ್ ಇದ್ದರು. ಈ ಮನೆಯನ್ನು ಚೌಧರಿ ಚರಣ್‌ಸಿಂಗ್ ಸ್ಮಾರಕವನ್ನಾಗಿಸಬೇಕು. ಅದನ್ನು ಮಾಡುವ ಬದಲಿಗೆ ಅವರ ಮಗನನ್ನು ಕೆಟ್ಟದಾಗಿ ನಡೆಸಿಕೊಂಡು ಖಾಲಿ ಮಾಡಿಸಲು ಸರ್ಕಾರ ಹವಣಿಸುತ್ತಿದೆ. ಇದು ಚೌಧರಿ ಸಾಹಿಬ್‌ರಿಗೆ ಮಾಡುತ್ತಿರುವ ಅವಮಾನ.' ಮಾರನೆಯ ದಿನ ಸುಮಾರು 10,000 ಜನರು ಗಂಗಾನದಿಯ ಕಾಲುವೆಯೊಂದರತ್ತ ಧಾವಿಸಿದರು. ಸ್ಮಾರಕವಾಗಬೇಕಿರುವ ನಮ್ಮ ನಾಯಕನ ಮನೆಗೆ ನೀರನ್ನು ನೀವು ಬಂದ್ ಮಾಡುವುದಾದರೆ, ನಾವು ದೆಹಲಿಗೆ ನೀರು ಸರಬರಾಜು ಮಾಡುವ ಗಂಗಾನದಿಯ ಕಾಲುವೆಯನ್ನೇ ಬಂದ್ ಮಾಡುತ್ತೇವೆ ಎಂದು ಘೋಷಿಸಿದರು! ಪೊಲೀಸರು ಅವರನ್ನು ತಡೆದರು. ಪೊಲೀಸರು ಹಾಗೂ ಪ್ರತಿಭಟನಾಕಾರರು ಸೇರಿದಂತೆ ಸುಮಾರು 15 ಜನ ಗಾಯಗೊಂಡರು. ಮುರದ್‌ನಗರ ರಾಷ್ಟ್ರೀಯ ಹೆದ್ದಾರಿಯು 6 ಗಂಟೆಗಳ ಕಾಲ ಸಂಪೂರ್ಣ ಬಂದ್ ಆಗಿತ್ತು!!

ಈ ಪ್ರಮಾಣದ ವ್ಯಕ್ತಿಗತ ಆರಾಧನೆಯು ತಮ್ಮ ನಾಯಕರು ತಪ್ಪು ಮಾಡಿದಾಗ್ಯೂ ಇರುವುದು ಜನತಂತ್ರದಲ್ಲಿ ಸಾಧುವೇ ಎಂಬ ಪ್ರಶ್ನೆ ಏಳುತ್ತದೆ. ಕೆಲವು ಸಾರಿ ಅದು ಸಕಾರಾತ್ಮಕವಾದ ಪರಿಣಾಮವನ್ನೂ ಬೀರಬಹುದು. ಅಂದರೆ ಆ ರೀತಿ ನಾಯಕ/ನಾಯಕಿ ಪರವಾಗಿ ನಿಲ್ಲುವುದು ಆ ಸಂದರ್ಭದಲ್ಲಿ ನ್ಯಾಯದ ಪರವಾಗಿ ನಿಲ್ಲುವುದಾಗಿರುವ ಸಾಧ್ಯತೆಯೂ ಇದ್ದರೆ, ಆಗಲೂ ಅದು ವ್ಯಕ್ತಿ ಕೇಂದ್ರಿತ ಉನ್ಮಾದದ ಭಾಗವಾಗಿಯಷ್ಟೇ 'ಜನಾಂದೋಲನ'ದ ರೂಪ ಪಡೆದುಕೊಂಡಿರುತ್ತದೆ. ಅದರಿಂದ ದೀರ್ಘಕಾಲದಲ್ಲಿ ಪ್ರಜಾತಂತ್ರಕ್ಕೆ ಆಗುವ ಉಪಯೋಗವೆಷ್ಟು ಎಂಬ ಪ್ರಶ್ನೆ ಇದ್ದೇ ಇರುತ್ತದೆ. ಉದಾಹರಣೆಗೆ ನಾಯಕ/ನಾಯಕಿ ಆರಾಧನೆಯು 30 ವರ್ಷಗಳ ಕೆಳಗೆ ಒಂದು ವಿಶೇಷವಾದ ವಿದ್ಯಮಾನಕ್ಕೆ ಆಂಧ್ರಪ್ರದೇಶದಲ್ಲಿ ಕಾರಣವಾಗಿತ್ತು. 1983ರ ಜನವರಿಯಲ್ಲಿ ಅಂದಿನ ಆಂಧ್ರಪ್ರದೇಶದಲ್ಲಿ ಎನ್.ಟಿ.ರಾಮರಾವ್ ಭಾರೀ ಬಹುಮತದೊಂದಿಗೆ ತೆಲುಗುದೇಶಂ ಪಕ್ಷವನ್ನು ಗೆಲ್ಲಿಸಿಕೊಂಡಿದ್ದರು. 1984ರ ಆಗಸ್ಟ್‌ನಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ಚಿತಾವಣೆ ಮತ್ತು ಬೆಂಬಲದೊಂದಿಗೆ ತೆಲುಗುದೇಶಂ ಪಕ್ಷದ ನಾದೆಂಡ್ಲ ಭಾಸ್ಕರರಾವ್ ಪಕ್ಷವನ್ನು ಒಡೆದು (ಆಗಿನ್ನೂ ಪಕ್ಷಾಂತರ ನಿಷೇಧ ಕಾಯ್ದೆ ಇರಲಿಲ್ಲ) ರಾಜ್ಯಪಾಲರ ಹತ್ತಿರ ಹೋದರು. ತಾವು ಎನ್‌ಟಿಆರ್‌ಗೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿರುವುದಾಗಿ ಘೋಷಿಸಿದರು. ಕಾಂಗ್ರೆಸ್‌ನ ಬೆಂಬಲದೊಂದಿಗೆ, ಭಾಸ್ಕರರಾವ್ ಆಗಸ್ಟ್ 16ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನವನ್ನೂ ಸ್ವೀಕರಿಸಿದರು.



ಅಮೆರಿಕಕ್ಕೆ ಹೃದಯ ಚಿಕಿತ್ಸೆಗಾಗಿ ಹೋಗಿದ್ದ ಎನ್‌ಟಿಆರ್ ವಾಪಸ್ಸು ಬಂದು 'ಧರ್ಮಯುದ್ಧ'ವನ್ನು ಘೋಷಿಸಿದರು. ಅದರ ತೀವ್ರತೆ ಎಷ್ಟಿತ್ತೆಂದರೆ, ಸೆಪ್ಟೆಂಬರ್ 16ರಂದು ಎನ್‌ಟಿಆರ್ ಮತ್ತೆ ಆಂಧ್ರದ ಮುಖ್ಯಮಂತ್ರಿಯಾದರು. ಇಲ್ಲಿಂದ ಮುಂದೆ ಇನ್ನೂ ಒಂದು ಸ್ವಾರಸ್ಯಕರ ಸಂಗತಿ ಇದೆ. ಅದೇ ವರ್ಷ ಅಕ್ಟೋಬರ್ 31ರಂದು ಇಂದಿರಾ ಗಾಂಧಿಯವರ ಹತ್ಯೆಯಾಯಿತು. ಡಿಸೆಂಬರ್‌ನಲ್ಲಿ ಲೋಕಸಭಾ ಚುನಾವಣೆ ನಡೆಯಿತು. ದೇಶಾದ್ಯಂತ ಕಾಂಗ್ರೆಸ್ ಪಕ್ಷವು ಜಯಭೇರಿ ಬಾರಿಸಿ 400ಕ್ಕೂ ಹೆಚ್ಚು ಕ್ಷೇತ್ರಗಳನ್ನು ತನ್ನದಾಗಿಸಿಕೊಂಡಿತು. ಹಿಂದಿನ ವರ್ಷ ತಾನೇ ಕಾಂಗ್ರೆಸ್ಸನ್ನು ಸೋಲಿಸಿ, ಕರ್ನಾಟಕದಲ್ಲಿ ಅಧಿಕಾರ ಹಿಡಿದಿದ್ದ ಜನತಾ-ರಂಗ ಕೂಟವು ಕರ್ನಾಟಕದಲ್ಲಿ ಮತ್ತೆ ಧೂಳೀಪಟವಾಯಿತು. 28 ಕ್ಷೇತ್ರಗಳಲ್ಲಿ 24ನ್ನು ಮತ್ತೆ ಕಾಂಗ್ರೆಸ್ ಪಕ್ಷವೇ ಗೆದ್ದಿತ್ತು. ಇಂದಿರಾ ಗಾಂಧಿ ಹತ್ಯೆಯ ಅನುಕಂಪವು ದೇಶಾದ್ಯಂತ ಉಳಿದೆಲ್ಲಾ ಪಕ್ಷಗಳನ್ನು ನೆಲಕಚ್ಚಿಸಿತ್ತು, ಎನ್‌ಟಿಆರ್‌ರ ತೆಲುಗುದೇಶಂ ಪಕ್ಷವೊಂದನ್ನು ಹೊರತುಪಡಿಸಿ! ಅಲ್ಲಿ 42 ಕ್ಷೇತ್ರಗಳ ಪೈಕಿ ತೆಲುಗುದೇಶಂ (ತಾನು ಸ್ಪರ್ಧಿಸಿದ್ದ 34 ಕ್ಷೇತ್ರಗಳಲ್ಲಿ) 30 ಸೀಟುಗಳನ್ನು ಗೆದ್ದಿತು ಮಾತ್ರವಲ್ಲ, ಲೋಕಸಭೆಯಲ್ಲಿ ಅದೇ ಅತ್ಯಂತ ದೊಡ್ಡ ವಿರೋಧ ಪಕ್ಷವಾಗಿತ್ತು.

ದೇಶದ ಅತ್ಯಂತ ಜನಪ್ರಿಯ ನಾಯಕಿ ಇಂದಿರಾ ಗಾಂಧಿಗೆ ದೇಶಾದ್ಯಂತ ಸಿಕ್ಕ ಅನುಕಂಪದ ಅಲೆಗಿಂತ ಆಂಧ್ರದಲ್ಲಿ ಎನ್.ಟಿ.ರಾಮರಾವ್‌ರಿಗೆ ಆ ಸಂದರ್ಭದಲ್ಲಿ ಸಿಕ್ಕ ಬೆಂಬಲವು ಹೆಚ್ಚಿನದಾಗಿತ್ತು. ಎನ್‌ಟಿಆರ್ ಇದೇ ಜನೋನ್ಮಾದದ ಅಲೆಯೇರಿ ಪ್ರಧಾನಿಯಾಗುವ ಕನಸು ಕಂಡರು. ಹಾಗಾಗಿಯೇ ನಂತರದಲ್ಲಿ ಸ್ಥಾಪನೆಯಾದ ರಾಷ್ಟ್ರೀಯರಂಗಕ್ಕೆ ಉಳಿದ ಪಕ್ಷಗಳು ಅವರನ್ನೇ ಅಧ್ಯಕ್ಷರನ್ನಾಗಿ ಆರಿಸಿಕೊಂಡಿದ್ದರು. ಆದರೆ ತವರಿನಲ್ಲೇ ರಾಮರಾವ್ ಕುಸಿದದ್ದರಿಂದ, 1989ರಲ್ಲಾಗಲೀ 1996ರಲ್ಲಾಗಲೀ ಅವರು ಪ್ರಧಾನಿ ಪಟ್ಟದ ಹತ್ತಿರಕ್ಕೂ ಬರಲಿಲ್ಲ. ಅದೇನೇ ಇರಲಿ, ಇಂತಹ ಉನ್ಮಾದವನ್ನು ಆಂಧ್ರಪ್ರದೇಶವು ಕಂಡಿದ್ದಂತೂ ನಿಜ. ಮತ್ತೆ ವೈ.ಎಸ್.ರಾಜಶೇಖರರೆಡ್ಡಿ ಹೆಲಿಕಾಪ್ಟರ್ ದುರಂತದಲ್ಲಿ ಸತ್ತಾಗ ಆಂಧ್ರದಲ್ಲಿ ಕೆಲವರು ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಉನ್ಮಾದ ಸೃಷ್ಟಿಯಾಗಿತ್ತು. (ಈ ಆತ್ಮಹತ್ಯೆಗಳ ಸಂಖ್ಯೆಯನ್ನು ವಿಪರೀತ ಹೆಚ್ಚಿಸಿ ಕೃತಕವಾಗಿ ಇಮೇಜ್ ವೃದ್ಧಿಸಲು ಪ್ರಯತ್ನಿಸಿದ್ದು ಬೇರೆ ಮಾತು).

ಈ ಪ್ರಮಾಣದ ಜನೋನ್ಮಾದವು ಬೇರೆ ಇನ್ನಾವ ರಾಜ್ಯಗಳಲ್ಲೂ ಇಲ್ಲದಷ್ಟು ತಮಿಳುನಾಡು ಮತ್ತು ಆಂಧ್ರದಲ್ಲೇ ಇದೆ. ಅಲ್ಲಿನ ರಾಜಕಾರಣವು ಸಿನಿಮೀಯವಾಗಿರುವುದು, ಸಿನಿಮಾಕ್ಕೂ ರಾಜಕಾರಣಕ್ಕೂ ಬಹಳ ಹತ್ತಿರದ ನಂಟಿರುವುದು, ಭಾಷೆಯ ಆಧಾರದಲ್ಲಿ ಜನರ ಭಾವನೆಗಳು ಮಿಡಿಯುವುದು, ರಾಷ್ಟ್ರೀಯತಾ ಪ್ರಜ್ಞೆಯು ಬೇರೆ ಕಡೆ ಹೆಚ್ಚು ಅಲ್ಲಿ ಕಂಡುಬರುವುದು ಇವೆಲ್ಲಾ ಕಾರಣ ಇರಬಹುದು. ಅವೇನೇ ಇದ್ದರೂ, ತಮ್ಮ ನಾಯಕ ಮಾಡಿದರೂ ಅದೇ ಸರಿ ಎಂದು ಕುರುಡಾಗಿ ಭಾವಿಸುವಷ್ಟು ಅಭಿಮಾನ, ಭಕ್ತಿ, ಉನ್ಮಾದವು ಪ್ರಜಾತ ದೃಷ್ಟಿಯಿಂದ ಮಾರಕ ಎನ್ನದೇ ವಿಧಿಯಿಲ್ಲ.

ಜಾತಿ, ಪ್ರಾದೇಶಿಕತೆಯ ಆಚೆಗೆ ಇನ್ನಾವ ಹಿತಾಸ ಜನರನ್ನು ಈ ರೀತಿ ಪ್ರೇರೇಪಿಸುತ್ತವೆ ಎಂಬುದೂ ಅಧ ಯೋಗ್ಯವಾದ ಅಂಶವಾಗಿದೆ. ಕೆಲವು ಸಾರಿ ಐಡೆಂಟಿಟಿಯಾಗಿ ಪರಿವರ್ತನೆ ಹೊಂದಿರುವ ಸಾಧ್ಯತೆ ಇದೆ. ಭಾರತದಲ್ಲಿ ಸೈದ್ಧಾಂತಿಕವಾಗಿ ವಿರುದ್ಧ ದಿಕ್ಕಿನಲ್ಲಿ ಎಡ ಪಕ್ಷಗಳು ಮತ್ತು ಬಿಜೆಪಿಯನ್ನು ಹೊರತುಪಡಿ ಹೆಚ್ಚು ಕಡಿಮೆ ಇನ್ನೆಲ್ಲಾ ಪಕ್ಷಗಳು ಇಂದು ನಾ ಅಥವಾ ನಾಯಕಿ ಕೇಂದ್ರಿತವಾಗಿವೆ. ಹೆಚ್ಚುಕಡಿಮೆ ಪಕ್ಷಗಳು ನಿರ್ದಿಷ್ಟ ಕುಟುಂಬಗಳ ಖಾಸಗಿ ಆಸ್ತಿಗಳ ನಾಯಕಿಯರು ಮದುವೆಯಾಗದೇ, ಅವರ ಅ ವಾರಸುದಾರರೂ ಇಲ್ಲದೇ ಇರುವ ಸಂದರ್ಭದಲ್ಲಿ ಅವು ಯಾವ ರೂಪ ಪಡೆದುಕೊಳ್ಳುತ್ತವೆ ಎಂ ಕುತೂಹಲಕಾರಿಯಾಗಿವೆ. ಅಷ್ಟನ್ನು ಬಿಟ್ಟರೆ, ಪ್ರಜಾತ ಸೋಂಕೇ ಇಲ್ಲದಂತೆ ಕೆಲಸ ಮಾಡುವ ಇಂತಹ ವ್ಯಕ್ತಿ ರಾಜಕೀಯ ಪಕ್ಷಗಳು ನಿಜವಾದ ಅರ್ಥ ಪ್ರಜಾಪ್ರಭುತ್ವವನ್ನು ಹೇಗೆ ತಂದಾವು?

ಪ್ರಜಾಪ್ರಭುತ್ವದ ರಾಜಕಾರಣ ಹೀಗಿರುವುದರಿಂ ಮೈಸೂರು ದಸರಾದ ಹೆಸರಿನಲ್ಲಿ ರಾಜಪ್ರಭುತ್ವವನ್ನು ರೀತಿಯಲ್ಲಿ ಮೆರೆಸುವ ಆಚರಣೆಗಳು ಯಾರಿಗೂ ಅ ಎಂದು ಅನಿಸುತ್ತಲೇ ಇಲ್ಲ. ಇತರ ಸಾಂಕೇತಿಕ ಆಚ ಹಾಗಿರಲಿ, ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ನಡೆದ ರಾಜನ ಖಾಸಗಿ ದರ್ಬಾರ್‌ನ ಚಿತ್ರವುಳ್ಳ ಪೋ ಕವರ್‌ಅನ್ನು ಅಂಚೆ ಇಲಾಖೆಯೇ ಬಿಡುಗಡೆ ಮಾ ಮಾಜಿ ರಾಜನ ಮಗ (ಪ್ರಜಾಪ್ರಭುತ್ವ ಬಂದ ಶ್ರೀಕಂಠದತ್ತ ಒಡೆಯರ್ ರಾಜನಾಗು ಸಾಧ್ಯವಿರಲಿಲ್ಲವಾದ್ದರಿಂದ)ನ ಹೆಂಡತಿಯ ಕೈಲೇ ಇಲಾ ಅದನ್ನು ಬಿಡುಗಡೆ ಮಾಡಿಸಿತು. ಈ ಖಾಸಗಿ ದರ್ಬಾ ಸರ್ಕಾರೀ ಸಂಸ್ಥೆಯೊಂದು ಒಪ್ಪುವುದು ಹೇಗೆ ಸಾಧ್ಯವಾಗಿದೆ. ಏಕೆಂದರೆ ಆಧುನಿಕ ಪ್ರಜಾತಂ ಪಕ್ಷಗಳು ಖಾಸಗಿ ಆಸ್ತಿಗಳಾಗಿವೆ, ಖಾಸಗಿ ದರ್ಬಾ ನಡೆಯುತ್ತಿವೆ. ಪಕ್ಷಗಳ ನಾಯಕತ್ವ ವಂಶಪಾರಂಪರ್ಯ ಹರಿದುಬರುತ್ತಿದೆ ಹಾಗೂ ಅದನ್ನು ಜನರು ಒಪ್ಪು ಅಂತಹ ನಾಯಕರ ಪರವಾಗಿ ಬೀದಿಯಲ್ಲಿ ಪ್ರಾಣವನ್ನೇ ಪಣಕ್ಕೊಡ್ಡಿ ಘರ್ಷಣೆಗಿಳಿಯ ಆತ್ಮಹತ್ಯೆಗಳನ್ನೂ ಮಾಡಿಕೊಳ್ಳುತ್ತಾರೆ.

ಇಂತಹ ಜನೋನ್ಮಾದವು ಜನತ ಅಪಾಯಕಾರಿಯೇ. ಈ ರೀತಿಯ ಉನ್ಮಾ ದೇಶಾದ್ಯಂತ ಉಂಟುಮಾಡಲು ಈಗ ಇನ್ನೊಬ್ಬ ಜ ಯತ್ನಿಸುತ್ತಿದ್ದಾನೆ. ಆತನ ಹೆಸರು ನರೇಂದ್ರ ಮೋದಿ ವಂಶಪಾರಂಪರ್ಯ ರಾಜಕಾರಣವನ್ನು ನಡೆಸುವುದಿ ಆತ ಹೇಳಲು ಕಾರಣವಿದೆ. ಆತನಿಗೆ ಆ ವಾರಸುದಾರರಿಲ್ಲ. ಮೇಲೆ ಹೇಳಿದಂತೆ ದೇಶದ ರಾಜ್ಯಗಳಲ್ಲಿ ಪ್ರಬಲರಾಗಿರುವ ನಾಯಕಿಯರಿಗೂ ವಾರಸುದಾರರಿಲ್ಲ. ಆದರೂ ಉನ್ಮಾದವನ್ನು ಉಂಟ ಅದರ ಅಲೆಯೇರಿ ರಾಜಕಾರಣ ಮಾಡುವ ವಿದ ಕೊನೆಗೊಳ್ಳದಿದ್ದರೆ ಪ್ರಜಾತಂತ್ರಕ್ಕೆ ಭವಿಷ್ಯವಿಲ್ಲ.

ಸುಬ್ರಮಣ್ಯಂ ಸ್ವಾಮಿ ಎಂಬ ರಾಜಕೀಯ ರಗಳೆ ಮಾರಿ

ಇವತ್ತು ತಮಿಳುನಾಡಿನ ದೊರೆಸಾನಿ ...ಲಲಿತಾ ಪರಪ್ಪನ ಅಗ್ರಹಾರದಲ್ಲಿ ಕಂಬ ...ಸುತ್ತಿರುವುದಕ್ಕೆ ಮೂಲ ಕಾರಣಪುರುಷನಾದವನು ...ಮಣ್ಯಂ ಸ್ವಾಮಿ ಎಂಬ ಹುಚ್ಚು ರಾಜಕಾರಣಿ!

...ಜೀವತಾವಧಿ ಉದ್ದಕ್ಕೂ ಅನುಕೂಲ ಸಿಂಧು ...ಕಾರಣವನ್ನೇ ಮಾಡಿಕೊಂಡು ಬಂದ ಈ ಸ್ವಾಮಿ ...ವ ಸಿದ್ಧಾಂತಕ್ಕಾಗಲಿ, ರಾಜಕೀಯ ಪಕ್ಷಕ್ಕಾಗಲಿ, ...ಯಕರಿಗಾಗಲಿ, ಕೊನೆಗೆ ತನ್ನ ಸ್ವಂತ ...ಕೆಗಳಿಗಾಗಲಿ ಎಂದೂ ಬದ್ಧನಾಗಿ ...ಮುಕೊಂಡವನಲ್ಲ. ಆದರೂ ಈತನಿಂದ ಭಾರತಕ್ಕೆ ...ವಷ್ಟು ಒಳ್ಳೆಯದಾಗಿರುವುದನ್ನೂ ...ಕರಿಸಲಾಗುವುದಿಲ್ಲ. ಒಂದು ರೀತಿಯಲ್ಲಿ ಈತ ...ಲಿಟಿಕಲ್ ಗ್ಯಾಡ್ ಫ್ಲೈ (ರಾಜಕೀಯ ರಗಳೆಮಾರಿ)!

...ಸ್ವಾಮಿ ಅತಿ ಬುದ್ಧಿವಂತ. ಎಷ್ಟು ಬುದ್ಧಿವಂತ ...ರೆ ಅದು ಇತರರಿಗೆ ಕಷ್ಟ ಕೊಟ್ಟಷ್ಟೇ ಸ್ವತಃ ...ಗೂ ಹಲವು ಬಾರಿ ಕಷ್ಟ ಕೊಟ್ಟದ್ದೂ

...ಮೂಲತಃ ಅರ್ಥಶಾಸ್ತ್ರಜ್ಞನಾದ ಸ್ವಾಮಿ ...ನೊಂದು ಕಾಲದಲ್ಲಿ ಪ್ರತಿಷ್ಠಿತ ...ರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಮತ್ತು ...ಲಿಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ...ಟೆಕ್ನಾಲಜಿ (ಐಐಟಿ) ಸಂಸ್ಥೆಯಲ್ಲಿ ...ಫೆಸರ್ ಆಗಿದ್ದ. 70ರ ದಶಕದಲ್ಲಿ ...ಕೀಯದಲ್ಲಿ ಆಸಕ್ತಿ ಬೆಳೆಸಿಕೊಂಡ ಸ್ವಾಮಿ ...ಭದಲ್ಲಿ ಸರ್ವೋದಯ ಪಕ್ಷದಲ್ಲಿ ...ಮನಾಗಿದ್ದ. ಆಗಿನ ಪ್ರಧಾನಿ ಇಂದಿರಾ ...ಧಿಯವರ ಸಮಾಜವಾದಿ ಆರ್ಥಿಕ ...ಂತವನ್ನು ವಿರೋಧಿಸಿದ ಸ್ವಾಮಿ ನವ ...ರವಾದಿ ಆರ್ಥಿಕ ನೀತಿಯನ್ನು ಸರ್ಕಾರ ...ಸರಿಸಬೇಕೆಂದು ಒತ್ತಾಯಿಸಲಾರಂಭಿಸಿದ. ...ಯನ್ನು "ಅಪಕ್ವ ನಿಲುವುಗಳನ್ನು ...ದಿರುವ ಸಾಂಟಾಕ್ಲಾಸ್" ಎಂದು ಲೇವಡಿ ...ದ ಇಂದಿರಾ ಗಾಂಧಿ ಇವನನ್ನು ಐಐಟಿ ...ಯಿಂದಲೇ ವಜಾ ಮಾಡಿದರು. ಆಗ ...ರಾ ವಿರುದ್ಧ ರೊಚ್ಚಿಗೆದ್ದ ಸ್ವಾಮಿ ಆಕೆಯ ...ದ್ಧ ನ್ಯಾಯಾಲಯದ ಮೊರೆ ಹೋದ. ...ಇಂದಿರಾ ಗಾಂಧಿಯನ್ನು ವಿರೋಧಿಸಿದ ...ಮನ್ನು ಮೆಚ್ಚಿ ಬಿಜೆಪಿ (ಆಗಿನ್ನೂ ಅದು ...ಂಘವಾಗಿತ್ತು) ಸ್ವಾಮಿಗೆ ರಾಜ್ಯಸಭೆಯಲ್ಲಿ ...ನೀಡಿತು.

...ಇಂದಿರಾ ಗಾಂಧಿ ವಿರುದ್ಧ ಇಷ್ಟು ಧೈರ್ಯ ...ಸಿದ್ದ ಇದೇ ಸ್ವಾಮಿ ತುರ್ತುಪರಿಸ್ಥಿತಿ ...ಗೆ ಬಂದಾಗ ಇಲ್ಲೇ ಇದ್ದು ಹೋರಾಡುವ ...ಾಗಿ ಅಮೆರಿಕಕ್ಕೆ ಓಡಿ ಹೋದ!

...ರ್ತುಪರಿಸ್ಥಿತಿ ಮುಗಿದ ನಂತರ ಭಾರತಕ್ಕೆ ...ಬಂದ ಸ್ವಾಮಿ ಜನತಾ ಪಕ್ಷದ ಜನನದಲ್ಲಿ ...ಪಾತ್ರವಹಿಸಿದ. 1977ರಲ್ಲಿ ಕೇಂದ್ರದಲ್ಲಿ ...ಪಕ್ಷ ಅಧಿಕಾರ ಹಿಡಿದು ಮೊರಾರ್ಜಿ ...ಯಿ ಪ್ರಧಾನಿ ಆದರು. ತಮ್ಮ ಪಕ್ಷದ ...ನಲ್ಲಿ ಸ್ವಾಮಿಯ ಪಾತ್ರವೂ ಇದ್ದಿದ್ದರಿಂದ ...ನ್ನೂ ತನ್ನ ಮಂತ್ರಿ ಮಂಡಲಕ್ಕೆ ...ಕೊಳ್ಳಬೇಕು ಎಂಬುದು ದೇಸಾಯಿ ಅವರ ...ಮಾಗಿತ್ತು. ಆದರೆ ಅಷ್ಟು ಹೊತ್ತಿಗೆ ಈ ...ಯ ಅಸಲಿಯತ್ತನ್ನು ಅರ್ಥ ಮಾಡಿಕೊಂಡಿದ್ದ ...ಘದ ನಾಯಕ ಅಟಲ್ ಬಿಹಾರಿ ವಾಜಪೇಯಿ ...ದು ಯಾವ ಕಾರಣಕ್ಕೂ ಸ್ವಾಮಿಗೆ ಸಚಿವ ಸ್ಥಾನ ...ಕೊಡದು ಎಂದು ಪಟ್ಟು ಹಿಡಿದರು. ಅಷ್ಟೇ ...1980ರಲ್ಲಿ ಬಿಜೆಪಿ ಅಸ್ತಿತ್ವವನ್ನು ಪಡೆದಾಗ ...ಆ ಪಕ್ಷಕ್ಕೆ ಎಂಟ್ರಿ ಪಡೆಯಲು ನೋಡಿದ. ...ವಾಜಪೇಯಿ ಆತ ಬಿಜೆಪಿ ಸೇರದಂತೆ ...ಕೊಂಡಿದ್ದರು.

...ಗೆ ಅಧಿಕಾರ ಮತ್ತು ಸ್ಥಾನಮಾನವನ್ನು ...ಯಿ ನಿರಾಕರಿಸಿದ್ದರಿಂದ ಸ್ವಾಮಿ ವಾಜಪೇಯಿ ...ವೂ ತಿರುಗಿಬಿದ್ದ. "ವಾಜಪೇಯಿ ಎಂದೂ ...ಸಂಗ್ರಾಮದಲ್ಲಿ ಭಾಗವಹಿಸಲಿಲ್ಲ, ಆತ ...ರ ಮಾಹಿತಿದಾರನಾಗಿದ್ದ" ಎಂದೆಲ್ಲ ...ಬಿಸಿದನಲ್ಲದೆ "ವಾಜಪೇಯಿ ಓರ್ವ ಕುಡುಕ, ...ಕ" ಎಂದೂ ದೂಷಿಸಿದ್ದ. ವಾಜಪೇಯಿ ...ಸುತ್ತಿದ್ದ ಬಿಜೆಪಿ ಪಕ್ಷದ ಮೇಲೂ ಸ್ವಾಮಿ ...ವಾರಕ್ಕೆ ನಿಂತ. ಸಂಘಪರಿವಾರದವರು ...ಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿದಾಗ ಸ್ವಾಮಿ ...ತ್ವವಾದಿಗಳನ್ನು ಖಂಡಿಸಿದ್ದ. "ಆರೆಸ್ಸೆಸ್ ಎಂಬ ...ಹಿಂದೂಗಳ ಪರ ಇಲ್ಲ, ಬದಲಾಗಿ ಅದು ...ರ ವಿರುದ್ಧ ಇರುವ ಸಂಘಟನೆ. ಆರೆಸ್ಸೆಸ್ ...ಎಂಬ ಪದವನ್ನೇ ಅಸಹ್ಯಗೊಳಿಸಿದೆ"

ಎಂದೆಲ್ಲಾ ಸ್ವಾಮಿ ಭಾಷಣ ಬಿಗಿದಿದ್ದ.

1998ರಲ್ಲಿ ಎಐಎಡಿಎಂಕೆ ಸಹಕಾರದೊಂದಿಗೆ ದೆಹಲಿಯಲ್ಲಿ ಸರ್ಕಾರ ಸ್ಥಾಪಿಸಲು ಬಿಜೆಪಿ ಪ್ರಯತ್ನಿಸುತ್ತಿತ್ತು. ಆಗ ಈ ಸ್ವಾಮಿ ಜಯಲಲಿತಾಳಿಗೆ ತುಂಬಾ ಹತ್ತಿರದವನಾಗಿದ್ದ. ಬಿಜೆಪಿ ಮತ್ತು ಎಐಎಡಿಎಂಕೆ ನಡುವೆ ಸಂಧಾನಕ್ಕೆ ಜಯಲಲಿತಾ ಇದೇ ಸ್ವಾಮಿಯನ್ನು ನಿಯೋಜಿಸಿದ್ದಳು. ಆಗ ಸ್ವಾಮಿ ವಾಜಪೇಯಿಗೆ ವಿಧಿಸಿದ ಮೊದಲ ಷರತ್ತು ಬಿಜೆಪಿ ಕೋಮುವಾದಿ ರಾಜಕಾರಣವನ್ನು ಮಾಡಕೂಡದೆಂದಲ್ಲ, ಬದಲಾಗಿ ತನಗೆ ಹಣಕಾಸು ಸಚಿವ ಸ್ಥಾನವನ್ನು ಕೊಡಬೇಕೆಂದು! ಅದಕ್ಕೆ ವಾಜಪೇಯಿ ಒಪ್ಪದಿದ್ದಾಗ ಸ್ವಾಮಿ ಬೆಂಬಲ ಕೊಡುವುದಿಲ್ಲವೆಂದು ಹೇಳಿದ. ಹೀಗೆ ಸ್ವಾಮಿಯ ಸ್ವಾರ್ಥಕ್ಕೆ ವಾಜಪೇಯಿಯ ಮೊದಲ ಅಧಿಕಾರಾವಧಿ ಪತನಗೊಂಡಿತ್ತು.

ಹೊಸ ಶತಮಾನ ಪ್ರಾರಂಭವಾಗುವ ಹೊತ್ತಿಗೆ



ಜನತಾ ಪಕ್ಷ ಹಲವಾರು ಕವಲುಗಳಾಗಿ ಛಿದ್ರವಾಗಿ ಜಾತ್ಯತೀತ ಜನತಾದಳ, ಸಂಯುಕ್ತ ಜನತಾದಳ, ಸಮಾಜವಾದಿ ಪಕ್ಷ ಇತ್ಯಾದಿ ರೂಪಗಳನ್ನು ಪಡೆದು ಆ ಕವಲುಗಳೇ ಹಲವು ರಾಜ್ಯಗಳಲ್ಲಿ ಪ್ರಾಮುಖ್ಯತೆಗೆ ಬಂದಿದ್ದವು. ಆದರೆ ಸ್ವಾಮಿ ಅಧ್ಯಕ್ಷನಾಗಿದ್ದ ಜನತಾಪಕ್ಷ ಎಂಬ ಪಳೆಯುಳಿಕೆ ಎಲ್ಲಾ ಕಡೆ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿತ್ತು. ಬಾಯಿಬಡುಕ ಎಂದೇ ಖ್ಯಾತಿ ಪಡೆದಿದ್ದ ಸ್ವಾಮಿಯೂ ಎಲ್ಲರ ವೈರತ್ವ ಕಟ್ಟಿಕೊಂಡಿದ್ದರಿಂದ ಎಲ್ಲರೂ ಅವನನ್ನು ದೂರ ಇಡುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸ್ವತಃ ಜಯಲಲಿತಾ ವಿರುದ್ಧವೂ ತಿರುಗಿ ಬಿದ್ದಿದ್ದ ಸ್ವಾಮಿ ಆಕೆಯ ವಿರುದ್ಧವೇ ನ್ಯಾಯಾಲಯದಲ್ಲಿ ದೂರನ್ನು ದಾಖಲಿಸಿದ್ದ. ಅದೇ ಈಗ ಆಕೆಯನ್ನು ಜೈಲುಪಾಲಾಗಿಸಿದೆ. ಅಂದಹಾಗೆ ಸ್ವಾಮಿಯಿಂದಾಗಿ ತಮ್ಮ ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡ ಪ್ರಥಮ ವ್ಯಕ್ತಿ ಜಯಲಲಿತಾ ಅಲ್ಲ, ಬದಲಾಗಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ. ಹೆಗಡೆ ತಮ್ಮ ರಾಜಕೀಯ ವಿರೋಧಿಗಳ ಮತ್ತು ಟೀಕಾಕಾರರ ಟೆಲಿಫೋನ್‌ಗಳನ್ನು ಕದ್ದಾಲಿಸುತ್ತಿದ್ದಾರೆ ಎಂದು ಮೊದಲು ಆರೋಪಿಸಿದ್ದು ಇದೇ ಸ್ವಾಮಿ. ಆಗ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಇದೇ ಸ್ವಾಮಿಯ ಮಿತ್ರನಾಗಿದ್ದರಲ್ಲದೆ ಅವರೂ ಜನತಾ ಪರಿವಾರವನ್ನು ಮಟ್ಟಹಾಕಲು ಅವಕಾಶಗಳಿಗಾಗಿ ಕಾಯುತ್ತಿದ್ದರಿಂದ ಕೇಂದ್ರ ಸರ್ಕಾರ ಹೆಗಡೆ ಕದ್ದಾಲಿಸುತ್ತಿದ್ದ ಎಲ್ಲಾ ಜನರ ಪಟ್ಟಿಯನ್ನು ಬಿಡುಗಡೆ ಮಾಡಿತ್ತು. (ಆ ಪಟ್ಟಿಯಲ್ಲಿ ಪಿ.ಲಂಕೇಶರ ಹೆಸರೂ ಇತ್ತು!). ಇದು ದೊಡ್ಡ ಹಗರಣವಾಗಿದ್ದರಿಂದ ಹೆಗಡೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿತ್ತು.


2004ರ ತನಕ ಸ್ವಾಮಿ ಹಿಂದೂತ್ವವಾದದ ಕಟ್ಟಾ ವಿರೋಧಿಯಾಗಿದ್ದ. ಆದರೆ ಯಾವಾಗ ಕೊಲೆ ಆರೋಪದ ಮೇಲೆ 2004ರಲ್ಲಿ ಕಂಚಿಯ ಜಯೇಂದ್ರ ಸರಸ್ವತಿ ಸ್ವಾಮಿಯನ್ನು ಬಂಧಿಸಲಾಯಿತೋ ಆಗ ಸ್ವಾಮಿ ಕಟ್ಟಾ ಹಿಂದೂತ್ವವಾದಿಯಾಗಿ ಮಾರ್ಪಾಡುಗೊಂಡ. ಆತನ ಪ್ರಕಾರ ಜಯೇಂದ್ರ ಸ್ವಾಮಿಯನ್ನು ಬಂಧಿಸಿದ್ದು ಹಿಂದೂ ಧರ್ಮದ ಮೇಲೆ ಮಾಡಿದ ದಾಳಿಯಾಗಿತ್ತು. ಆಗ ಆತ ಕೇವಲ ಹಿಂದೂತ್ವವಾದದ ಪ್ರತಿಪಾದಕನಾಗಲಿಲ್ಲ, ಅದರ ಜೊತೆಗೆ ಕಂಚಿ ಸ್ವಾಮಿಯ ಬಂಧನದ ಹಿಂದೆ ಸೋನಿಯಾ ಗಾಂಧಿಯ ಕೈವಾಡವಿದೆ ಎಂದು ಆರೋಪಿಸಿ ಆಕೆಯ ವಿರುದ್ಧವೂ ತಿರುಗಿ ಬಿದ್ದ.

ಹೀಗೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ವಿರುದ್ಧ ಸ್ವಾಮಿ ತಿರುಗಿ ಬಿದ್ದಿದ್ದರಿಂದ ಹಲವು ಒಳ್ಳೆಯ ಪರಿಣಾಮಗಳಾದವು. ಅವುಗಳಲ್ಲಿ ಒಂದು 2ಜಿ ಹಗರಣದಲ್ಲಿ ಎ.ರಾಜಾ ಜೈಲು ಪಾಲಾಗಿದ್ದು, ಎರಡನೆಯದು ಅದೇ ಹಗರಣದಲ್ಲಿ ಪಿ.ಚಿದಂಬರಂ ಹೆಸರನ್ನೂ ಸುಪ್ರೀಂಕೋರ್ಟ್ ಸೇರಿಸುವಂತೆ ಮಾಡಿದ್ದು.

ಒಂದೆಡೆ ಸ್ವಾಮಿಯ ಜನತಾ ಪಕ್ಷ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲದಂತಾಗಿತ್ತು. ಇನ್ನೊಂದೆಡೆ ಸ್ವಾಮಿ ಜಯಲಲಿತಾಳಿಂದ ಹಿಡಿದು ಸೋನಿಯಾ ಗಾಂಧಿ ತನಕ ಎಲ್ಲರ ವೈರತ್ವವನ್ನು ಕಟ್ಟಿಕೊಂಡಿದ್ದ. ಮತ್ತೊಂದೆಡೆ ಮುಲಾಯಂ, ಮಾಯಾವತಿ, ಮಮತಾ, ನಿತೀಶ್ ಕುಮಾರ್, ದೇವೇಗೌಡ ತರಹದ ನಾಯಕರು ಸ್ವಾಮಿಯನ್ನು ತಮ್ಮ ಹತ್ತಿರ ಬಿಟ್ಟುಕೊಳ್ಳದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಗ ಸ್ವಾಮಿಗೆ ಉಳಿದದ್ದು ಬಿಜೆಪಿ ಮಾತ್ರ. ಹೇಗೂ ಅಷ್ಟು ಹೊತ್ತಿಗೆ ಆತನನ್ನು ಸತತವಾಗಿ ವಿರೋಧಿಸಿಕೊಂಡು ಬಂದಿದ್ದ ವಾಜಪೇಯಿ ನೇಪಥ್ಯಕ್ಕೆ ಸರಿದಾಗಿತ್ತು. ಮೋದಿಯ ಯುಗ ಪ್ರಾರಂಭವಾಗಿತ್ತು. ಅನ್ನ ಹಳಸಿತ್ತು, ನಾಯಿ ಹಸಿದಿತ್ತು ಎಂಬಂತೆ ಸ್ವಾಮಿಗೆ ಬಿಜೆಪಿಯ ಆಶ್ರಯ ಎಷ್ಟು ಅನಿವಾರ್ಯವಿತ್ತೋ, ಕಾಂಗ್ರೆಸ್ ಮತ್ತು ಸೋನಿಯಾ ವಿರುದ್ಧ ಕೆಂಡಕಾರುತ್ತಿದ್ದ ಸ್ವಾಮಿಯೂ ಬಿಜೆಪಿಗೆ ಅಷ್ಟೇ ಅಗತ್ಯವಾಗಿದ್ದ.

ಆದರೂ ಸ್ವಾಮಿ ಒಂದು ತರಹದ ಡೇಂಜರಸ್ ಆಸಾಮಿ ಎಂದೇ ಆತನನ್ನು ಬಿಜೆಪಿಯ ನಾಯಕರೂ ಗುಮಾನಿಯಿಂದಲೇ ನೋಡುತ್ತಿದ್ದರು. ಆಗ ಅವರನ್ನು ಓಲೈಸಿ ಬಿಜೆಪಿಗೆ ಎಂಟ್ರಿ ಪಡೆಯಲು ಸ್ವಾಮಿ ಹಲವಾರು ಕಸರತ್ತುಗಳನ್ನು ಆರಂಭಿಸಿದ. ಅವುಗಳಲ್ಲಿ ಒಂದು ಆತ ಡಿಎನ್‌ಎ ಎಂಬ ಪತ್ರಿಕೆಗೆ ಬರೆದ ಲೇಖನ. 'ಇಸ್ಲಾಮಿಕ್ ಭಯೋತ್ಪಾದನೆಯನ್ನು ತೊಡೆದುಹಾಕುವುದು ಹೇಗೆ' ಎಂಬ ಆ ಲೇಖನದಲ್ಲಿ ಸ್ವಾಮಿ ಬರೆದ ಹಲವು ಸಾಲುಗಳು ಹೀಗಿದ್ದವು: "ಇಂಡಿಯಾ ದೇಶವನ್ನು ಹಿಂದೂ ರಾಷ್ಟ್ರ ಎಂದು ಘೋಷಿಸಬೇಕು. ಈ ಹಿಂದೂ ರಾಷ್ಟ್ರದಲ್ಲಿ ತಮ್ಮ ಪೂರ್ವಿಕರು ಹಿಂದೂಗಳಾಗಿದ್ದರು ಎಂದು ಹೆಮ್ಮೆಯಿಂದ ಒಪ್ಪಿಕೊಂಡ ಹಿಂದೂಯೇತರರಿಗೆ ಮಾತ್ರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕು ಇರತಕ್ಕದ್ದು. ಸಂಸ್ಕೃತ ಕಲಿಯುವುದನ್ನು ಮತ್ತು ವಂದೇ ಮಾತರಂ ಹಾಡುವುದನ್ನು ಕಡ್ಡಾಯಗೊಳಿಸಬೇಕು. ಕಾಶಿಯಲ್ಲಿರುವ ಮಸೀದಿಯನ್ನಲ್ಲದೆ ಇತರೆ ಜಾಗಗಳಲ್ಲಿರುವ 300 ಮಸೀದಿಗಳನ್ನು ಕೆಡವುವುದರ ಮೂಲಕ ಮುಸಲ್ಮಾನರ ವಿರುದ್ಧ ಸೇಡು ತೀರಿಸಿಕೊಳ್ಳಬೇಕು. ಹಿಂದೂ ಧರ್ಮದಿಂದ ಬೇರೆ ಯಾವುದೇ ಧರ್ಮಕ್ಕೆ ಮತಾಂತರಗೊಳ್ಳದಂತೆ ರಾಷ್ಟ್ರೀಯ ಕಾನೂನನ್ನು ಜಾರಿಗೆ ತರಬೇಕು." ಸಹಜವಾಗಿಯೇ ಆಗ ಸ್ವಾಮಿ ವಿರುದ್ಧ ಪ್ರತಿರೋಧ ವ್ಯಕ್ತವಾಗಿತ್ತು. ಇದರ ಪರಿಣಾಮವಾಗಿ ಈತನನ್ನು ಅತಿಥಿ ಪ್ರೊಫೆಸರ್ ಆಗಿ ನೇಮಿಸಿಕೊಂಡಿದ್ದ ಹಾರ್ವರ್ಡ್ ವಿಶ್ವವಿದ್ಯಾಲಯ ಸ್ವಾಮಿಯನ್ನು ಆ ಹುದ್ದೆಯಿಂದ ವಜಾಗೊಳಿಸಿತ್ತು.

ಕಂಡಹಾಗೆ



• ಗೌರಿ ಲಂಕೇಶ್


editorlankesh@gmail.com

ಆದರೇನಂತೆ, ಆ ಲೇಖನದಿಂದಾಗಿ ಸ್ವಾಮಿ ಸಂಘಪರಿವಾರದ ನಾಯಕರಿಗೆ ಅಚ್ಚುಮೆಚ್ಚಿನ ವ್ಯಕ್ತಿಯಾದ. ಕಳೆದ ವರ್ಷ ಬಿಜೆಪಿ ಕೊನೆಗೂ ಈ 'ವೀರ ಹಿಂದೂತ್ವವಾದಿ'ಗೆ ತನ್ನ ಬಾಗಿಲನ್ನು ತೆರೆಯಿತು. ಜನತಾ ಪಕ್ಷದ ನಾಯಕನೂ, ಏಕೈಕ ಸದಸ್ಯನೂ ಆಗಿದ್ದ ಸ್ವಾಮಿ ತನ್ನ 'ಬೃಹತ್' ಪಕ್ಷವನ್ನು ಬಿಜೆಪಿಯಲ್ಲಿ ವಿಲೀನಗೊಳಿಸಿದನಲ್ಲದೆ ತಾನೂ ಬಿಜೆಪಿಯ 'ನಾಯಕ'ನಾದ. ಮೋದಿಯ ಆರಾಧಕರಲ್ಲಿ ಪ್ರಮುಖನಾದ. ಕಳೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಸ್ಪರ್ಧಿಸಲು ಸ್ವಾಮಿ ಬಯಸಿದ್ದರೂ ಆತನಿಗೆ ಟಿಕೆಟ್ ನಿರಾಕರಿಸಿದ ಬಿಜೆಪಿ ಆತನನ್ನು ತನ್ನ ಪ್ರಚಾರಾಂದೋಲನದಲ್ಲಿ ಉಪಯೋಗಿಸಿತ್ತು. ಎಲ್ಲೆಡೆ ಮೋದಿ ಭಜನೆಯನ್ನು ಮತ್ತು ಸೋನಿಯಾ ಗಾಂಧಿಯ ಮಾನಹಾನಿಯನ್ನೂ ಯಶಸ್ವಿಯಾಗಿ ಮಾಡಿದ ಸ್ವಾಮಿ ಬಿಜೆಪಿಯ ಗೆಲುವಿಗೆ ನೆರವಾದ ಎಂಬುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಆದರೆ ಈಗಲೂ ಈ ಸ್ವಾಮಿಯ 'ಸ್ವಾಮಿನಿಷ್ಠೆ' ಬಗ್ಗೆ ಚೆಡ್ಡಿಗಳಿಗೆ ಅನುಮಾನಗಳಿರಬೇಕು. ಅದಕ್ಕೇ ಆತನಿಗೆ ಯಾವ ಸ್ಥಾನಮಾನವನ್ನೂ ಮೋದಿ ಸರ್ಕಾರವಾಗಲಿ, ಬಿಜೆಪಿಯಾಗಲಿ ನೀಡಿಲ್ಲ. ಬಾಯಿಬಡುಕನಾದ ಸ್ವಾಮಿ ಈಗ ಟಿವಿ ಮಾಧ್ಯಮಗಳಿಗೆ ತುಂಬಾ ಬೇಕಾದವನಾಗಿದ್ದಾನೆ. ಬಾಯಿ ತೆರೆದರೆ ಜಗಳಕ್ಕೆ ನಿಲ್ಲುವ ಸ್ವಾಮಿ ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಒಂದು ಅಸ್ತ್ರವಾಗಿರುವುದೂ ಆತನ ಈ 'ಬೇಡಿಕೆ'ಗೆ ಕಾರಣವಿರಲೂಬಹುದು.

ಭ್ರಷ್ಟಾಚಾರದ ವಿರುದ್ಧ ಕಾನೂನು ಸಮರ ಸಾರಿರುವ ಸ್ವಾಮಿಯಿಂದಾಗಿ ಹಲವು ಹಗರಣಗಳು ಬಯಲಿಗೆ ಬಂದಿವೆ ನಿಜ. ಆದರೆ ಅದೇ ಸ್ವಾಮಿಯಿಂದಾಗಿ ಇವತ್ತು ಕೋಮುವಾದ ಕೂಡ ಬೆಳೆದಿರುವುದೂ ಅಷ್ಟೇ ಸತ್ಯ. ಹೀಗೆ ಒಂದೆಡೆ ಪ್ರಜಾಪ್ರಭುತ್ವವನ್ನು ಸ್ವಚ್ಛಗೊಳಿಸಲು ಹೆಣಗುತ್ತಿರುವ ಸ್ವಾಮಿ ಅದೇ ಹೊತ್ತಿನಲ್ಲಿ ಪ್ರಜಾಪ್ರಭುತ್ವದ ಬದಲಾಗಿ ಸರ್ವಾಧಿಕಾರಿ ವ್ಯವಸ್ಥೆಗೆ ಕಾರಣವಾಗುತ್ತಿರುವುದೂ ವಿಪರ್ಯಾಸವೇ ಸರಿ.

2004ರಲ್ಲಿ ಸ್ವಾಮಿ ಮದುರೈನಿಂದ ಸ್ಪರ್ಧಿಸಿದಾಗ ಕೇವಲ 12,000 ಮತಗಳನ್ನು ಪಡೆದು ನಾಲ್ಕನೆ ಸ್ಥಾನಕ್ಕೆ ದೂಡಲ್ಪಟ್ಟಿದ್ದ. ಅದಾದ ಮೇಲೆ ಆತ ಯಾವ ಚುನಾವಣೆಯಲ್ಲೂ ಸ್ಪರ್ಧಿಸಿಲ್ಲ. ಆದರೂ ಇಂದು ಫೇಸ್‌ಬುಕ್ ಮತ್ತು ಟ್ವಿಟರ್ ಜಗತ್ತಿನಲ್ಲಿ ಸ್ವಾಮಿಗೆ ಬರೋಬ್ಬರಿ 8,50,000 'ಹಿಂಬಾಲಕ'ರಿದ್ದಾರೆ! ಇದು ಏನನ್ನು ಸೂಚಿಸುತ್ತದೆ? ನಮ್ಮ ದೇಶದ ಬುದ್ಧಿವಂತರು ಸ್ವಾಮಿಯಷ್ಟೇ ಬುದ್ಧಿಹೀನರು ಎಂಬುದನ್ನೇ?!

ಒಂದಾನೊಂದು ಕಾಲದಲ್ಲಿ ಹಿಂದೂತ್ವವಾದಿಗಳನ್ನು ಮತ್ತು ಆರೆಸ್ಸೆಸ್‌ಅನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಆದರೀಗ ಅದೇ ಕೋಮುವಾದಿಗಳ ಬೆಂಬಲಿಗನಾಗಿರುವ ಸ್ವಾಮಿ ಎಂಬ ರಾಜಕೀಯ ರಗಳೆಮಾರಿಯ ವೃತ್ತಾಂತ ಮಾತ್ರವಲ್ಲ ಇದು, ಬದಲಾಗಿ ನಮ್ಮ ದೇಶದ ರಾಜಕೀಯಕ್ಕೊ ಹಿಡಿದ ಕನ್ನಡಿ ಎನ್ನಬಹುದೇ? •


ರಾಘವೇಶ್ವರ ಭಾರತಿ

ತಂಗಿ ಮಗನನ್ನು ಪೀಠಕ್ಕೇರಿಸಲು ರಂಗೀಲಾ ರಾಘವನ ಸಂಚು!

ಪತ್ರಿಕೆ ಮುದ್ರಣಕ್ಕೆ ತಯಾರಾಗುತ್ತಿದ್ದ ಹೊತ್ತಿನಲ್ಲೇ ರಂಗೀಲಾ ಸ್ವಾಮಿ ರಾಘು ಮಧ್ಯಂತರ ಜಾಮೀನು ಪಡೆದು ಬಂಧನ ಎಂಬ ದೊಣ್ಣೆಯಿಂದ ಬಚಾವಾಗಿದ್ದಾನೆ. ಈತ ವಿಚಾರಣೆಯಿಂದ ಮತ್ತು ಪೀಠ ತ್ಯಾಗದಿಂದ ತಪ್ಪಿಸಿಕೊಳ್ಳಲು ಇನ್ನೆಷ್ಟು ಸರ್ಕಸ್‌ಗಳನ್ನು ಮಾಡುತ್ತಾನೋ ಗೊತ್ತಿಲ್ಲ. ಏನೇ ಆದರೂ ಮಠದ ಮೇಲೆ ತನ್ನ ಹಿಡಿತ ಇರಲೇಬೇಕೆಂದು ಆತ ಮಾಡಿರುವ ಮತ್ತೊಂದು ಹುನ್ನಾರ ಕುರಿತ ವರದಿ ಇಲ್ಲಿದೆ...


ಜಗದೀಶ್ ಶರ್ಮ

ಕಾವಿಯನ್ನು ಕೃಪಾಣದಂತಾಗಿಸಿಕೊಂಡು ಮಾಡಬಾರದ್ದು ಮಾಡಿ ಸಿಕ್ಕಿಬಿದ್ದಿರುವ ಹವ್ಯಕರ ರಾಮಚಂದ್ರಾಪುರ ಮಠದ ರಂಗ್‌ರಂಗೀಲಾ ರಾಘು ಸ್ವಾಮಿಯ ಪೀಠ ತ್ಯಾಗ ಸನ್ನಿಹಿತವಾಗಿಬಿಟ್ಟಿದೆ! ಸ್ವಜಾತಿಗೆ ಕಳಂಕ ತಂದಿರುವ ಈ ನಡತೆಗೆಟ್ಟ ಗುರುವಿನ ನಿರ್ಗಮನ ಮತ್ತು ಹೊಸ ಪೀಠಾಧಿಪತಿಯ ಆಗಮನಕ್ಕೆ ಹವ್ಯಕ ಸಮುದಾಯದಲ್ಲೀಗ ಕ್ಷಣಗಣನೆ ಶುರುವಾಗಿದೆ. ಕಾಮಕಥಾದ ಬಲಿಪಶು ಪ್ರೇಮಲತಾ ಶಾಸ್ತ್ರಿ ಹಾಕಿರುವ ಅತ್ಯಾಚಾರ ಕೇಸಿಂದ ಬಚಾವಾಗೋದು ಸಾಧ್ಯವೇ ಇಲ್ಲವೆಂಬ ಸರಳ ಸತ್ಯ ರಾಘುನ ಸುತ್ತುವರಿದಿರುವ "ಅಧರ್ಮ ಪರಿಷತ್"ನ ಕುತಂತ್ರಗಾರರಿಗೆ ಖಾತ್ರಿಯಾಗುತ್ತಿದ್ದಂತೆಯೇ, ಪರ್ಯಾಯ ಗುರುದೀಕ್ಷೆಗೆ ತರಾತುರಿಯ ತಯಾರಿ ಒಳಗೊಳಗೇ ನಡೆಯಲಾರಂಭಿಸಿದೆ!

ಸಕಲ ಸುಖ-ಸೌಲಭ್ಯ ತಂದುಕೊಡುವ ಪೀಠವನ್ನು ಬಿಟ್ಟಳಿಯುವ ಮನಸ್ಸು ಲೌಕಿಕ ಲಹರಿಯ ರಾಘುಗೆ ಒಂಚೂರೂ ಇಲ್ಲ, ಪಾಪ! ಆದರೆ ಪೀಠತ್ಯಾಗದ ಪೀಕಲಾಟ ಆತನಿಗೆ ಆರಂಭವಾಗಿದೆ. ಪೀಠದಿಂದ ತೊಲಗುವಂತೆ ಆತನಿಗೆ ಧಾರ್ಮಿಕ-ಸಾಮಾಜಿಕ ಮತ್ತು ಕಾನೂನಿನ ಒಡೆತಗಳು ಒಂದರ ಹಿಂದೊಂದರಂತೆ ಬೀಳುತ್ತಿವೆ. ಆರೆಸ್ಸೆಸ್‌ನ ಭಾಗ್ವತ್-ಹೊಸಬಾಳೆ-ಶಾಸ್ತ್ರಿ ವಗೈರೆ ಡಾನ್‌ಗಳ ನೈತಿಕ ಪೊಲೀಸ್‌ಗಿರಿಯಂತೂ ರಾಘುನ ಹೈರಾಣಾಗಿಸಿಬಿಟ್ಟಿದೆ! ಕಾವಿಗಳ ಹಿತರಕ್ಷಕ ಕೇಂದ್ರ ಬಿಜೆಪಿ ಸರ್ಕಾರ- ಸಂಘಪರಿವಾರದ ಹಿಡಿತದಲ್ಲಿರುವ ಮಹಿಳಾ ಆಯೋಗ ಬೇತಾಳದಂತೆ ರಾಘುನ ಬೆನ್ನಿಗೆ ಬಿದ್ದಿದೆ. ರಾಘುನ ಕಾಮಕಾಂಡ ಮೇಲ್ನೋಟಕ್ಕೆ ಸಾಬೀತಾಗುವಂಥವೆಂಬುದು ಎಂಥ ಹೆಡ್ಡನಿಗೂ ಅರಿವಾಗುವಂತಿದೆ. ಹೀಗಾಗಿ ಮಠದ ಭಾವುಕ ಭಕ್ತರು, ಬಹುತೇಕ ಬ್ರಾಹ್ಮಣ ಸಮುದಾಯ ಮತ್ತು ರಾಘುನ ದೌರ್ಬಲ್ಯ ಬಳಸಿಕೊಂಡು ಬೇಳೆ ಬೇಯಿಸಿಕೊಳ್ಳುತ್ತಿರುವ ಕಳ್ಳ ಉದ್ಯಮಿಗಳಿಗೆ ಪ್ರೇಮಲತಾರ ಕೇಸು ನ್ಯಾಯಾಲಯದಲ್ಲಿ ಆರಂಭಿಕ ಹಂತದಲ್ಲೇ ರದ್ದಾಗೋದು ಅಷ್ಟು ಸುಲಭವಲ್ಲವೆಂಬ ಅರಿವಾಗಿದೆ.

ತಮಿಳುನಾಡು ಸಿಎಂ ಜಯಲಲಿತಾರ ವಿರುದ್ಧ ನಿಷ್ಠುರ ನ್ಯಾಯನಿಷ್ಠ ತೀರ್ಪು ಬಂದ ನಂತರವಂತೂ ರಾಘು ಪರಿವಾರದ ಉಮೇದಿ ಇಳಿದುಹೋಗಿದೆ. ಕಾಡಿನ ನಡುವೆಯಿರುವ ಕೆಕ್ಕಾರ ಮಠದಲ್ಲಿ ಅಮಾಯಕ


ರಾಮಚಂದ್ರಾಪುರ ಮಠ

ಬುಡಕಟ್ಟು-ದಲಿತ ಮಂದಿಯ ಪಹರೆಯಲ್ಲಿದ್ದರೂ ರಾಘುಗೆ ನಿದ್ದೆಯೇ ಬರುತ್ತಿಲ್ಲ, ಶೂದ್ರ ಕಾವಲುಗಾರರ ಕೈಗೆ ಮಠದ ಪಾರುಪತ್ಯಗಾರರು ಕೊಟ್ಟಿರುವ ಕತ್ತಿ-ಕೊಡಲಿ-ಕುಟಾರಿ ಯಾವ ಘಳಿಗೆಯಲ್ಲಿ ಪೊಲೀಸರು ಕಸಿದುಕೊಂಡು ತನ್ನನ್ನು ಎಳೆದೊಯ್ದು ಜೈಲುಪಾಲು ಮಾಡುವರೋ ಎಂಬ ಭಯದಲ್ಲಿ ರಾಘು ಗಡಗುಡುತ್ತಿದ್ದಾನೆ. ಕಣ್ಣಿಗೆ ಬಟ್ಟೆ ಕಟ್ಟಿದ್ದರೂ ತನ್ನ ಅನಾಚಾರ-ಅತ್ಯಾಚಾರ ನ್ಯಾಯ ದೇವತೆಗೆ ಅರ್ಥವಾಗಿದೆಯೆಂಬ ಆತಂಕ ಕಪಟ ಸನ್ಯಾಸಿ ರಾಘುಗೆ ಬಾಧಿಸುತ್ತಿದೆ. ನ್ಯಾಯ ಕೊಂಡುಕೊಳ್ಳುವೆನೆಂಬ ಮದವಡಗಿದೆ!

ಇದು ರಗಳೆ ರಾಘವನ ಕಾಡುತ್ತಿರುವ ಕಾನೂನಿನ ಭಯವಾದರೆ, ರಾಜಕೀಯ ಮತ್ತು ಸಾಮಾಜಿಕ ದುಗುಡ ಮತ್ತೂ ಮಜಾ ಆಗಿದೆ! ರಾಮಚಂದ್ರಾಪುರ ಮಠದ ಪೀಠದ ಮೇಲೆ ಕುಳಿತು ಕಳ್ಳಾಟ ಆಡುತ್ತಿರುವ ರಾಘುನ



ಪ್ರೇಮಲತಾ

ಅನ್ಯಾಯ...! ಅನ್ಯಾಯ!!

ಗಾಯಕಿ ಪ್ರೇಮಲತಾ ಶಾಸ್ತ್ರಿ v/s ರಾಘು ಸ್ವಾಮಿ ಪ್ರಕರಣ ನ್ಯಾಯಬದ್ಧವಾಗಿ ನಡೆಯುತ್ತಿಲ್ಲವಾ? ರಾಘುನ ಕಾಮ ವಿಕಾರಕ್ಕೆ ಬಲಿಯಾದ ಪ್ರೇಮಲತಾಗೆ ಅನ್ಯಾಯದ ಮೇಲೆ ಅನ್ಯಾಯವೇ ಆಗುತ್ತಿದೆಯಾ? ಅತ್ಯಾಚಾರ ಆರೋಪಿಗೆ ಅನುಕೂಲವಾಗುವಂತೆ ನ್ಯಾಯ ವ್ಯವಸ್ಥೆಯೇ ಸಹಕರಿಸುತ್ತಿದೆಯಾ? ರಾಘು ಸ್ವಾಮಿಯ ಬೇನಾಮಿ ದೂರಿನ ಮೇಲೆ ತ್ವರಿತ ಕ್ರಮ-ವಿಚಾರಣೆ ನಡೆಯುತ್ತಿದ್ದರೆ, ಪ್ರೇಮಲತಾರ ಕಂಪ್ಲೇಂಟಿಗೆ ವಿಳಂಬ ನೀತಿ ಅನುಸರಿಸಲಾಗುತ್ತಿದೆಯಾ? ಇಂಥ ಸರಣಿ ಅನುಮಾನ ಸಾರ್ವಜನಿಕರನ್ನು ಬಿಟ್ಟೂಬಿಡದೆ ಕಾಡುತ್ತಿದೆ.

ರಾಘುನ ಕಾಮಕಥಾ ಆಸ್ಫೋಟಿಸಿದ ಗಳಿಗೆಯಲ್ಲೇ ನ್ಯಾಯ ವ್ಯವಸ್ಥೆಯಲ್ಲೇ ಎಡವಟ್ಟಾಗುತ್ತಿದೆ ಎಂಬ ಭಾವನೆ ಮೂಡಿತ್ತು. ಒತ್ತಡದ ತಂತ್ರಗಳ ಮೂಲಕ- ಕಾವಿ ಪ್ರಭಾವದಿಂದ ನ್ಯಾಯಾಲಯದ ಪ್ರಕ್ರಿಯೆಗೆ ತಡೆಯೊಡ್ಡುವ ಕರಾಮತ್ತು ನಡೆಯುತ್ತಿರುವ ಅಭಿಪ್ರಾಯ ವ್ಯಾಪಕವಾಗಿ ಬೆಳೆದಿತು. ಈಗ ಖುದ್ದು ಕಾಮಕಥಾದ ಸಂತ್ರಸ್ತೆ ಪ್ರೇಮಲತಾರೇ ಹೊನ್ನಾವರದ ಜೆಎಂಎಫ್‌ಸಿ ನ್ಯಾಯಾಲಯ ಮತ್ತು ಹೈಕೋರ್ಟ್‌ನಲ್ಲಿ ವಿಳಂಬ ನ್ಯಾಯ ನೀತಿ ಅನುಸರಿಸಿ ತನಗೆ ಅನ್ಯಾಯ ಮಾಡಲಾಗುತ್ತಿದೆಯೆಂದು ರಾಷ್ಟ್ರಪತಿಗೆ ಪತ್ರ ಬರೆದಿದ್ದಾರೆ! 'ರಾಘು ಮಾಣಿ ತನ್ನ ಮೇಲೆ ಅತ್ಯಾಚಾರ ಮಾಡಿದ್ದಾನೆ. ಅದನ್ನೀಗ ಮುಚ್ಚಿ ಹಾಕಿ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಹವಣಿಸುತ್ತಿದ್ದಾನೆ. ಸಾಕ್ಷಿಗಳಿಗೆ ಬೆದರಿಸಿ ಸತ್ಯದ ಸಮಾಧಿ ಕಟ್ಟುವ ಕಟಿಪಿಟಿಯಲ್ಲಿದ್ದಾನೆಂದು ಪ್ರೇಮಲತಾ ದೂರಿದ್ದಾರೆ.


ತನಗೆ ನ್ಯಾಯ ಒದಗಿಸುವಂತೆ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮತ್ತು ಕರ್ನಾಟಕದ ಗೃಹ ಇಲಾಖೆಗೆ ನಿರ್ದೇಶನ ನೀಡುವಂತೆ ರಾಷ್ಟ್ರಪತಿಯ ಮೊರೆಹೋಗಿರುವ ಪ್ರೇಮಲತಾ ಎರಡು ನ್ಯಾಯಾಲಯಗಳಲ್ಲಿ ತನಗಾದ ಕಿರಿಕಿರಿ-ಹಿಂಸೆಯನ್ನು ವಿವರಿಸಿದ್ದಾರೆ. ಹೊನ್ನಾವರದ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ ಗೌಡನ ಪಡೆ ಎಸ್ಪಿ ದಿಲೀಪ್ ಎಂಬ ಮಹಾಬ್ರಾಹ್ಮಣನ ರಹಸ್ಯ ಸೂಚನೆಯಂತೆ ಪ್ರೇಮಲತಾ ದಂಪತಿಗಳನ್ನು ವಾರೆಂಟ್ ಇಲ್ಲದೆ ಬಂಧಿಸಿ ತಂದಿತ್ತು, ವಾರೆಂಟ್ ಇಲ್ಲದ ಅಥವಾ ಜಾಮೀನುಸಹಿತ ಕೇಸ್‌ನಲ್ಲಿ ಆರೋಪಿಗಳಿಗೆ ಪೊಲೀಸ್ ಠಾಣೆಯಲ್ಲೇ ಜಾಮೀನು ಕೊಟ್ಟುಕಳಿಸಬಹುದು. ಆದರೆ ಬೇಕಂತಲೇ ನ್ಯಾಯಾಲಯಕ್ಕೆ ಆ ದಂಪತಿಗಳನ್ನು ಹಾಜರು ಪಡಿಸಲಾಗಿತ್ತು, ಹೊನ್ನಾವರದ ಸಿವಿಲ್ (ಕಿರಿಯ ವಿಭಾಗ)ದ ನ್ಯಾಯಾಧೀಶರೂ ಜಾಮೀನು ನೀಡಲಿಲ್ಲ. ಅಷ್ಟೇ ಅಲ್ಲ, ಪ್ರೇಮಲತಾರ ಜಾಮೀನು ಅರ್ಜಿ ಇತ್ಯರ್ಥಕ್ಕೆ ಬರೋಬ್ಬರಿ 25 ದಿನ ತೆಗೆದುಕೊಂಡರು.



ತನ್ಮೂಲಕ ಪ್ರೇಮಲತಾ ದಂಪತಿಗಳ ಸಂವಿಧಾನದತ್ತವಾದ ಬದುಕುವ ಹಕ್ಕನ್ನು ಬುದ್ಧಿಪೂರ್ವಕವಾಗೇ ಮೊಟಕುಗೊಳಿಸಿದಂತಾಗಿತ್ತು. ಮಹಿಳೆ ಮರಣದಂಡನೆ ಅಥವಾ ಜೀವಾವಧಿಯ ಶಿಕ್ಷೆಯಂಥ ಗುರುತರ ಅಪರಾಧ ಮಾಡದಿದ್ದರೆ ಆಕೆಗೆ ತಕ್ಷಣ ಬಿಡುಗಡೆ ಮಾಡುವಂತೆ ಕಾನೂನೇ ಹೇಳುತ್ತದೆ. ಮಹಿಳಾ ಹಕ್ಕನ್ನು ಖಾಕಿ ಕಿರಾತಕರಂತೆ ನ್ಯಾಯಾಧೀಶರೂ ಕಡೆಗಣಿಸಿದ್ದು ವಿಪರ್ಯಾಸವೇ ಸರಿ!!

ಇದೊಂದು ವ್ಯವಸ್ಥಿತ ಸಂಚಾಗಿತ್ತು. ಪ್ರೇಮಲತಾ ದಂಪತಿ ರಾಘುಸ್ವಾಮಿಯ ಚಾತುರ್ಮಾಸ್ಯ ವ್ರತ ಮುಗಿವತನಕ ಜೈಲಲ್ಲಿರಬೇಕಾದ ದರ್ದು ಮಠ ಮಾಫಿಯಾಗಿತ್ತು. ಪ್ರೇಮಲತಾ ರಾಘುನ ಮೇಲೆ ಬಲವಾದ ಕಾನೂನು ಸಮರ ನಡೆಸಿದರೆ ಆತ ಜೈಲು ಪಾಲಾಗುತ್ತಿದ್ದ. ಹಾಗೆ ಜೈಲಿಗೆ ಹೋದರೆ ಆತನ ಚಾತುರ್ಮಾಸ್ಯ ವ್ರತ ಭಂಗ ಆಗುತ್ತಿತ್ತು, ಆಗಾತ ಶಂಕರಾಚಾರ್ಯ ಪೀಠ ಪರಂಪರೆಯಂತೆ ಅನಿವಾರ್ಯವಾಗಿ ಪೀಠತ್ಯಾಗ ಮಾಡಬೇಕಾಗುತ್ತಿತ್ತು. ಪೀಠ ಉಳಿಸಿಕೊಳ್ಳಲು ರಾಘು ಅಂಡ್ ಕೋ. ಪ್ರೇಮಲತಾ ಚಾತುರ್ಮಾಸ್ಯ ವ್ರತದ ಕೊನೆ ಹಂತದ ತನಕವೂ ಜೈಲಲ್ಲೇ ಕಳೆವಂಥ ಷಡ್ಯಂತ್ರ ಯೋಜನಾಬದ್ಧವಾಗಿ 'ಕೆಳಗಿಂದ ಮೇಲಿನವರೆಗೆ' ಹೆಣೆಯಲಾಗಿತ್ತು.


ಅತ್ತ ಕಾರವಾರದ ಜೈಲು ಪ್ರೇಮಲತಾ ದಂಪತಿ ಸೇರಿದರೆ ಇತ್ತ ಬೆಂಗಳೂರಿನ ಬನಶಂಕರಿ ಠಾಣೆಯಲ್ಲಿ ಅವರ ಮಗಳು ತನ್ನ ತಾಯಿ ಮೇಲೆ ರಾಘು ಸ್ವಾಮಿ ಅತ್ಯಾಚಾರ ನಿರಂತರವಾಗಿ ನಡೆಸಿದ್ದಾನೆಂದು ದೂರು, ದಾಖಲಿಸುತ್ತಾರೆ. ಆದರೆ ರಾಘುನ ಬೇನಾಮಿ ಬ್ಲಾಕ್‌ಮೇಲ್ ಕಂಪ್ಲೇಂಟ್‌ನ ಮೇಲಾದ ತ್ವರಿತ ಕ್ರಮದಷ್ಟು ವೇಗವಾಗಿ ಈ ಅತ್ಯಾಚಾರ ಪ್ರಕರಣದ ವಿಚಾರಣೆ ನಡೆಯಲಿಲ್ಲ. ಹೊನ್ನಾವರ ನ್ಯಾಯಾಲಯದಲ್ಲಿ ಪ್ರೇಮಲತಾ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ನಡೆದಿದೆಯೆಂದು ಹೇಳಿಕೆ ಕೊಡುತ್ತಾರೆ. ಕಾನೂನಿನಂತೆ ಈ ದೂರನ್ನು ನ್ಯಾಯಾಧೀಶರು ತಕ್ಷಣ ಪೊಲೀಸರಿಗೆ ತನಿಖೆಗೆಂದು ಕೊಡಬೇಕು. ಆದರೆ ಸದ್ರಿ ದೂರನ್ನು ಹೊನ್ನಾವರದ ಸಿವಿಲ್ ನ್ಯಾಯಾಲಯದ ಕಿರಿಯ ಜಡ್ಜ್ ಸಾಹೇಬರು ಕೋರ್ಟ್‌ನ 'ಶೈತ್ಯಾಗಾರ'ಕ್ಕೆ ಕಳಿಸುತ್ತಾರೆ! ಮತ್ತೊಂದು ದಿನ ಪ್ರೇಮಲತಾ ಸೆಕ್ಷನ್ 164 ಅಡಿಯಲ್ಲಿ ತನ್ನ ಹೇಳಿಕೆ ದಾಖಲಿಸುವಂತೆ ಹೇಳಿದರೂ ಅದಕ್ಕೆ ನ್ಯಾಯಾಧೀ... ಕಿವಿಗೊಡುವುದಿಲ್ಲ!



ಇದಕ್ಕಿಂತಲೂ ಇಂಟರೆಸ್ಟಿಂಗ್ ಹೈಕೋರ್ಟ್‌ನ ಏಕಸದಸ್ಯ ಪೀ... 'ವಿಳಂಬಗಾಥೆ'! ಪ್ರೇಮಲತಾ ದಂಪತಿ ಜೈಲಲ್ಲಿರುವಾಗಲೇ ರಾಘುಶ್ರೀ ತ... ಬಂಧಿಸದಂತೆ ಮತ್ತು ತನ್ನ ವಿಚಾರಣೆಗೆ ತಡೆಯಾಜ್ಞೆ ಕೊಡಬೇಕ... ಹೈಕೋರ್ಟ್‌ಗೆ ಮೊರೆ ಹೋಗುತ್ತಾನೆ. ಚಾತುರ್ಮಾಸ್ಯ ಮುಗಿದಾಕ್ಷಣ ವಿಚಾ... ಹಾಜರಾಗುತ್ತೇನೆಂದು ಪುಣ್ಯ ಕೋಟಿಯ ಪೋಸು ಕೊಟ್ಟು ಪೊಲೀಸರ... ಹಾಕಿದ್ದ ರಾಘು ಕಾನೂನಿನ ಇಕ್ಕಳದಿಂದ ಪಾರಾಗಲು ಮಸಲತ್ತು ... ಹೆಚ್ಚಿಕೊಂಡಿದ್ದ. ರಾಘುನ ಕೋರಿಕೆಯನ್ನು ತಕ್ಷಣ ಹೈಕೋರ್ಟ್ ... ಮಾಡುತ್ತದೆ! ಇದಕ್ಕೆ ಅಡ್ವೋಕೇಟ್ ಜನರಲ್ ರವಿವರ್ಮ ಕುಮಾರ್ ಬಲ... ಆಕ್ಷೇಪ ವ್ಯಕ್ತಪಡಿಸುತ್ತಾರೆ. ಆದರೂ ನ್ಯಾಯಪೀಠ ರಾಘುನ ವಿಚಾರಣೆ ... ಬಂಧನಕ್ಕೆ ತಡೆಯಾಜ್ಞೆ ನೀಡುತ್ತದೆ. ಎರಡೂ ಕಡೆಯವರ ವಾದ-ವಿ... ಮುಗಿದು ಸರಿಸುಮಾರು ಎರಡು ವಾರವೇ ಉರುಳಿಹೋಗಿದೆ. ... ಅಂತಿಮ ತೀರ್ಪು ನ್ಯಾಯಪೀಠ ಹಾಗೇ ಕಾಯ್ದಿರಿಸಿಕೊಂಡಿದೆ. ತನ... ಇಲ್ಲೂ ಪ್ರೇಮಲತಾಗೆ ವಿಳಂಬ ನ್ಯಾಯ ನೀತಿಯ ನ್ಯಾಯವೇ ಎದುರಾ...!

ವಿಳಂಬ ನ್ಯಾಯ ವ್ಯವಸ್ಥೆಯ ದುರ್ಲಾಭ ಪಾಪಿ ರಾಘು ... ವಿಫುಲವಾಗಿ ಪಡೆಯುತ್ತಿದ್ದಾನೆ. ತನ್ನ ಬಚಾವಿಗೆ ಹಿಕ... ಮಾಡುತ್ತಿದ್ದಾನೆ. ತನ್ನ ಪರವಾಗಿ ಕಂಪ್ಲೇಂಟು ಕೊಟ್ಟವರನ್ನು ನಡು... ಕೆಕ್ಕಾರ ಮಠದ ರಹಸ್ಯ ಕೋಣೆಗೆ ಕರೆದು ಸಿಐಡಿಯ... ನ್ಯಾಯಾಲಯ ಕರೆದಾಗ ಹೇಗೇಗೆ ಮಾತಾಡಬೇಕೆಂದು ರಿಹ... ಮಾಡಿಸುತ್ತಿದ್ದಾನೆ. ರಘೋತ್ತಮ ಮಠದ ಆವ... ಪೊಲೀಸರು ಪ್ರವೇಶಿಸದಂತೆ ಅಮಾಯಕ ಅಬ್ರಾಹ್ಮ... ಶಸ್ತ್ರಸನ್ನದ್ಧರಾಗಿಸಿದ್ದಾನೆ. ಇಷ್ಟಾದರೂ ಆತನಿಗೆ ನೆ... ಇಲ್ಲವಾಗಿದೆ. ಕಂಡ-ಕಂಡಲ್ಲಿ "ಅಂತಿಮ ವಿ... ನನ್ನದೇ... ನಾನೇ ಗೆಲ್ತೇನೆ... ನಂಗ್ಯಾವ ಹೆದರಿಕೆಯ... ಎಂದು ಚಡಪಡಿಸುತ್ತಿದ್ದಾನೆ. ಈ ಹತಾಶ ಮಾತುಗಾರಿ... ಆತ ಜೈಲೂಟದ ಭಯದಲ್ಲಿ ತತ್ತರಿಸುತ್ತಿರುವುದು ತೋರಿ...

ಅಂದಹಾಗೆ ರೇಪಿಸ್ಟ್ ರಾಘು ಇಷ್ಟು ದಿನ ಜೈ... ಹೊರಗುಳಿಯಲು ಪೇಜಾವರ ಸ್ವಾಮಿಯ 'ಮಾಧ್ವಾಸ್ತ್ರ'ವೂ ... ಪ್ರಮುಖ ಕಾರಣವೆಂಬ ರೋಚಕ ಸುದ್ದಿಯೀಗ ಹಬ್ಬಿದೆ. ... ಸಂವಿಧಾನದ 21ನೇ ವಿಧಿಯಂತೆ ಬದುಕುವ ಹಕ್ಕಿಂದ ಅಮ... ಪ್ರೇಮಲತಾರ ವಂಚಿಸಿ ಕಾರಾಗೃಹದಲ್ಲಿಟ್ಟ 'ನ್ಯಾಯ ನೀತಿ' ಚಟ... ಸಂಗತಿಯಾಗಿ ಹೋಗಿದೆ. 'ಹರ ಕೊಲ್ಲಲ್ ನರ ಕಾ... ಎಂಬಂತಾಗಿದೆ. ವಿಳಂಬ ನ್ಯಾಯ ನೀತಿ ಬೆಕ್ಕಿಗೆ ಗಂಟೆ ಕಟ್ಟೋ...



ದತ್ತಾತ್ರೇಯ ಹೊಸಬಾಳೆ

-ಗುಣ-ನಡತೆ ಬಗ್ಗೆ ಕಳೆದೆರಡು ವರ್ಷದಿಂದ ಸಂಘ ವಾರ ನಿರಂತರ ನಿಗಾ ಇಟ್ಟಿತ್ತು. ಈತನ ಕಚ್ಚೆ ತನದಿಂದ ಹವ್ಯಕರ ಮುತ್ತೈದೆಯರಿಗೆ ಗಂಡಾಂತರ ದೆ ಎಂಬುದು ಆರೆಸ್ಸೆಸ್‌ನ ಆಕ್ರೋಶಕ್ಕೆ ಮೂಲ ವಾಗಿತ್ತು. ಭಕ್ತಿಯಿಂದ ಕಾಲಿಗೆರಗುವ ಹೆಂಗಸರ -ಬೆನ್ನು ಹಿಡಿದೆತ್ತುವ, ಭಕ್ತೆಯರು ಬಳಿ ಬಂದಾಗ ಕುಶಲೋಪರಿ ನಡೆಸುವ, ರಾಮಕಥಾ ಸನ್ನಿ ಹಿಡಿಸಿ ಕುಣಿಸಿ ಖುಷಿಗೊಳ್ಳುವ ರಾಘುನ ಪೀಠ ಚಪಲವೇ ಅಶ್ಲೀಲವಾಗಿತ್ತು. ಜೊತೆಗೆ ಅನೇಕ ಮುಗ್ಧ ಹೆಂಗಸರ ಹರಣವಾದ ದೂರು ಸಂಘ ಪರಿವಾರದ ಬೈಠಕ್‌ಗಳಲ್ಲಿ ಯಾಗಿತ್ತು.


ಇಂಥ ಹಲ್ಕಟ್ ಸ್ವಾಮಿ ಹವ್ಯಕರಿಗೆ ಬೇಕಾ? ಎಂಬ ಜಿಜ್ಞಾಸೆ ಶುರುವಾಗಿ ವರ್ಷಗಳೇ ಕಳೆದಿತ್ತು. ಮಲತಾ ಇದ್ದಕ್ಕಿದ್ದಂತೆ ರಾತ್ರಿ ಬೆಳಗಾಗುವುದರಲ್ಲಿ ಟಿಸಿದ್ದಲ್ಲ ಅಥವಾ ಹಣಕ್ಕಾಗಿ ಮಾಡಿದ ಬ್ಲಾಕ್‌ಮೇಲ್ ನೂ ಅಲ್ಲ. ರಾಘುನ ಕಾಮ ವಿಕಾರದಿಂದ ರೋಸತ್ತು ಗಿದ್ದ ಹವ್ಯಕ ಸಮುದಾಯದ ಮಾನವಂತರು ಮತ್ತು ಸ್‌ನ ಆಯಕಟ್ಟಿನ ತಂಡ ಕೂಡಿ ಹಲವು ಬೈಠಕ್ ದ ನಂತರವೇ ಪ್ರೇಮಲತಾ ಅತ್ಯಾಚಾರ ಗೌಜಿ ತ್ತು! ಹವ್ಯಕ ಮಠದ ಮಾನ ಕಾಪಾಡಲೆಂದೇ ಆ ದಾಯ ಪ್ರೇಮಲತಾ ಪ್ರಕರಣ ಮುಂದಿಟ್ಟುಕೊಂಡು ನ ಪೀಠದಿಂದ ಇಳಿಸಲು ಸ್ಕೆಚ್ ಹಾಕಿತ್ತು. ಇದೊಂದು ಕಾರ್ಯಾಚರಣೆ ಆಗಿತ್ತಾದರೂ, ರಾಘುನ ಚಿಂತಕರ ದು ಅತಿಬುದ್ಧಿವಂತಿಕೆಯಿಂದ ಬೀದಿ ರಂಪವಾಗಿ ತು! ರಾಘುನ ಬಚಾಯಿಸಲೆಂದು ಸುಳ್ಳು ಕೇಸ್ ಲತಾ ದಂಪತಿ ಮೇಲೆ ಹಾಕಿಸಿದ್ದೇ ಈಗ ಮಠದ ಪತ್ಯಗಾರರಿಗೆ ತಿರುಗುಬಾಣವಾಗಿದೆ.

ಸನಾತನಿಗಳ ಸಂರಕ್ಷಕರೆಂದು ರಾಘು ಅಂಡ್ ಕೋ ಕೊಂಡಿತ್ತೋ ಅವರೇ ತಿರುಗಿಬಿದ್ದಿದ್ದಾರೆ. ಕೇಂದ್ರ ಬಿಜೆಪಿ ದ ರಕ್ಷಣೆಗೆ ಬರುತ್ತಿಲ್ಲ; ಆರೆಸ್ಸೆಸ್ ಆಳುವವರ ಗುದಾರ ಹಿಡಿದು ರಾಘುನ ಕಾಪಾಡದಂತೆ ತಾಕೀತು ತ್ತಿದೆ. ನಂಬಿದ ಯಡ್ಡಿ, ಕುಮ್ಮಿಗಳ ಬೆಂಬಲವೂ ಲ್ಲ. ಆರೆಸ್ಸೆಸ್‌ನ ಪ್ರಯತ್ನದಿಂದಾಗಿಯೇ ಕೇಂದ್ರ ಆಯೋಗದ ಅಧ್ಯಕ್ಷೆ ರಾಘುನ ರೇಪ್ ಕೇಸ್ ರವಾಗಿ ಪರಿಗಣಿಸಿದ್ದಾರೆ. ಸಂತ್ರಸ್ತ ಮಹಿಳೆಗೆ ಯವಾದರೆ ಸುಪ್ರೀಂಕೋರ್ಟ್ ತನಕ ಹೋಗಲು ಂದಿದೆ. ಇದೆಲ್ಲದರ ಒಟ್ಟು ಪರಿಣಾಮ ಎಂದರೆ ಸಾಮಾಜಿಕ ಮೂದಲಿಕೆ-ಟೀಕೆಗೆ ಗುರಿಯಾಗಿದ್ದಾನೆ. ಣ ಸಮುದಾಯದಲ್ಲಿದ್ದ ಗೌರವ-ನಂಬಿಕೆಗೆ ಶೇಕಡಾ ಷ್ಟು ಚ್ಯುತಿ ಬಂದಿದೆ; ಹೆಂಗಸರು ಮಠಕ್ಕೆ ಹೋಗಲು ತ್ತಿದ್ದಾರೆ. ಹೆಂಗಸರ ಮೇಲೆ ಕಣ್ಣು ಹಾಕಿ ಟಿಕೆಯ ಪ್ರವಚನ ಕೊಡುವ ಸೋಗಲಾಡಿ ವಾಗಿರುವುದು ಬೇಡವೆಂಬ ಅಭಿಪ್ರಾಯ ಹವ್ಯಕರ ಮೂಡಿದೆ. ಇಷ್ಟು ದಿನ ಕೆಕ್ಕಾರ ಮಠದ ಸುತ್ತಲಿನ ಗ್ರಾಮದಲ್ಲಿದ್ದ ಅನುಯಾಯಿಗಳಿಗೂ ನಿಧಾನಕ್ಕೆ ಸ ಅಸಲೀ ಗುಣ-ಧರ್ಮ ಎರಡೂ ಅರ್ಥವಾಗಿದೆ. ಗಿ ಹವ್ಯಕ ಅನುಯಾಯಿಗಳ ಸಂಖ್ಯೆ ಕಡಿಮೆಯಾಗಿದೆ. ಷ್ಟು ಶಸ್ತ್ರಸನ್ನದ್ಧವಾಗಿ ಕಾವಲಿಗಿಟ್ಟುಕೊಳ್ಳಲಾಗಿದೆ. ನೆಲದ ಕಾನೂನಿಗೆ ಕಾನೂನುಪಾಲಕರು ನಿಷ್ಠರಾಗಿ ನಿಭಾಯಿಸಿದ್ದೇ ಆದರೆ, ಅತ್ಯಾಚಾರಿ ರಾಘು ಮಾಣಿ ಆಗೇ ಆಗುತ್ತದೆ. ವಿಚಾರಣಾಧೀನ ಕೈದಿಯಾಗಿ ಜೈಲು ಸೇರಿದಾಕ್ಷಣ ರಾಮಚಂದ್ರಾಪುರ ಮಠದ ಖಾಲಿಯಾಗುತ್ತದೆ. ಜಾಮೀನಿನ ಮೇಲೆ ಬರುವವರಿಗೆ ಖಾಲಿಯುಡಲಾಗದ ಸಂದಿಗ್ಧ ಹವ್ಯಕರದು. ಅಷ್ಟೇ ಯತಿಯೊಬ್ಬನ ಮೇಲೆ ಬರಬಾರದ ಆರೋಪ ಜೈಲು ಪಾಲಾದವನನ್ನು ಮತ್ತೆ ಗುರುವೆಂದು ಲು ಹವ್ಯಕ ಸಮುದಾಯ ಸುತಾರಾಮ್ ಸಿದ್ಧವಿಲ್ಲ. ದೊಂದು ಇಕ್ಕಟ್ಟಿನ ಪರಿಸ್ಥಿತಿ ಎದುರಾದರೆ, ಧಿಗಳ ಕೈಮೇಲಾಗದಂತೆ ಕಾರ್ಯಾಚರಣೆ ರಾಘು ರೂಪಿಸಿದೆ. ಜೈಲುಪಾಲಾದ ನಂತರ ಪೀಠ ಬಿಟ್ಟರೆ ಧಿ ಬಿಡದವನು ಹೊಸ ಗುರುವಾಗುವ ಸಾಧ್ಯತೆ ಕ್ಕಾಗಿ ಈಗಲೇ ಎದುರಾಳಿ ಟೀಮಿನ ಸಂಗಡ ಕಾಶಿ" ನಡೆಸಿ, ತಮ್ಮ ಬಳಗದ ವಟು ಒಬ್ಬನಿಗೆ

ದೀಕ್ಷೆ ಕೊಡಿಸಿ ಮಠದ ಮೇಲೆ ಹಿಡಿತ ಸಾಧಿಸಲು ರಾಘುನ ಭಾವ ಜಗದೀಶ್ ಶರ್ಮ ತಂಡ ತಿಪ್ಪರಲಾಗ ಹಾಕುತ್ತಿದೆ!

ಕಂತೆ-ಕಂತೆ ಹಣ ನಿರಾಯಾಸವಾಗಿ ಉತ್ಪತ್ತಿಯಾಗುತ್ತಿರುವ ರಾಮಚಂದ್ರಾಪುರ ಮಠದ "ದೊರೆತನ" ಅಷ್ಟು ಸುಲಭಕ್ಕೆ ಬಿಟ್ಟುಕೊಡಲು ರಾಘು-ಜಗದೀಶರ ಭಾವ-ನೆಂಟ ಜೋಡಿ ಸಿದ್ಧವಿಲ್ಲ! "ನಾವು ಪೀಠ ತ್ಯಾಗ ಮಾಡ್ತೇವೆ.... ಆದ್ರೆ ನಾವು ಹೇಳೋರೇ ಹೊಸ ಪೀಠಾಧಿಪತಿ ಆಗಬೇಕು....." ಎಂಬ ಶರತ್ತು ಭಾವ-ನೆಂಟ ತಂಡ ಎದುರಾಳಿಗಳ ಮುಂದೆ ಮಂಡಿಸಿದೆ. ರಾಘು ಗ್ಯಾಂಗಿನ ಆಯ್ಕೆ ಜಗದೀಶ ಶರ್ಮಾನ ಸುಮಾರು ಹದಿನಾಲ್ಕು ವರ್ಷ ಪ್ರಾಯದ ಮಗ-ಸಮದರ್ಶನ್! ನಿರ್ಗಮನಕ್ಕೆ ಮಾನಸಿಕವಾಗಿ ತಯಾರಾಗುತ್ತಿರುವ ರಾಘುನ ಖಾಸಾ ತಂಗಿ ಮಗನೇ ಬಾಲಕ ಸಮದರ್ಶನ್‌ನನ್ನು ಪೀಠಕ್ಕೆ ತಂದರೆ ಮಠದ ಪಾರುಪತ್ಯ ಮೊದಲಿನಂತೆಯೇ ನಿಭಾಯಿಸಿ ಸುಖ-ಸಂತೋಷ-ಸೌಲತ್ತು ಅನುಭವಿಸಬಹುದೆಂಬ ದೂ(ದು)ರಾಲೋಚನೆ ರಾಘು-ಜಗದೀಶ್ ಮಾಡುತ್ತಿದ್ದಾರೆ. ಇದಕ್ಕೆ ರಾಘು ವಿರೋಧಿ ಬಳಗದ ಮನಸ್ಸು ಒಪ್ಪುತ್ತಿಲ್ಲ. ಆದರೆ ಈಗಾಗಲೇ ಸಮಾಜದಲ್ಲಿ ಹವ್ಯಕರ ಮಠ-ಪೀಠ-ಗುರು ಬಗ್ಗೆ ಮೂಡಿರುವ ಅಸಹ್ಯ ಇನ್ನಷ್ಟು ಹೆಚ್ಚಾಗದಂತೆ ಆರೆಸ್ಸೆಸ್ ಡಾನ್‌ಗಳು ಎಚ್ಚರ ವಹಿಸುತ್ತಿದ್ದಾರೆ. ಹೀಗಾಗಿ ಮತ್ತೆ ಗೊಂದಲ-ಗಲಾಟೆ ಆಗದಂತೆ ನೋಡಿಕೊಂಡು ಸಮದರ್ಶನ್‌ಗೆ ಗುರುದೀಕ್ಷೆ ಕೊಡುವ ಅಂತಿಮ ತೀರ್ಮಾನ ಆಗುವ ಸಾಧ್ಯತೆಯೇ ಹೆಚ್ಚು!

ಒಟ್ಟಿನಲ್ಲಿ ಆದಷ್ಟು ಬೇಗ ಅಸಡ್ಡಾಳ ರಾಘು ಪೀಠದಿಂದ ಇಳಿಸಿ ಬ್ರಾಹ್ಮಣ ಸಮುದಾಯದ "ಪಾವಿತ್ರ್ಯ" ಉಳಿಸ ಬೇಕಾದ ಜರೂರತ್ತು ಎರಡೂ ಕಡೆಯವರನ್ನು ಕಾಡುತ್ತಿದೆ. ಅಂದಹಾಗೆ ಈ ರಾಘು-ಜಗದೀಶರ ಅಂಟು-ನಂಟಿನ ಕತೆ ಕುತೂಹಲಕರವಾಗಿದೆ. ರಾಘುನದು ಸಾಗರ ಮೂಲವಾದರೆ, ಜಗದೀಶ್ ಶರ್ಮ ಶೃಂಗೇರಿ ಕಡೆಯವನು. ಇಬ್ಬರೂ ಬಾಲ್ಯ ಸ್ನೇಹಿತರು. ಗೋಕರ್ಣದ ಸಂಸ್ಕೃತ ಪಾಠಶಾಲೆ (ಕಾಲೇಜ್)ಯಲ್ಲಿ ಸಹಪಾಠಿಗಳು. ಗೋಕರ್ಣದ ಪ್ರಸಿದ್ಧ ವೈದಿಕ ಜೋಗಳೇಕರ್ ಮನೆಯ ದೊಡ್ಡ ಅರೆಯುವ ಕಲ್ಲಿನ ಮುಂದೆ ಇಬ್ಬರೂ ಕುಳಿತು ಹಿಟ್ಟು ರುಬ್ಬುತ್ತಿದ್ದರು. ಗೋಕರ್ಣದ ಭಟ್ಟರ ಮನೆಯಲ್ಲಿ ವಾರಾನ್ನದ ಹುಡುಗರಾಗಿ ಬೆಳೆದವರು.



ಪೂರ್ವಾಶ್ರಮದ ಹರೀಶನಿಗೆ ರಾಮಚಂದ್ರಾಪುರ ಮಠದ ಪೀಠಾಧಿಪತಿ ಆಗುವ ಅವಕಾಶ ಬಂದಾಗ ಮೊದಲು ಕರುಬಿದವನು ಇದೇ ಗೆಳೆಯ ಜಗದೀಶ. ಅಷ್ಟೇ ಅಲ್ಲ ತಾನೇ ಸ್ವಾಮಿಯಾಗಲು ಲಾಬಿಯೂ ಮಾಡಿದ್ದ. ಹರೀಶ್-ಜಗದೀಶರ ಎರಡು ಬಣಗಳು ಆಗಲೇ ಪೀಠಕ್ಕಾಗಿ ಕಚ್ಚಾಡಿಕೊಂಡಿತ್ತು. ಆಗ ರಾಜಿ ಒಪ್ಪಂದ ಒಂದಾಗಿತ್ತು. ಅದೆಂದರೆ, ರಾಘು (ಹರೀಶ) ತನ್ನ ತಂಗಿಯನ್ನು ಅದೃಶ್ಯ ಜಗದೀಶ ಶರ್ಮನಿಗೆ ಕೊಟ್ಟು ಮದುವೆ ಮಾಡುವುದು. ಮತ್ತು ಮಠದ ಅದೃಶ್ಯ ಪಾರುಪತ್ಯ ಜಗದೀಶನ ಸುಪರ್ದಿಗೆ ವಹಿಸುವುದು-ಎಂಬುದಾಗಿತ್ತು. ಇಬ್ಬರೂ ಸಮಾನ ಮನಸ್ಕ ಗೆಳೆಯರು! ಆದರೆ ರಾಘುನ ರಂಗೀಲಾ ರಾದ್ಧಾಂತಕ್ಕಿಂತಲೂ ಮೊದಲೆ ಜಗದೀಶನ ಕಾಮ ಕೀರ್ತಿ ಜಗಜ್ಜಾಹೀರಾಗಿತ್ತು. ತನ್ನ ಉಸ್ತುವಾರಿಯಲ್ಲಿದ್ದ ಸಾಗರದ ಶಾಲೆಯೊಂದರ ವಿದ್ಯಾರ್ಥಿನಿಯನ್ನೀತ ಲೈಂಗಿಕ ಕುಚೇಷ್ಟೆಗೆ ಬಳಸಿಕೊಂಡು ಸಿಕ್ಕಿಬಿದ್ದಿದ್ದ. ಪ್ರಭಾವಿ ಸ್ವಾಮಿಯಾಗಿದ್ದ ಭಾವನ ರಾಜಕೀಯ ಮಹಿಮೆಯಿಂದ ಜೈಲೂಟ ತಪ್ಪಿಸಿಕೊಂಡಿದ್ದ! ಈಗ ರಾಘುನ ರಾಸಲೀಲಾ ವಿನೋದದ ಕತೆ-ಉಪಕತೆಗಳು ದಶದಿಕ್ಕಿಗೆ ಹಬ್ಬಿ ಹೊಲಸೆಬ್ಬಿಸಿ ಬಿಟ್ಟಿದೆ!! ಪೀಠಕ್ಕೇ ಸಂಚಕಾರ ತಂದಿದೆ.

ಸಮದರ್ಶನ್ ರಾಮಚಂದ್ರಾಪುರ ಮಠದ ಸ್ವಾಮಿಯಾದರೆ ಆತನ ತಂದೆ-ಮಾವನ ಲೀಲೆಗಳಿಗೆ ಹೊಸ ಖದರು ಬರುವುದಂತೂ ಖರೆ. ಹೈಗರ ಮಠ ಮತ್ತಷ್ಟು "ಕ್ಯಾತ" ಆಗಲಿದೆ. ಒಂದಂತೂ ಸತ್ಯ ಸಮದರ್ಶನ್ ಸ್ವಾಮಿಯಾಗಲಿ ಅಥವಾ ರಾಘು ಮಾಣಿಯೇ ಪೀಠದಲ್ಲಿ ಮುಂದುವರಿಯಲಿ, ಹವ್ಯಕ ಹೆಂಗುಸರು ಹತ್ತು ಬಾರಿ ಯೋಚಿಸಿ ಆ ಮಠದೊಳಗೆ ಕಾಲಿಡುವಂಥ ಕಾಲವಂತೂ ಬಂದಿದೆ!!

● ಶುದ್ಧೋಧನ

ಚೆಡ್ಡಿ ಶೆಟ್ಟಿಗೂ, ಗಾಂಧಿಗೂ ಯಾವ ಸಂಬಂಧ ಅಂತೀನಿ!

ಥೂತ್ತೇರಿ

▸ ಯಾಹೂ

ಬೆಂಗಳೂರಿನ ವಿಧಾನಸೌಧದ ಪಕ್ಕ ಹತಾಶೆಯ ಭಂಗಿಯಲ್ಲಿ ಕುಳಿತಂತಿರುವ ಗಾಂಧಿ ಪ್ರತಿಮೆಯ ಉದ್ಘಾಟನೆಗೆ ಶಂಕರಮೂರ್ತಿಗಳ ಷಡ್ಯಂತ್ರದಿಂದ ಹುಟ್ಟಾ ಚೆಡ್ಡಿಯೊಂದು ವಕ್ಕರಿಸಿ ಭಾಷಣ ಬೊಗಳಿ ಹೋಯ್ತಂತಲ್ಲಾ, ಸದರಿ ಭಾಷಣದ ವಾಸನೆ ಹಿಡಿದ ಸಿದ್ಧರಾಮಯ್ಯ "ಖಂಡಿತ ಇದು ಗಾಂಧಿ ಸಿದ್ಧಾಂತಗಳನ್ನು ಅಧ್ಯಯನ ಮಾಡಿದ ದನಿಯಲ್ಲ, ಇದ್ಯಾವುದೋ ಅಡ್ನಾಡಿ ಇರಬೇಕು" ಎಂದು ಪಕ್ಕದಲ್ಲಿದ್ದವರನ್ನು ಕೇಳಲಾಗಿ ಆ ಬೃಹಸ್ಪತಿ "ಈತ ಯಾರು ಅಂತ ನನಗೂ ಗೊತ್ತಿಲ್ಲ ಸಾರ್. ಯಾರೋ ಹೇಳಿದರು ಮಾತಿನಿಂದಲೇ ಮೋಸ ಮಾಡುತ್ತ ಇಡೀ ಕರ್ನಾಟಕ ಸುತ್ತುತ್ತಿರುವ ಹೊಟ್ಟೆಪಾಡಿನ ಗಿರಾಕಿಯಂತೆ" ಎಂದರಂತಲ್ಲಾ, ಇದರಿಂದ ಸಮಾಧಾನಗೊಳ್ಳದ ಸಿದ್ದು "ಬಂದ್ ಮಾಡಲೇ ನಿನ್ನ ಬಾಯಿ" ಎಂದು ಹೇಳುವಷ್ಟರಲ್ಲಿ ಶಂಕರಮೂರ್ತಿ ಆಪ್ಯಾಯಮಾನವಾಗಿ ಹಲ್ಲು ಚೆಲ್ಲಿದುಕೊಂಡು ಭಾಷಣ ಮಾಡುತ್ತಿದ್ದವನ ಬಾಯನ್ನೇ ನೋಡುತ್ತಿದ್ದನಂತಲ್ಲಾ, ಆಗ ಸಿದ್ದರಾಮಯ್ಯ ಇದು ಗ್ಯಾರಂಟಿ ಶೆಟ್ಟಿ ಮಾಡಿರುವ ಕಿತಾಪತಿ ಎಂದುಕೊಂಡು ವಿಚಾರಿಸಲಾಗಿ, ಶಂಕರಮೂರ್ತಿ ಎಂದೂ ಗಾಂಧಿಗೆ ಗೌರವ ಕೊಟ್ಟವನಾಗಿರಲಿಲ್ಲವಂತಲ್ಲಾ. ಎಲ್ಲಾ ಮುಗಿದ ಮೇಲೆ ಚಿಕ್ಕಮಂಗಳೂರಿನ ಬಿಜೆಪಿಗಳು ಸಿದ್ದುಗೆ ಫೋನ್ ಮಾಡಿ "ನೋಡಿ ಸಾರ್, ಚಿಕ್ಕಮಗಳೂರಿನ ಎಂಪಿಯಾಗಿದ್ದ ಡಿ.ಸಿ. ಶ್ರೀಕಂಠಪ್ಪನವರ ಮೇಲೆ ಅಭಿನಂದನಾ ಪುಸ್ತಕ ತಂದು ಗಾಂಧೀಜಿಗೆ ಅರ್ಪಿಸಿದ್ದನ್ನ ನೋಡಿದ ಶಂಕರಮೂರ್ತಿ, 'ಗಾಂಧಿಗೆ ಯಾಕೆ ಅರ್ಪಿಸಿದಿರಿ? ನಮ್ಮ ಹರ್ಡೀಕರ್ ಅಥವಾ ಗೋಳವಲಕರ್‌ಗೆ ಅರ್ಪಿಸಬೇಕಿತ್ತು' ಎಂದು ಸಿಟ್ಟು ಮಾಡಿಕೊಂಡ ಕಾರಣಕ್ಕೆ ಶ್ರೀಕಂಠಪ್ಪನನ್ನ ಬಿಜೆಪಿಗಳೇ ತಿರಸ್ಕರಿಸಿದ್ದರು. ಅಂತ ಗಾಂಧಿ ವಿರೋಧಿ ಶೆಟ್ಟಿಯ ಜೊತೆ ಸೇರಿ, ಗಾಂಧಿ ಪ್ರತಿಮೆ ಅನಾವರಣದ ಸಭೆ ಮಾಡಿ, ಗಾಂಧಿಗೇ ಅವಮಾನ ಮಾಡಿದೀರಲ್ಲಾ. ಎಷ್ಟೇ ಆಗಲಿ ನೀವು ಲೋಹಿಯಾ, ಜೆ.ಪಿ. ಕಡೆಯವರಲ್ಲವೆ?" ಎಂದವಂತಲ್ಲಾ, ಥೂತ್ತೇರಿ!



* * *

ಸರ್ವ ಜನಾಂಗದ ಶಾಂತಿಯ ತೋಟದ ನಡುವೆ ಕಂಗೊಳಿಸುತ್ತಿರುವ ವಿಧಾನಸೌಧದ ಪರಿಷತ್ ಪೀಠದ ಮೇಲೆ ಕುಳಿತಿರುವ ಶಂಕರಮೂರ್ತಿ ಆರ್ಯ ವೈಶ್ಯ ಕುಲತಿಲಕ. ಆ ಕಾರಣಕ್ಕೆ ಉಳಿದ ಜನಾಂಗ ಕಂಡರೆ ಅಷ್ಟಕ್ಕಷ್ಟೆ. ಆದರಲ್ಲೂ ಮುಸ್ಲಿಮರನ್ನು ಕಂಡರಾಗುವುದಿಲ್ಲ. ಅವರ ದೊರೆಯಾಗಿದ್ದ ಟಿಪ್ಪುವನ್ನು ಹೋದಲ್ಲಿ ಬಂದಲ್ಲಿ ಟೀಕಿಸಿದ್ದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಕಡೆಗೆ "ಟಿಪ್ಪು ಕನ್ನಡ ದ್ರೋಹಿ" ಎಂದು ಹೇಳುತ್ತ ಕನ್ನಡಿಗರನ್ನು ಕೆರಳಿಸಲು ನೋಡಿದ ಆಸಾಮಿ. ಆದರೇನು ಅದಕ್ಕೂ ಕನ್ನಡಿಗರು ಸೊಪ್ಪು ಹಾಕಲಿಲ್ಲ. ಮನೆಯಲ್ಲಿ ತೆಲುಗು ಮಾತನಾಡುತ್ತ, ಸ್ವಜಾತಿ ಜನರ ಜೊತೆ ತೆಲುಗಿನಲ್ಲೇ ನೊಣೆಯುವ ಶಂಕರಮೂರ್ತಿ, ಹೆಚ್ಚಲೆತ್ನಿಸಿದ ಭಾಷಾ ಕಿಡಿ ಕವರಿಕೊಳ್ಳಲೇ ಇಲ್ಲ. ಕಡೆಗೆ ಗಿರೀಶ್ ಕಾರ್ನಾಡ್ "ಟಿಪ್ಪು ಬಗ್ಗೆ ಗೊತ್ತಿಲ್ಲದಿದ್ದರೆ ಬನ್ನಿ, ತಿಳಿಸುತ್ತೇನೆ" ಎಂಬ ಸವಾಲಿಗೂ ಶೆಟ್ಟಿ ಉತ್ತರ ಕೊಡಲಿಲ್ಲ. ಆದರೆ ಸಾಗರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶೆಟ್ಟಿ ವೇದಿಕೆ ಏರಿದ ಕೂಡಲೇ ಹಲವಾರು ಜನ ವೇದಿಕೆ ಇಳಿದುಹೋದರಂತಲ್ಲಾ. ಅದರಲ್ಲಿ ಅಧ್ಯಕ್ಷರಾಗಿದ್ದ ಮಹಾಬಲೇಶ ಭಟ್ಟರೂ ಇದ್ದು ಇದು ಮಾತ್ರ ಶಂಕರ್‌ಮೂರ್ತಿಯಂತವರಿಗೆ ಕೊಡಬಹುದಾದ ತಕ್ಕ ಗೌರವ ಎಂದು ಸಾಗರದ ಹವ್ಯಕರು ಆಡಿಕೊಂಡರಂತಲ್ಲಾ. ಸಾರ್ವಜನಿಕರ ಇಂತಹ ನಡವಳಿಕೆಗೆ ಕಿಂಚಿತ್ತೂ ಅಳುಕದ ಶಂಕರಮೂರ್ತಿ "ಯಾವುದೇ ವಿಷಯಕ್ಕೆ ನನ್ನ ಅಭಿಪ್ರಾಯ ಹೇಳ್ತೀನಿ. ಅದರ ಬಗ್ಗೆ ಪ್ರತಿಕ್ರಿಯೆ ನನಗೆ ಬೇಕಿಲ್ಲ" ಎಂದರಂತಲ್ಲಾ. "ಈ ಸಾಲು ಗೋಳವಲಕರ್‌ನ ಚಿಂತನಗಂಗಾದಲ್ಲಿದೆ" ಎಂದ ಹವ್ಯಕರು ಬಿದ್ದು ಬಿದ್ದು ನಕ್ಕರಂತಲ್ಲಾ, ಥೂತ್ತೇರಿ!!

* * *

ಮೋದಿ ಪ್ರಧಾನಿಯಾಗಿ ಇಷ್ಟು ದಿನಗಳಾದರೂ ಚೆಡ್ಡಿಗಳೇಕೆ ಇನ್ನು ಸುಮ್ಮನಿದ್ದಾರಲ್ಲಾ ಎಂದು ಯೋಚಿಸುತ್ತಿದ್ದವರಿಗೆ ಉತ್ತರವೆಂಬಂತೆ ಮೊನ್ನೆ ನಡೆದ ವಿಜಯದಶಮಿಯಂದು ಚೆಡ್ಡಿಗಳೆಲ್ಲಾ ಸೇರಿ ವಿಜಯದಶಮಿ ಪಥ ಸಂಚಲನ ನಡೆಸಿದರಂತಲ್ಲಾ, ಅದಕ್ಕಿಂತ ಮೂರು ದಿನ ಮೊದಲು ಹರಿದ ಡೋಲು ಪಕ್ಕೆಯ ಶಬ್ದ ಮಾಡುತ್ತ ಬೀದಿ ಅಲೆಯುತ್ತಿರಬೇಕಾದರೆ ಸಭ್ಯ ಗೃಹಸ್ಥರು ಯಾರೋ ತೀರಿಕೊಂಡಿರಬೇಕೆಂದು ಇಣುಕಿ ನೋಡಲಾಗಿ ಬಳಿಚಿಕೊಂಡ ರೋಗಿಷ್ಟ ಕಾಲುಗಳ ಮೆರವಣಿಗೆ ನೋಡಿದರಂತಲ್ಲಾ, ಸದರಿ ಕಾಲುಗಳು ದೊಗಳೆ ಚೆಡ್ಡಿಯೊಳಗೆ ಸೇರಿದ್ದು ಅದರ ಮೇಲೆ ತಮ್ಮದಲ್ಲದ ಸೈಜಿನ ಬಿಳಿ ಅಂಗಿ, ಲಡ್ಡಿಡಿದ ಲಾಠಿ ಹೊತ್ತ ಪುರೋಹಿತಶಾಹಿ ರಕ್ಷಕರನ್ನು "ಏನೀ ಕಡೆ ಹೊಂಟಿರಲ್ಲ? ಇವತ್ತೇನು ವಿಶೇಷ?" ಎಂದರೆ, "ಇವತ್ತು ಭಗತ್ ಸಿಂಗ್ ಜಯಂತಿ" ಎಂದು ಹೋದವಂತಲ್ಲಾ, ಈ ನಡವಳಿಕೆಯಿಂದ ಚೆಡ್ಡಿಗಳಿಗೆ ತಲೆ ಕೆಟ್ಟಿದೆಯೋ ಅಥವಾ ನಮಗೇ ಕೆಟ್ಟಿದೆಯೋ ಎಂಬ ಅನುಮಾನವುಂಟಾಯ್ತಲ್ಲಾ. ಏಕೆಂದರೆ ನಾಡಿನ ಎಲ್ಲ ಜನಗಳೂ ಸೇರಿ ಮಾಡುವ ಹಬ್ಬ ದಸರಾ ಹಬ್ಬ. ಈ ಹಬ್ಬದಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಇವರಲ್ಲದವರೂ ಕೂಡ ಸಂತೋಷದಿಂದ ಭಾಗವಹಿಸುತ್ತಾರೆ. ಅದಕ್ಕೆ ದಸರಾ ನಾಡಹಬ್ಬ. ಭಗತ್ ಸಿಂಗ್ ನಾಸ್ತಿಕನಾಗಿದ್ದ. ಅವನು ಸ್ವಾತಂತ್ರ್ಯ ಹೋರಾಟಗಾರನೇ ಹೊರತು ಪುರೋಹಿತರ ಪಿಂಡವಾಗಿರಲಿಲ್ಲ. ಹೀಗಿದ್ದೂ ನಾಡಹಬ್ಬ ಮತ್ತು ಭಗತ್‌ಸಿಂಗ್‌ನ ಜಯಂತಿಗೇ ಕಂಟಕ ತರುತ್ತಿರುವ ಚೆಡ್ಡಿಗಳಿಗೆ ಇನ್ಯಾವ ಹಬ್ಬ ಮತ್ತು ವ್ಯಕ್ತಿ ಬಲಿಯಾಗುತ್ತಾರೊ ಏನೋ, ಥೂತ್ತೇರಿ!!!

* * *

ಇಲ್ಲೊಂದು ಭಾಷಣವಿದೆ. ಯಾರದ್ದೆಂದು ಊಹಿಸಬಲ್ಲಿರಾ?

"ಮಹಾಜನಗಳೇ ಇವತ್ತು ಈ ಪ್ರಪಂಚದ ಕವಿಗಳಿಗೇ ಕವಿಯಾಗಿದ್ದ ವಾಲ್ಮೀಕಿ ಜಯಂತಿ. ವಾಲ್ಮೀಕಿ ಅಂದ್ರೇನು? ಕೆಟ್ಟ ಚಟಗಳನ್ನ ಬಿಡಿ ಅಂತ. ನೀವು ಸ್ನೇಹಿತರ ಜೊತೆ ಕುಡಿತಿರಿ, ಸೇದ್ತೀರಿ. ಅಂತ ಕೆಟ್ಟ ಚಟಗಳನ್ನ ಎಲ್ರೂ ಮಾಡ್ತರೆ. ಆದ್ರೆ ವಾಲ್ಮೀಕಿ, ವಾಲ್ಮೀಕಿ, ವಾಲ್ಮೀಕಿ ಅಂದ್ರೇ ಅದನ್ನೆಲ್ಲಾ ಬಿಟ್ಟು ಒಳ್ಳೆಯವರಾಗ್ತೀವಿ ಅಂತ. ನಮ್ಮ ಸಮಾಜ ಹೊಡೆದು ಛಿದ್ರವಾಗಿ ಹೋಗ್ಯದೆ. ಕುರುಬರಲ್ಲಿ ದೊಡ್ಡ ಕುರುಬ, ಸಣ್ಣ ಕುರುಬ, ಹತ್ತಿ ಕಂಕಣ, ಉಣ್ಣೆ ಕಂಕಣ ಅಂತ ವಿಭಾಗ ಆಗ್ಯದೆ. ಲಿಂಗಾಯತರಲ್ಲಿ ಸಾದರು, ನೊಣಬರು, ಪಂಚಮಸಾಲಿಗಳು. ರೆಡ್ಡಿಗಳು ಬಣಜಿಗರು. ಹರಿಜನರಲ್ಲಿ ಎಡಗೈ, ಬಲಗೈ ಅಂತ ಛಿದ್ರವಾಗಿದ್ದಾರೆ. ಇದನ್ನೆಲ್ಲಾ ನೋಡಿದ ವಾಲ್ಮೀಕಿ ರಾಮನನ್ನ ಸೃಷ್ಟಿ ಮಾಡಿದ. ಬನ್ನಿ ಎಲ್ಲರೂ ರಾಮನ ಹೆಸರಲ್ಲಿ ಒಂದಾಗೋಣ. ಅಂತಾ ವಾಲ್ಮೀಕಿನೂ ಸುಮ್ಮನೆ ಬರೀಲಿಲ್ಲ. ಅವನು ಬೇಡ ಆಗಿದ್ದವನು. ಕುಳತಗೊಂಡು ಮರ ಮರ ಮರ ಅಂತ ಹೇಳ್ತ ರಾಮ ರಾಮ ರಾಮ ಅನ್ನಕ್ಕೆ ಶುರು ಮಾಡಿದ. ಮರ್ಯಾದ ಪುರುಷೋತ್ತಮನ್ನ ಬರದ. ಆದ್ರಿಂದ ಇವತ್ತು ಭಾರತದಲ್ಲಿ ಅಭಿವೃದ್ಧಿಗಾಗಿ ಲಕ್ಷಾಂತರ ಕೋಟಿ ಹಣ ಖರ್ಚಾಗ್ತಾಯಿದೆ. ಇಡೀ ಪ್ರಪಂಚ ನಮ್ಮ ದೇಶದ ಕಡೆ ನೋಡ್ತಾಯಿದೆ. ಸರಕಾರ ಬರಿ ರಸ್ತೆ ಚರಂಡಿ ಮಾಡ್ತ ಕುಂತಗಬಾರದು. ವಾಲ್ಮೀಕಿಯಂಥ ಶ್ರೇಷ್ಠ ನಾಯಕರ ಮಸ್ತುವನ್ನು ಜನಗಳಿಗೆ ತಲುಪಿಸಬೇಕು. ಆಗ ನಮ್ಮ ದೇಶದ ಜನ ಕೆಟ್ಟ ಚಟಗಳನ್ನು ಬಿಟ್ಟು ಒಳ್ಳೆಯವರಾಗ್ತರೆ. ಇಂತ ದಿನಕ್ಕೆ ಕಾರಣರಾದ ಇಬ್ಬರು ವ್ಯಕ್ತಿಗಳನ್ನು ನಾವು ನೆನೆಯಲೇಬೇಕು. ಅವುರ್‍ಯಾರಪ್ಪ ಅಂದ್ರ ಯಡಿಯೂರಪ್ಪ ಮತ್ತು ಶ್ರೀರಾಮುಲು. ಇವರಿಬ್ಬರ ಪರಿಶ್ರಮದಿಂದ ನಾವಿಲ್ಲಿ ಸೇರಿದ್ದೀವಿ. ಆದ್ದರಿಂದ ಎಲ್ಲರೂ ರಾಮನ ಹೆಸರಿನಲ್ಲಿ ಒಂದಾಗೋಣ. ಕೆಟ್ಟ ಚಟಗಳನ್ನ ಬಿಡೋಣ."

ಹೀಗೆಂದು ಬಾಯಿ ಬೇದಿ ಮಾಡಿಕೊಂಡ ವ್ಯಕ್ತಿ ಕಾವಿಯಾಗುವಲ್ಲಿ ನಕ್ಷತ್ರದಂತೆ ಹೊಳೆಯುತ್ತಿರುವ ಬ್ರಹ್ಮಾಂಡ ಗುರೂಜಿಯಂತೂ ಅಲ್ಲ, ಬಿಜೆಪಿ ರಾಜಕೀಯಾಗುವಲ್ಲಿ ಯಾವಾಗಲಾದರೂ ಭೂಮಿಗೆ ಅಪ್ಪಳಿಸಬಹುದಾದ ಆಕಾಶಕಾಯದಂತಿರುವ ಈಶ್ವರಪ್ಪನವರು. ಈ ಸಂಗತಿ ನಿಮಗ್ಯಾವ ಅಚ್ಚರಿಯನ್ನೂ ಉಂಟುಮಾಡುವುದಿಲ್ಲವೆಂಬುದೇ ನಮ್ಮ ಅಚ್ಚರಿಯಲ್ಲಾ, ಥೂತ್ತೇರಿ!!! ●

ಶೆಟ್ಟರ್-ಶಾಮನೂರು: ಮ್ಯಾರೇಜ್ ಪಾಲಿಟಿಕ್ಸ್!


ಎಲ್ಲಾ ಅಂದುಕೊಂಡಂತೆ ನಡೆದರೆ ಮುಂದಿನ ತಿಂಗಳು ನಡೆಯುವ ಅದ್ದೂರಿ ನಿಶ್ಚಿತಾರ್ಥ ಸಮಾರಂಭದ ಮೂಲಕ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಹಾಲಿ ತೋಟಗಾರಿಕಾ ಸಚಿವ ಶಾಮನೂರು ಶಿವಶಂಕರಪ್ಪ ಪರಸ್ಪರ ಬೀಗರಾಗಲಿದ್ದಾರೆ. ಶೆಟ್ಟರ್‌ರ ಹಿರಿಮಗ ಪ್ರಶಾಂತ್ ಶೆಟ್ಟರ್‌ಗೂ, ಶಿವಶಂಕರಪ್ಪನ ಎರಡನೇ ಮಗ ಎಸ್.ಎಸ್.ಗಣೇಶ್‌ರ ಮಗಳು ಅಂಚನಾಗೂ ಮದುವೆ ಮಾತುಕತೆ ಮುಕ್ಕಾಲು ಪಾಲು ಮುಗಿದಿದ್ದು ಕೆಲ ದಿನಗಳ ಹಿಂದಷ್ಟೇ ಶೆಟ್ಟರ್ ಕುಟುಂಬ ಇಡಿಯಾಗಿ ದಾವಣಗೆರೆಗೆ ಬಂದು ಆರಂಭಿಕ ಶಾಸ್ತ್ರವನ್ನೂ ಮುಗಿಸಿ ಹೋಗಿದ್ದಾರೆ. ಇನ್ನೇನಿದ್ದರೂ ಅಂಚನಾ ಸ್ವಿಡ್ಜರ್ಲೆಂಡ್‌ನಿಂದ ಬಂದಮೇಲೆ ಮುಹೂರ್ತಕ್ಕೆ ದಿನಾಂಕ ನಿಗದಿಯಾಗಬೇಕಷ್ಟೆ. ಅಸಲಿಗೆ ಬಿಜೆಪಿಯ ಸಂಸದ ಜಿ.ಎಂ.ಸಿದ್ದೇಶ್ ಮಗನಿಗೆ ಶಾಮನೂರು ಕುಟುಂಬದ ಇದೇ ಅಂಚನಾಳನ್ನು ಕೊಡಬೇಕೆಂದು ಸಿದ್ದೇಶ್ ಕಡೆಯವರಿಂದ ಪ್ರಸ್ತಾಪ ಬಂದಿತ್ತಂತೆ. ಆದರೆ ಶಾಮನೂರರ ಮತ್ತೊಬ್ಬ ಮಗ ಎಸ್.ಎಸ್.ಮಲ್ಲಿಕಾರ್ಜುನ್ ಈ ಕುರಿತು ಮನಸ್ಸು ಮಾಡಲಿಲ್ಲ. ವರಸೆಯಲ್ಲಿ ಬೀಗರಾಗಬೇಕಾದರೂ ಕಳೆದೆರಡು ಲೋಕಸಭಾ ಚುನಾವಣೆಗಳ ಜಿದ್ದಾಜಿದ್ದಿಯಲ್ಲಿ ಎರಡೂ ಕುಟುಂಬಗಳ ಬಾಂಧವ್ಯ ಹದಗೆಟ್ಟಿದ್ದು ಇದಕ್ಕೆ ಕಾರಣವಿರಬಹುದು. ಅತ್ತ ಶೆಟ್ಟರ್ ಮಗ ಪ್ರಶಾಂತ್‌ಗೆ ಬಸವರಾಜ ಬೊಮ್ಮಾಯಿಯ ಮಗಳನ್ನು ತಂದುಕೊಳ್ಳುವ ಮಾತುಕತೆಗಳೂ ನಡೆದಿದ್ದವು. ಆದರೆ ಬೊಮ್ಮಾಯಿ ಮಗಳು ಇನ್ನೂ ಒಂದೆರಡು ವರ್ಷ ಮದುವೆಯಾಗುವುದಿಲ್ಲ ಎಂದು ತಲೆ ಆಡಿಸಿದ್ದರಿಂದ ಆ ಸಂಬಂಧವೂ ಮೊಟಕಾಗಿತ್ತು.


ಸ್ವಿಡ್ಜರ್ಲೆಂಡ್‌ನಲ್ಲಿ ಆರ್ಕಿಟೆಕ್ಟ್ ಆಗಿರುವ ಅಂಚನಾಗೂ, ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಕಂಪನಿ ನಡೆಸುತ್ತಿರುವ ಪ್ರಶಾಂತ್ ಶೆಟ್ಟರ್‌ಗೂ ಲಗ್ನ ನಿಕ್ಕಿಯಾಗಿರುವುದರ ಹಿಂದೆ ಎರಡೂ ಪ್ರಭಾವಿ ಲಿಂಗಾಯತ ಕುಟುಂಬಗಳ ದೂರದೃಷ್ಟಿ ಕೆಲಸ ಮಾಡಿರುವುದನ್ನು ತಳ್ಳಿ ಹಾಕುವಂತಿಲ್ಲ. ಯಾಕೆಂದರೆ, ಹೇಳಿಕೇಳಿ ಶಾಮನೂರು ಕಾಂಗ್ರೆಸ್ ಪಕ್ಷದ ನಿಷ್ಠ ಸೇನಾನಿ, ಶೆಟ್ಟರ್ ಅಂತೂ ಬಿಜೆಪಿ ಮು'ಖಂಡ'. ವೈಯಕ್ತಿಕವಾಗಿ ಬದ್ಧ ವೈರಿಗಳಲ್ಲದಿದ್ದರೂ ರಾಜಕೀಯ ರಂಗದಲ್ಲಿ ಪರಸ್ಪರ ಎದುರಾಳಿಗಳೆನ್ನುವುದಂತೂ ಸತ್ಯ. ಹಾಗಾಗಿ ತಮ್ಮತಮ್ಮ ರಾಜಕೀಯ ಗಮ್ಯಗಳನ್ನು ಹಸನು ಮಾಡಿಕೊಳ್ಳುವ ಪ್ಲ್ಯಾನ್ ಇಲ್ಲದೆ ಶೆಟ್ಟರ್-ಶಾಮನೂರುಗಳಂತಹ ಪಕ್ಕಾ ವ್ಯವಹಾರಸ್ಥ ಕುಟುಂಬಗಳು ಇಂತಹದ್ದೊಂದು ನೆಂಟಸ್ತಿಕೆಗೆ ಕೈ ಹಾಕುತ್ತಾರೆಂದು ನಂಬಲಿಕ್ಕಾಗದು. ರಾಜಕೀಯ ಬದುಕಿನ ಕೊನೇ ಘಟ್ಟದಲ್ಲಿರುವ ಶಾಮನೂರು ಶಿವಶಂಕರಪ್ಪ ಈ ಮದುವೆಯ ಮೂಲಕ ಜಿಲ್ಲೆಯ ರಾಜಕೀಯದ ಮೇಲಿರುವ ತಮ್ಮ ಕುಟುಂಬದ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸುವ ದೂರಾಲೋಚನೆ ಮಾಡಿರಲಿಕ್ಕೂ ಸಾಕು. ಅಂತೂಇಂತೂ ಕಳೆದ ಮೂರು ವರ್ಷಗಳಿಂದಲೂ ಸಣ್ಣದಾಗಿ ಕೇಳಿಬರುತ್ತಿದ್ದ ಶಾಮನೂರು ಎರಡನೇ ಮಗ ಎಸ್.ಎಸ್.ಗಣೇಶ್ ಬಿಜೆಪಿ ಸೇರುತ್ತಾರೆನ್ನುವ ಗುಮಾನಿ ಇದೀಗ ನಿಜವಾಗುವ ಹಂತ ತಲುಪಿದಂತಾಗಿದೆ.


ರಾಜಕೀಯ ಲೆಕ್ಕಾಚಾರ

ದಾವಣಗೆರೆ ಜಿಲ್ಲೆ ಅಸ್ತಿತ್ವಕ್ಕೆ ಬರುವುದಕ್ಕಿಂತ ಮುಂಚಿನಿಂದಲೂ ಅವಿಭಜಿತ ಚಿತ್ರದುರ್ಗ ರಾಜಕೀಯದ ಮೇಲೆ ಶಾಮನೂರು ಶಿವಶಂಕರಪ್ಪನವರ ಪ್ರಭಾವ ಇದ್ದೇಇತ್ತು. ರಾಜಕೀಯದ ಹೊರತಾಗಿ ಶಿಕ್ಷಣ ಸಂಸ್ಥೆಗಳು, ಸಕ್ಕರೆ ಕಾರ್ಖಾನೆಗಳ ಪ್ರಾಬಲ್ಯದ ಮೂಲಕವೂ ಶಾಮನೂರು ದಾವಣಗೆರೆಗೆ ಅನಭಿಷಿಕ್ತ ದೊರೆಯಂತೆ ಮೆರೆದಾಡುತ್ತಲೇ ಬಂದವರು. ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ಲಿಂಗಾಯತ ಜಾತಿಯ ಪ್ರಭಾವಿ ಮುಖಂಡರಾಗಿಯೂ ಛಾಪು ಮೂಡಿಸಿದ್ದಾರೆ. ಸುದೀರ್ಘಕಾಲ ಕೆಪಿಸಿಸಿ ಖಜಾಂಚಿಯಾಗಿ ಕಾರ್ಯನಿರ್ವಹಿಸಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ 'ಬೇಕು-ಬೇಡ'ಗಳನ್ನು ನೋಡಿಕೊಂಡು ಗಾಂಧಿ ಕುಟುಂಬಕ್ಕೆ ನಿಷ್ಠರಾಗಿರುವ ಶಾಮನೂರು ಹೈಕಮಾಂಡ್ ಮಟ್ಟದಲ್ಲೂ ಒಂದು ಗಾಂಭೀರ್ಯತೆ ಉಳಿಸಿಕೊಂಡಿದ್ದಾರೆ.


ಆದರೆ ಇತ್ತೀಚಿನ ದಿನಗಳಲ್ಲಿ ರಾಜಕೀಯವಾಗಿ ಶಾಮನೂರರನ್ನು ಹಲವು ಸಮಸ್ಯೆಗಳು ಕಾಡುತ್ತಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಿಗೆ ತಮ್ಮ ಕುಟುಂಬಕ್ಕೆ ಟಿಕೆಟ್ ಪಡೆಯಲು ಹೆಣಗಾಡಬೇಕಾಯಿತು. ಕಾಂಗ್ರೆಸ್ ಪಕ್ಷ ಬಹುಮತ ಗಳಿಸುವುದು ಸ್ಪಷ್ಟವಾಗುತ್ತಿದ್ದಂತೆಯೇ ತಾನೇ ಮುಖ್ಯಮಂತ್ರಿ ಅಭ್ಯರ್ಥಿಯಾಗಬೇಕೆಂದು ಶಾಮನೂರು ತಿಪ್ಪರಲಾಗ ಹಾಕಿದರೂ ಹೈಕಮಾಂಡ್ ಕ್ಯಾರೇ ಎನ್ನಲಿಲ್ಲ. ಕಡೆಗೆ ಸಚಿವಗಿರಿ ಸಿಕ್ಕಿದ್ದೇ ಪುಣ್ಯ ಎನ್ನುವಂತಾಯಿತು; ಅದೂ ಕೂಡಾ ಶಾಮನೂರು ಶಿವಶಂಕರಪ್ಪ ಕೇಳಿದ್ದ ವೈದ್ಯಕೀಯ ಶಿಕ್ಷಣ ಖಾತೆಗೆ ಬದಲಾಗಿ ತೋಟಗಾರಿಕೆಯಂತಹ ನೆಪಮಾತ್ರ ಪೋರ್ಟ್‌ಫೋಲಿಯೋ ಕೊಟ್ಟು ತೆಪ್ಪಗಾಗಿಸುವ ಪ್ರಯತ್ನವನ್ನು ಪಕ್ಷ ಮಾಡಿತ್ತು.








ಇದನ್ನೆಲ್ಲ ಕಣ್ಣಾರೆ ಕಂಡ ಶಾಮನೂರು ಶಿವಶಂಕರಪ್ಪನವರಿಗೆ ತನ್ನ ಕಾಲಾನಂತರ ಪಕ್ಷದಲ್ಲಿ ಕುಟುಂಬಕ್ಕೆ ಎಂತಹ ಮರ್ಯಾದೆ ಸಿಗಬಹುದೆನ್ನುವುದು ಖಾತ್ರಿಯಾಗಿದೆ. ಅಲ್ಲದೆ ರಾಹುಲ್ ಗಾಂಧಿ ಹೈಕಮಾಂಡ್ ಚುಕ್ಕಾಣಿ ಹಿಡಿದ ನಂತರ ಒಂದು ಕುಟುಂಬಕ್ಕೆ ಒಂದೇ ಟಿಕೆಟ್, ಒಬ್ಬ








ವ್ಯಕ್ತಿಗೆ ಒಂದೇ ಹುದ್ದೆಯಂತಹ 'ಶಾಕ್'ಗಳು ತಟ್ಟುತ್ತಲೇ ಇವೆ. ಇಷ್ಟುದಿನ ಇದ್ದಂತೆ ತನ್ನ ಏಕಮೇವ ರಾಜಕೀಯ ಉತ್ತರಾಧಿಕಾರಿಯಾಗಿ ಎಸ್.ಎಸ್.ಮಲ್ಲಿಕಾರ್ಜುನ್ ಒಬ್ಬರೇ ಅಖಾಡದಲ್ಲಿದ್ದಿದ್ದರೆ ಶಾಮನೂರರಿಗೆ ಚಡಪಡಿಕೆಯೇನೂ ಇರುತ್ತಿರಲಿಲ್ಲ. ಆದರೆ ಈಚೀಚೆಗೆ ಎರಡನೇ ಮಗ ಎಸ್.ಎಸ್.ಗಣೇಶ್‌ಗೂ ರಾಜಕೀಯದ ಚಪಲ ನೆತ್ತಿಗೇರಿ ತಾನೂ ತಮ್ಮನಂತೆ ಮಂತ್ರಿಯಾಗಿ ಮೆರೆದಾಡಬೇಕೆಂಬ ಆಸೆ ಶುರುವಾಗಿದೆ. ಮನೆಯೊಳಗೆ ದಾಯಾದಿ ಕಲಹವನ್ನು ಹುಟ್ಟುಹಾಕುವ ಮಟ್ಟಕ್ಕೆ ಈ ಫ್ಯಾಮಿಲಿ ಕ್ರೈಸಿಸ್ ಬಿಗಡಾಯಿಸುತ್ತಿದೆ.


ಪರಿಸ್ಥಿತಿ ಹೀಗಿರುವಾಗ ಇಬ್ಬರೂ ಮಕ್ಕಳನ್ನು ಕಾಂಗ್ರೆಸ್ ಎನ್ನುವ ಒಂದೇ ಗೂಟಕ್ಕೇ ಕಟ್ಟಿಹಾಕಿ ಕಚ್ಚಾಡಿಕೊಳ್ಳುವಂತೆ ಮಾಡುವುದರ ಬದಲು ಎರಡನೇ ಮಗ ಎಸ್.ಎಸ್. ಗಣೇಶ್‌ನನ್ನು ಬಿಜೆಪಿಯತ್ತ ಹರಿಬಿಟ್ಟು, ಇಬ್ಬರಿಗೂ ಬೇರೆಬೇರೆ ಪೊಲಿಟಿಕಲ್ ಬೇಸ್ ಒದಗಿಸುವ ಇರಾದೆ ಶಿವಶಂಕರಪ್ಪನವರಿಗೆ ಇದ್ದರೂ ಇರಬಹುದು.

ಮನೆ ಒಂದು; ದಾರಿ ಎರಡು!

ಶಾಮನೂರರ ರಾಜಕೀಯ ಸಾಮ್ರಾಜ್ಯ ಎಷ್ಟು ವಿಸ್ತಾರಕ್ಕೆ ಹರಡಿಕೊಂಡಿದೆಯೋ ಅಷ್ಟೇ ಆಳಕ್ಕೂ ಬೇರು ಬಿಟ್ಟಿದೆ. ಆ ಸಾಮ್ರಾಜ್ಯಕ್ಕೆ ಮುಂದಿನ ಉತ್ತರಾಧಿಕಾರಿಯನ್ನು ಗೊತ್ತು ಮಾಡುವ ವಿಚಾರ ಬಂದಾಗ ಅವರು ಆಯ್ಕೆ ಮಾಡಿಕೊಂಡಿದ್ದು ಕಿರಿಮಗ ಎಸ್.ಎಸ್. ಮಲ್ಲಿಕಾರ್ಜುನ್‌ರನ್ನು.

ಇದು ಆ ಮನೆಯಲ್ಲಿ ಕಂಡೂಕಾಣದಂತಹ ಸಣ್ಣ ಅಸಮಾಧಾನ ಭುಗಿಲೇಳುವಂತೆ ಮಾಡಿತ್ತು. ಯಾಕೆಂದರೆ, ಮಲ್ಲಿಕಾರ್ಜುನ್‌ಗಿಂತ ಮೊದಲು ರಾಜಕೀಯಕ್ಕೆ ಎಂಟ್ರಿಕೊಟ್ಟಿದ್ದು ಶಿವಶಂಕರಪ್ಪನವರ ಮೊದಲ ಮಗ ಎಸ್.ಎಸ್.ಬಕ್ಕೇಶ್. 1983-84ರಲ್ಲೇ ಬಕ್ಕೇಶ್ ತನ್ನ ತಂದೆಯ ರಾಜಕೀಯ ಪ್ರಭಾವ ಬಳಸಿಕೊಂಡು ಅವಿಭಜಿತ ದಾವಣಗೆರೆ ಜಿಲ್ಲಾ ಪಂಚಾಯತಿಗೆ ಅಧ್ಯಕ್ಷನಾಗಿ ಆಯ್ಕೆಯಾಗಿದ್ದರು. ಬಕ್ಕೇಶ್‌ಗೆ ಹೇಳಿಕೊಳ್ಳುವಂತ ಪೊಲಿಟಿಕಲ್ ಚಾರ್ಮ್ ಇರಲಿಲ್ಲ. ಹಾಗಾಗಿ ಖುದ್ದು ಶಾಮನೂರು ಅಭಿಮಾನಿಗಳೇ ಬಕ್ಕೇಶ್ ಬೆನ್ನಿಗೆ ನಿಲ್ಲಲು ಹಿಂದೇಟು ಹಾಕಿದರು. ಅಷ್ಟಕ್ಕೂ, ಸ್ವತಃ ಬಕ್ಕೇಶ್‌ಗೇ ರಾಜಕೀಯದಲ್ಲಾಗಲಿ ಅಥವಾ ವ್ಯವಹಾರದಲ್ಲಾಗಲಿ ಅಷ್ಟಾಗಿ ಆಸಕ್ತಿ ಇರಲಿಲ್ಲ. ಹಿರಿಮಗ ಎಸ್.ಎಸ್.ಬಕ್ಕೇಶ್ ಅತ್ತ ರಾಜಕೀಯಕ್ಕೂ ಇಲ್ಲ, ಇತ್ತ ವ್ಯವಹಾರಕ್ಕೂ ಸಲ್ಲ ಎನ್ನುವಂತಾದ ಮೇಲೆ ಶಿವಶಂಕರಪ್ಪ ತಮ್ಮ ಎರಡನೇ ಮಗ ಗಣೇಶ್‌ರನ್ನು ಸಂಪೂರ್ಣವಾಗಿ ವ್ಯವಹಾರಕ್ಕೆ ಮೀಸಲಿಟ್ಟರು. ಅವರಿಗೆ ಕೊನೆ ಆಯ್ಕೆಯಾಗಿ ಉಳಿದದ್ದು ಕಿರಿಮಗ ಮಲ್ಲಿಕಾರ್ಜುನ್.





ತಂದೆಯಂತೆಯೇ ಮಲ್ಲಿಕಾರ್ಜುನ್ ಕೂಡಾ ರಾಜಕೀಯ ಮಹತ್ವಾಕಾಂಕ್ಷಿ. ಪಕ್ಷದ ಕಾರ್ಯಕರ್ತರ ನಡುವೆ ಆತ್ಮೀಯವಾಗಿ ಒಡನಾಡು[...] ಕಲೆ ಮಲ್ಲಿಕಾರ್ಜುನ್‌ಗೆ ಸಿದ್ಧಿಸಿದೆ. ಇಲ್ಲದೇ ಹೋಗಿದ್ದ[...] ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಾದ್ಯಂ[...] ಹರಡಿಕೊಂಡಿದ್ದ ಬಿಜೆಪಿಗಳ ಪ್ರಾಬಲ್ಯವನ್ನು ಕಿತ್ತೆಸೆದು[...] ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಮುನ್ನುಡಿ ಬರೆಯಲು[...] ಸಾಧ್ಯವಾಗುತ್ತಿರಲಿಲ್ಲ. ಅದೇರೀತಿ ಬಿಜೆಪಿಗಳ ಪಾರುಪತ್ಯವಿ[...] ದಾವಣಗೆರೆ ಪಾಲಿಕೆಯಲ್ಲಿ ಕಾಂಗ್ರೆಸ್ ತನ್ನ ಪ್ರಾಬಲ[...] ಮರುಸ್ಥಾಪಿಸಿದ್ದರಲ್ಲೂ ಮಲ್ಲಿಕಾರ್ಜುನ್‌ರ ಪಾತ್ರವಿದೆ.

ಎಸ್.ಎಸ್.ಮಲ್ಲಿಕಾರ್ಜುನ್‌ರಲ್ಲಿ ಈ ಸಾಮರ್ಥ್ಯವನ್ನು ಗುರುತಿಸಿಯೇ ಎಸ್.ಎಂ.ಕೃಷ್ಣ ಮಂತ್ರಿಮಂಡಲದಲ್ಲಿ ಕ್ರೀಡಾ ಮತ್ತು ಯುವಜನ ಸಚಿವಗಿರಿ ಒಲಿದು ಬಂದಿತ್ತು. ಅಷ್ಟೂ ದಿನ ರಾಜಕೀಯದಿಂದ ದೂರ ಉಳಿದಿದ್ದ ಎಸ್.ಎಸ್.ಗಣೇಶ್‌ಗೆ ರಾಜಕೀಯ ಆಸೆ ಮೆತ್ತಿಕೊಂಡಿದ್ದೆ ಆಗ. ತನ್ನ ತಮ್ಮನೇ ಮಂತ್ರಿ ಆಗಬಹುದಾದರೆ ನಾನು ಯಾಕೆ ಒಂದು ಕೈ ನೋಡಬಾರದು? ಎಂದು ಗಣೇಶ್ ರಾಜಕೀಯದ ಎಂಟ್ರಿಗೆ ಹಾತೊರೆಯಲು ಶುರು ಮಾಡಿದ[...] ಅಸಲಿಗೆ ಗಣೇಶ್‌ರ ಇಂತಹ ಆಸೆಯ ಹಿಂದೆ ಆತ[...] ಹೆಂಡತಿ ರೇಖಾರ ಪ್ರಚೋದನೆಯೂ ಇತ್ತು. ಆದ[...] ಅಷ್ಟರಲ್ಲಾಗಲೆ ಕಾಲ ಮಿಂಚಿಹೋಗಿತ್ತು. ?ಜ[...] ಮಲ್ಲಿಕಾರ್ಜುನ್‌ರ ಉತ್ತರಾಧಿಕಾರತ್ವಕ್ಕೆ ಒಗ್ಗಿ ಹೋಗಿದ್ದರು[...] ಅಂತಹ ಸಂದರ್ಭದಲ್ಲಿ ಗೊಂದಲ ಉಂಟು ಮಾಡಿದ[...] ಮಲ್ಲಿಕಾರ್ಜುನ್ ಕೆರಿಯರ್‌ಗೂ ಹೊಡೆತ ಬೀಳುವ ಸಾಧ್ಯ[...] ಇತ್ತಾದ್ದರಿಂದ ಗಣೇಶ್‌ರ ರಾಜಕೀಯ ಹಂಬಲ[...] ಶಾಮನೂರು ಸಮರ್ಪಕವಾಗಿ ಪ್ರತಿಕ್ರಿಯಿಸಲೇ ಇಲ್ಲ. ಇದ[...] ಗಣೇಶ್‌ಗೆ ದೊಡ್ಡ ಮಟ್ಟದ ಅಸಮಾಧಾನವನ್ನ[...] ಉಂಟುಮಾಡಿತ್ತು.

ಹಾಗಾಗಿ ಕಳೆದ ಎರಡು ಮೂರು ವರ್ಷಗಳಿಂ[...] ಗಣೇಶ್ ಬಿಜೆಪಿ ಸೇರುತ್ತಾರೆಂಬ ಗುಲ್ಲೆದ್ದಿತ್ತು. ಮುಂದೊಂದ[...] ದಿನ ಕಾಂಗ್ರೆಸ್‌ನಲ್ಲೇ ಗಣೇಶ್‌ಗೂ ಒಂದು ಸ್ಥಾನ ಕಲ್ಪಿಸು[...] ಇರಾದೆ ಹೊಂದಿದ್ದ 'ದೊಡ್ಡಜಮಾನ್ರು' ಮಕ್ಕಳನ್ನೆಲ[...] ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದರಿಂದ ಅಂತಹ ಅನಾಹು[...] ಘಟಿಸಿರಲಿಲ್ಲ. ಆದರೆ ಪಕ್ಷದೊಳಗೆ ತಮ್ಮ ಬುಡವ[...] ಭದ್ರವಾಗಿ ನಿಲ್ಲದ ಈ ಪರಿಸ್ಥಿತಿಯಲ್ಲಿ ಗಣೇಶ್ ಅ[...] ಬಿಜೆಪಿಯಲ್ಲೇ ನೆಲೆ ಕಂಡುಕೊಳ್ಳಲಿ, ಅದಕ್ಕೆ [...] ನೆಂಟಸ್ತಿಕೆಯೇ ಮೆಟ್ಟಿಲಾಗಲಿ ಎನ್ನುವ ಉದ್ದೇಶದಿಂ[...] ಶಾಮನೂರು ಶೆಟ್ಟರ್ ಸಂಬಂಧಕ್ಕೆ ಸಮ್ಮತಿ ನೀಡಿರಬಹುದ[...]

ಗಣೇಶ್ ಬಿಜೆಪಿ ಪರಸಂಗ

ಅಸಲಿಗೆ ಈ ಮದುವೆ ಪ್ರಸ್ತಾಪಕ್ಕೂ ಮುನ್ನ[...] ಎಸ್.ಎಸ್.ಗಣೇಶ್ ಬಿಜೆಪಿ ಸೇರುತ್ತಾರೆಂಬ ಗುಲ್ಲು ಕಳೆ[...] ಎರಡು ಮೂರು ವರ್ಷಗಳಿಂದ ಹರಿದಾಡುತ್ತಲೇ ಇತ್[...] ಆದರೆ ತಂದೆಯ ಹಿಡಿತದ ಕಾರಣಕ್ಕೆ ಅವರು ಕುಟುಂಬ[...] ಹಗ್ಗ ಹರಿದುಕೊಂಡಿರಲಿಲ್ಲ. ಕಳೆದ ಲೋಕಸಭ[...] ಚುನಾವಣೆಯ ನಂತರವಂತೂ ಗಣೇಶ್‌ರ ಬೇಗು[...] ಹೆಚ್ಚಾಗಿತ್ತು. ಅತ್ತ ಶಾಮನೂರು ದಾವಣಗೆರೆ ದಕ್ಷಿ[...] ಕ್ಷೇತ್ರದಿಂದ ಗೆದ್ದು ಸಚಿವರಾಗಿದ್ದ[...] ಎಸ್.ಎಸ್.ಮಲ್ಲಿಕಾರ್ಜುನ್ ಉತ್ತರ ಕ್ಷೇತ್ರದಿಂ[...] ವಿಜಯಿಯಾಗಿ ಶಾಸಕ ಎನಿಸಿಕೊಂಡಿದ್ದರಿಂದ ಎಂ.[...] ಎಲೆಕ್ಷನ್‌ಗೆ ಕಾಂಗ್ರೆಸ್ ಪಕ್ಷದಿಂದ ತನಗೇ ಟಿಕೆ[...] ಕೊಡಬೇಕೆಂದು ಗಣೇಶ್ ತಾಕೀತು ಮಾಡಿದ್ದರು. ದಾವಣ[...] ತುಂಬಾ ಲೋಕಸಭಾ ಅಭ್ಯರ್ಥಿ ಗಣೇಶ್‌ರೇ ಎಂಬರ್ಥ[...] ದೊಡ್ಡದೊಡ್ಡ ಫ್ಲೆಕ್ಸ್‌ಗಳು, ಸ್ಥಳೀಯ ಪತ್ರಿಕೆಗಳ[...] ಜಾಹೀರಾತುಗಳು ಮಿಂಚಿದ್ದವು. ಆದರೆ ಕೊನೇ ಘಳಿಗೆಯ[...] ಟಿಕೆಟ್ ಎಸ್.ಎಸ್. ಮಲ್ಲಿಕಾರ್ಜುನ್ ಕೈಸೇರಿತ್ತು. ಆಗಂತ[...] ಗಣೇಶ್ ಬಿಜೆಪಿ ಸೇರಿಯೇ ಬಿಡುತ್ತಾರೆ ಎಂಬ ಸುದ್ದಿಗ[...] ಭುಗಿಲೆದ್ದಿದ್ದವು.

ಆದರೂ, ಒಂದೊಮ್ಮೆ ಮಲ್ಲಿಕಾರ್ಜುನ್ ಗೆ[...] ಸಂಸದನಾದರೆ ತೆರವಾಗುವ ಉತ್ತರ ವಿಧಾನಸಭಾ ಕ್ಷೇತ[...] ಸ್ಪರ್ಧಿಸುವ ಅವಕಾಶವಾದರೂ ಸಿಕ್ಕೀತೆಂಬ ಆಸೆಯ[...] ಗಣೇಶ್ ಅಂತಹ ಸುದ್ದಿಗಳು ನಿಜವಾಗಲು ಅವ[...] ಕೊಟ್ಟಿರಲಿಲ್ಲ. ಹಾಗೇನಾದರು ಮಲ್ಲಿಕಾರ್ಜುನ್ ಗೆದ್ದ[...] ಆದಲ್ಲಿ, ತೆರವಾಗುವ ಶಾಸಕ ಸ್ಥಾನಕ್ಕೆ ಮಲ್ಲಿಕಾರ್ಜುನ[...] ಪತ್ನಿ ಡಾ|| ಪ್ರಭಾರಿಗೆ ಟಿಕೆಟ್ ಕೊಡಲಾಗುತ್ತದೆ ಎ[...] ಗಾಳಿಸುದ್ದಿ ಕೇಳಿಬಂದಿದ್ದವು. ಅದಕ್ಕೆ ತಕ್ಕಂತೆ ಉ[...] ವಿಧಾನಸಭಾ ಕ್ಷೇತ್ರದಲ್ಲಿ ತನ್ನ ಗಂಡನ ಪರವಾಗಿ ಡ[...] ಪ್ರಭಾರು ಏಕಾಂಗಿಯಾಗಿ ಚುನಾವಣೆಯ ಪ್ರಚಾ[...] ಇಳಿದಿದ್ದು ಗಣೇಶ್‌ಗೆ ಇನ್ನಷ್ಟು ಕಸಿವಿಸಿಯನ್ನುಂಟುಮಾಡಿ[...] ಯಾಕೆಂದರೆ, ಈ ಹಿಂದಿನ ಯಾವುದೇ ಚುನಾವಣೆಗ[...] ತಮ್ಮ ಕುಟುಂಬ ಸದಸ್ಯರ ಪರ ಮೂವರೂ ಸೊಸೆಯಂದಿ[...] ಒಟ್ಟಾಗಿ ಪ್ರಚಾರ ಮಾಡುತ್ತಿದ್ದರು. ಈ ಬಾರಿ ಪ್ರ[...] ಮಲ್ಲಿಕಾರ್ಜುನ್ ಮಾತ್ರ ಪ್ರಚಾರಕ್ಕೆ ಇಳಿದದ್ದು, ಅವರ[...] ಟಿಕೆಟ್ ಸಿಗಲಿದೆಯೆಂಬ ಗಾಳಿ ಸುದ್ದಿಗೂ ತುಂಬ[...] ಸಾಮ್ಯತೆ ಕಂಡುಬಂದಿದ್ದವು. ಹಾಗಾಗಿ ಗಣೇ[...] ಚುನಾವಣೆಯಿಂದ ದೂರವೇ ಉಳಿದಿದ್ದರು. ಅ[...]


ಕುಟುಂಬದೊಂದಿಗೆ ಶೆಟ್ಟರ್ ಹಿರಿಮಗ ಪ್ರಶಾಂತ್ ಶೆಟ್ಟರ್



...ಮುಪತ್ರ ಸಲ್ಲಿಕೆಯ ಸಂದರ್ಭದಲ್ಲಿ ಮಲ್ಲಿಕಾರ್ಜುನ ಮತ್ತು ಪತ್ನಿ ಡಾ. ಪ್ರಭಾ

...ಗೆಯಲ್ಲಿ ಅವರು ಬಿಜೆಪಿ ಸಂಗ ಮಾಡುವ ನಿರ್ಧಾರವೂ ...ಯಾಗುತ್ತಾ ಬಂದಿತ್ತು, ಆ ನಿರ್ಧಾರಕ್ಕೆ ಶೆಟ್ಟರ್ ಜೊತೆಗಿನ ...ಸಂಬಂಧ ಉತ್ತಮ ಸೇತುವೆಯಾಗಲಿದೆ.

ಶೆಟ್ಟರ್‌ಗೆ ಪ್ರಾಫಿಟ್

ಈ ಮದುವೆಯ ಹಿಂದೆ ಶಾಮನೂರು ಕುಟುಂಬದ ...ಲ್ಲಾ ಲೆಕ್ಕಾಚಾರಗಳು ಅಡಗಿವೆಯೋ ಅಥವಾ ನಿಷ್ಕಲ್ಮಶ ...ಧವ್ಯವೊಂದರ ನಿರೀಕ್ಷೆ ಇದೆಯೋ ಗೊತ್ತಿಲ್ಲ. ಆದರೆ ...ದೀಶ್ ಶೆಟ್ಟರ್‌ಗೆ ಇದರಿಂದ ಅಪಾರ ಲಾಭಗಳಂತು ... ಇದೆ. ಹೇಳಿಕೇಳಿ, ದಾವಣಗೆರೆ ಯಡ್ಡಿಯ ...ಹಿಡಲ್ಲಿರುವ ಪ್ರದೇಶ. ಈ ನೆಂಟಸ್ತಿಕೆ ಮೂಲಕ ಯಡ್ಡಿಯ ...ಲ್ಯದ ಮೇಲೆ ಶೆಟ್ಟರ್ ತಮ್ಮದೂ ಒಂದು ಸೆರಗು ...ಲಿದ್ದಾರೆ. ಶಾಮನೂರು ಕುಟುಂಬದ ಒಂದು ಕವಲಿನ ...ಲಕ ಶೆಟ್ಟರ್ ಪರವಾದ ಒಂದು ಪಡೆ ಅಲ್ಲಿ ...ಟ್ಟುಕೊಳ್ಳಲಿದೆ. ಇದಕ್ಕೆ ಮೊದಲ ಪಲ್ಲಂಗ ಹಾಸುವುದೇ ...ಜಿ ತರಕಾರಿ ಮಂತ್ರಿ ಎಸ್.ಎ.ರವೀಂದ್ರ. ಪಕ್ಕಾ ...ಯಸಾಧಕ ರಾಜಕಾರಣಿಯಾದ ರವೀಂದ್ರನಾಥ ...ವಮೊದಲು ಯಡ್ಡಿ ಪಟಾಲಂನಲ್ಲೇ ಬೆಳೆದು ...ನಾದರು ಈಗೀಗ ಯಡ್ಡಿಯ ಪರಮ ದುಶ್ಮನ್‌ನಂತೆ ...ಸುತ್ತಿದ್ದಾನೆ. ಕೆಜೆಪಿ ಕಟ್ಟಿದಾಗಲಂತೂ ರವೀಂದ್ರನಾಥ್ ...ಬಂದಂತೆ ಯಡ್ಡಿಯನ್ನು ತೆಗಳಾಡಿದ್ದ. ಸ್ವಂತ ತಾಕತ್ತಿನ ... ಗೆಲ್ಲಲಾಗದ ರವೀಂದ್ರನಿಗೆ ಈಗ ಜಿಲ್ಲೆಯಲ್ಲಿ ...ಕೊಳ್ಳುವಂತೆ ಯಾವ ಸಪೋರ್ಟೂ ಇಲ್ಲ. ಆ ...ನ್ನು ಶೆಟ್ಟರ್ ಮೂಲಕ ಈಡೇರಿಸಿಕೊಳ್ಳಲು ರವೀಂದ್ರ ...ಹಾಕಬಹುದು. ಹಾಗೆ ನೋಡಿದರೆ, ಶೆಟ್ಟರ್ ಮತ್ತು ...ದ್ರನಾಥ್ ನಡುವೆ ಹೇಳಿಕೊಳ್ಳುವಂತ ಬಾಂಧವ್ಯವೇನೂ ... ಆದರೆ ಸಮಯಸಾಧಕ ರಾಜಕಾರಣಿಗೆ ಅದೇನು ... ವಿಷಯವಲ್ಲ!

...ಶೆಟ್ಟರ್‌ಗಾಗುವ ಮತ್ತೊಂದು ಲಾಭವೆಂದರೆ, ...ಲಿಂಗಾಯತ ಲೀಡರ್' ಎನ್ನುವ ಟ್ರಂಪ್‌ಕಾರ್ಡನ್ನು ...ಯಿಂದ ಕಿತ್ತುಕೊಳ್ಳಲು ಒಂದು ಅವಕಾಶವೂ ...ಗುತ್ತದೆ. ಮೊದಲಿನಿಂದಲೂ ಯಡ್ಡಿ ತನ್ನನ್ನು ಮತ್ತೊಬ್ಬ ...ಯತ ಲೀಡರ್ ಓವರ್‌ಟೇಕ್ ಮಾಡಬಾರದೆನ್ನುವ ...ಚುಗಳನ್ನು ಮಾಡುತ್ತಲೇ ಬಂದಂತವನು. ಆದೇ ...ಕ್ಕೆ ಬಿಜೆಪಿ ಸರ್ಕಾರ ಅಧಿಕಾರಕ್ಕೇರುವ ಅವಕಾಶ ...ಗ ಶೆಟ್ಟರ್‌ಗೆ ಮಂತ್ರಿ ಸ್ಥಾನ ಕೊಡುವ ಬದಲು ...ಪಿ ಹುದ್ದೆ ಕೊಟ್ಟು ಡಮ್ಮಿಯಾಗಿಸಿದ್ದ. ಯಡ್ಡಿ ತನ್ನನ್ನು ... ಲಿಂಗಾಯತ ನಾಯಕ ಎಂದು ಎಷ್ಟೇ ...ಸಿಕೊಂಡರೂ ಶಾಮನೂರು ಶಿವಶಂಕರಪ್ಪ ...ದಾಯದ ಮೇಲೆ ತಕ್ಕ ಮಟ್ಟನ ಹಿಡಿತ ...ದಿರುವುದು ಸುಳ್ಳಲ್ಲ. ಮುಖ್ಯವಾಗಿ ಶೆಟ್ಟರ್ ಬಣಜಿಗ ...ಯತ ಸಮುದಾಯಕ್ಕೆ ಸೇರಿದರೆ, ಶಾಮನೂರು ... ಲಿಂಗಾಯತ ಒಳಪಂಗಡದವರು. ಈ ಕೆಮಿಸ್ಟ್ರಿಯನ್ನು ...ಕ್ಕಾಗಿ ಬಳಸಿಕೊಂಡಿದ್ದೇ ಆದಲ್ಲಿ, ಮೊದಲೇ ಹಲ್ಲುಕಿತ್ತ ...ಹಾವಾಗಿರುವ ಯಡ್ಡಿಯನ್ನು ಸೈಡಿಗಿಟ್ಟು ಶೆಟ್ಟರ್ ...ಯತ ಲೀಡರ್ ಆಗಿ ಬೀಗಬಹುದು. ...ದೊಂದು ಲೆಕ್ಕಾಚಾರ ವ್ಯವಹಾರಸ್ಥ ಶೆಟ್ಟರ್ ತಲೆಯಲ್ಲಿ ...ಗಲೇ ಮೊಳೆತಿರಲೂಬಹುದು.

...ದೊಡ್ಡವರ ಲೆಕ್ಕಾಚಾರ ಅದೇನೆ ಇರಲಿ, ಈ ...ತೆಯಿಂದ ದಾಂಪತ್ಯಕ್ಕೆ ಕಾಲಿಡುತ್ತಿರುವ ಎರಡು ... ಬದುಕು ಪೊಲಿಟಿಕಲ್ ಸ್ಟ್ರಾಟಜಿಗೆ ಸಿಲುಕಿ ...ಗದಿದ್ದರೆ ಸಾಕು.. ಅವರಿಬ್ಬರಿಗೂ ಶುಭವಾಗಲಿ...

■ ಟಿ.ಎನ್. ಷಣ್ಮುಖಿ ಮತ್ತು ಗಿರೀಶ್ ತಾಳಿಕಟ್ಟೆ

ನಿಗಮ ಮಂಡಳಿ: ಮಂಡ್ಯದಲ್ಲಿ ಗೂಟದ ಕಾರಿಗೆ ಗುದ್ದಾಟ

ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಒಂದೂವರೆ ವರ್ಷವಾದರೂ ಸುಮಾರು 70 ನಿಗಮ ಮಂಡಳಿ ಅಧ್ಯಕ್ಷರು, 14 ಉಪಾಧ್ಯಕ್ಷರು ಹಾಗೂ 650 ನಿರ್ದೇಶಕರನ್ನು ಆಯ್ಕೆ ಮಾಡುವ ಪ್ರಕ್ರಿಯೆಗೆ ಇನ್ನೂ ಚಾಲನೆ ದೊರೆತಿಲ್ಲ. ಆದರೆ ಆಕಾಂಕ್ಷಿಗಳ ಪಟ್ಟಿ ಮಾತ್ರ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ. ಈ ನಡುವೆ ಶೇ.30 ರಷ್ಟು ಶಾಸಕರಿಗೆ ಹಾಗೂ ಶೇ.70ರಷ್ಟು ಕಾರ್ಯಕರ್ತರಿಗೆ ಅಧಿಕಾರ ಹಂಚಿಕೆ ಮಾಡುವ ಸೂತ್ರವನ್ನೂ ಹೈಕಮಾಂಡ್ ನೀಡಿದೆ. ಯಾವಾಗ ಕಳೆದೊಂದು ತಿಂಗಳಿನಿಂದ ಈ ಕುರಿತು ಸಿಎಂ ಸಿದ್ದರಾಮಯ್ಯ- ಕೆಪಿಸಿಸಿ ಅಧ್ಯಕ್ಷ ಪರಮೇಶ್ ಚರ್ಚಿಸಲು ಶುರು ಮಾಡಿದರೋ ಆಗಿನಿಂದ ಮಂಡ್ಯ ಕಾಂಗ್ರೆಸ್ಸಿಗರಿಗೆ ಹಗಲು ಹೊತ್ತಿನಲ್ಲೇ ಗೂಟದ ಕಾರಿನ ಕನಸು ಬೀಳಲಾರಂಭಿಸಿದೆ. ಮಂಡ್ಯ ಜಿಲ್ಲೆಯಲ್ಲಿರುವ ತಮ್ಮ ಬೆಂಬಲಿಗರಿಗೆ ಗೂಟದ ಕಾರು ಕೊಡಿಸಲು ಸಿಎಂ ಸಿದ್ದರಾಮಯ್ಯ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್, ಸಚಿವ ಅಂಬರೀಶ್, ಮಾಜಿ ಸಿಎಂ ಎಸ್.ಎಂ. ಕೃಷ್ಣ ಹಾಕ್ಯಾಟ ನಡೆಸಿದ್ದು, ಕಾಂಗ್ರೆಸ್ ಪಾಳಯದಲ್ಲಿ ಇದೇ ದೊಡ್ಡ ಸುದ್ದಿಯಾಗಿದೆ.


ಶಕ್ತಿ ಪ್ರದರ್ಶನ

ಮಂಡ್ಯದ ಮೈಷುಗರ್ ಕಾರ್ಖಾನೆಯ ಅಧ್ಯಕ್ಷ ಸ್ಥಾನಕ್ಕೆ ವಸತಿ ಸಚಿವ ಅಂಬಿ ಬಲಗೈ ಬಂಟ ಅಮರಾವತಿ ಚಂದ್ರಶೇಖರ್ ಪ್ರಬಲ ಲಾಬಿ ನಡೆಸಿದ್ದಾನೆ. ಅಸಲಿಗೆ ಅಂಬಿ ಬಂಟನೆಂಬುದಷ್ಟೇ ಅಮರಾವತಿ ಚಂದ್ರನ ಅರ್ಹತೆ. ಈಗಾಗಲೇ ತನ್ನ ಬೆಂಬಲಿಗರ ಜೊತೆ ಸಿದ್ದರಾಮಯ್ಯನವರ ಮುಂದೆ ಶಕ್ತಿ ಪ್ರದರ್ಶಿಸಿರುವ ಅಮರಾವತಿ ಚಂದ್ರಶೇಖರನಿಗೆ ಪೊಲೀಸ್ ಮತ್ತು ಶಿಕ್ಷಕರಿಗೆ ಸೈಟು ನೀಡದಿರುವ ವಿಷಯವೇ ಮುಳುವಾಗಬಹುದೆಂಬುದು ಹಿರಿಯ ಕಾಂಗ್ರೆಸ್ಸಿಗರ ವಾದ. ಅಂಬಿಯ ಶ್ರೀರಕ್ಷೆಯಿಂದ ಯಾವುದಾದರೂ ನಿಗಮಮಂಡಳಿಯ ಅಧ್ಯಕ್ಷ ಸ್ಥಾನ ಅಮರಾವತಿ ಚಂದ್ರನಿಗೆ ಸಿಗುವ ಛಾನ್ಸನ್ನು ತಳ್ಳಿಹಾಕುವಂತಿಲ್ಲ.

ಅಂಬಿ ಬಣದಲ್ಲಿ ಗುರುತಿಸಿಕೊಂಡಿರುವ ಶಿವಾನಂದ, ಕಾಡಾ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾನೆ. ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಪಿ.ಎಂ.ಸೋಮಶೇಖರ್ ಕೂಡ ನಿಗಮ-ಮಂಡಳಿಗೆ ತೂರಿಕೊಳ್ಳಲು ಹವಣಿಸಿದ್ದಾನೆ. ಒಂದೊಮ್ಮೆ ಸೈಟು ಕಾರಣಕ್ಕೆ ಅಮರಾವತಿ ಚಂದ್ರಶೇಖರನಿಗೆ ಮೈಷುಗರ್ ಅಧ್ಯಕ್ಷ ಸ್ಥಾನ ತಪ್ಪಿದರೆ ಅದನ್ನು ನನಗೇ ಕೊಡಲಿ ಎಂಬುದು ಈತನ ವಾದ. ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವ ಮೈಷುಗರ್ ಕಾರ್ಖಾನೆ ಮುಚ್ಚುವ ಭೀತಿ ಎದುರಿಸುತ್ತಿದೆ. ಬಂದ ಅಧ್ಯಕ್ಷರೆಲ್ಲಾ ಗಂಟು ಮಾಡಿಕೊಂಡು ಕಾರ್ಖಾನೆಯನ್ನು ಅಧೋಗತಿಗೆ ತಂದು ನಿಲ್ಲಿಸಿದ್ದಾರೆ. ಅಂಬಿ- ಎಸ್.ಎಂ. ಕೃಷ್ಣ ಬೆಂಬಲಿಗರ ಗುದ್ದಾಟ ಕಂಡ ಸಿದ್ದರಾಮಯ್ಯ ಮೈಷುಗರ್ ಅಧ್ಯಕ್ಷರಾಗಿ ತನ್ನ ಆಪ್ತ ಸಹಕಾರ ಸಚಿವ ಮಹದೇವಪ್ರಸಾದ್‌ರನ್ನೇ ಮೈಷುಗರ್ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ಈಗ ಯಾರಿಗೆ ಅಧ್ಯಕ್ಷ ಸ್ಥಾನ ಯಾರ ಲಾಬಿಗೆ ಒಲಿಯುವುದೋ ನೋಡಬೇಕಿದೆ.

ಇನ್ನು ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಂ.ಎಸ್.ಚಿದಂಬರ್ ಕೂಡಾ ಈ ಸರಣಿಯಲ್ಲಿ ಹಿಂದೆ ಬಿದ್ದಿಲ್ಲ. ತನ್ನ ಐದು ವರ್ಷ ಕಾಲಾವಧಿಯಲ್ಲಿ ಬಿಜೆಪಿ ಸರ್ಕಾರದ ವಿರುದ್ಧ ನಡೆಸಿದ ಹೋರಾಟವನ್ನೇ ಅಸ್ತ್ರ ಮಾಡಿಕೊಂಡಿರುವ ಚಿದಂಬರ್ ಈಗಾಗಲೇ ತನ್ನ ನೂರಾರು ಬೆಂಬಲಿಗರನ್ನು ಸಿದ್ದರಾಮಯ್ಯ, ಅಂಬಿ, ಪರಮೇಶ್ವರ್ ಹಾಗೂ ಎಸ್.ಎಂ. ಕೃಷ್ಣರ ಮುಂದೆ ಪರೇಡು ಮಾಡಿಸಿದ್ದಾನೆ. ಕೃಷಿ ಸಚಿವ ಕೃಷ್ಣಭೈರೇಗೌಡ ಕೃಪಾಕಟಾಕ್ಷ ಚಿದಂಬರ್‌ನ ಮತ್ತೊಂದು ಪ್ಲಸ್ ಪಾಯಿಂಟ್.

ನಿವೇಶನ ಹಂಚಿಕೆ ಗೋಲ್‌ಮಾಲ್ ಹಾಗೂ ಆಯುಕ್ತರೇ 5 ಕೋಟಿ ಮುಂಡಾಯಿಸಿದ ಪ್ರಕರಣದಿಂದ ರಾಜ್ಯದ ಗಮನ ಸೆಳೆದಿರುವ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಲು ಮುಡಾ ಮಾಜಿ ಅಧ್ಯಕ್ಷ ಅಸಾದುಲ್ಲಾಖಾನ್, ಇಸ್ತ್ರಿ ಮಾಡಿದ ಗರಿಗರಿ ಬಟ್ಟೆ ಹಾಕಿಕೊಂಡು ಮನೆಯಿಂದ ಹೊರಬಂದಿದ್ದಾನೆ. ಈ ಹಿಂದೆ ಈತ ಅಧ್ಯಕ್ಷನಾಗಿದ್ದ ಅವಧಿಯಲ್ಲೂ ಅಕ್ರಮ ನಡೆದಿದೆ ಎಂದು ಆಯುಕ್ತ ಕೆ.ಮಥಾಯ್ ಸರ್ಕಾರಕ್ಕೆ ವರದಿ ನೀಡಿದ್ದರು. ಆ ಸತ್ಯವನ್ನೇ ಮರೆಮಾಚಿ ಅಸಾದುಲ್ಲಾಖಾನ್ ತೀವ್ರ ಪ್ರಯತ್ನ ನಡೆಸಿದ್ದಾನೆ. ಅಂದಹಾಗೆ, ಮುಡಾ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ನಂತರ ಕಾಣೆಯಾಗಿದ್ದ ಅಸದುಲ್ಲಾಖಾನ್ ಜನರ ಕಣ್ಣಿಗೆ ಬೀಳುತ್ತಿರುವುದೇ ಈಗ.



ಮಂಡ್ಯದ ತುಂಬೆಲ್ಲಾ ಫ್ಲೆಕ್ಸ್, ಬ್ಯಾನರ್‌ನಲ್ಲಿ ರಾರಾಜಿಸುತ್ತಿರುವ ಈತನಿಗೆ ಮುಡಾ ಅಧ್ಯಕ್ಷ ಗಾದಿ ಸಿಗುವುದು ಗಗನಕುಸುಮವೇ ಸರಿ.

ಎಸ್.ಎಂ. ಕೃಷ್ಣ ಶಿಫಾರಸ್ಸು

ತನ್ನ ತಮ್ಮ ಎಸ್.ಎಂ.ಶಂಕರ್‌ರ ಪುತ್ರರತ್ನ ಗುರುಚರಣ್‌ನನ್ನು ರಾಜ್ಯ ನಿಗಮ ಮಂಡಳಿಗೆ ನೇಮಕ ಮಾಡಿಸಲು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪಟ್ಟು ಹಿಡಿದಿದ್ದಾರೆ. ಕೃಷ್ಣರ ಬಿಗಿ ಪಟ್ಟಿಗೆ ಗುರುಚರಣ್‌ಗೆ ಯಾವುದಾದರೊಂದು ಅಧ್ಯಕ್ಷ ಸ್ಥಾನ ಸಿಕ್ಕರೂ ಅಚ್ಚರಿಯಿಲ್ಲ. ಗುರುಚರಣ್ ಜೊತೆಗೆ ಶ್ರೀರಂಗಪಟ್ಟಣದ ರವೀಂದ್ರ ಶ್ರೀಕಂಠಯ್ಯ, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಟಿ.ಎಸ್.ಸತ್ಯಾನಂದನ ಹೆಸರುಗಳನ್ನೂ ಕೃಷ್ಣ ಶಿಫಾರಸ್ಸು ಮಾಡಿದ್ದಾರೆ. ಅಂಬಿಯ ಪರಮ ವೈರಿಯಾಗಿರುವ ರವೀಂದ್ರ ಶ್ರೀಕಂಠಯ್ಯನನ್ನು ನಿಗಮಕ್ಕೆ ಅಧ್ಯಕ್ಷನಾಗಿ ಮಾಡಿ ಅಂಬಿಗೆ ಸೆಡ್ಡು ಹೊಡೆಯುವುದು ಕೃಷ್ಣರ ಹೆಬ್ಬಯಕೆ. ಕೃಷ್ಣರ ಪಟ್ಟಿಗೆ ಮಣಿದರೆ ರವೀಂದ್ರ ಶ್ರೀಕಂಠಯ್ಯನಿಗೆ ಅಧ್ಯಕ್ಷಸ್ಥಾನ ಗ್ಯಾರಂಟಿ.

ಹಾಗೆಯೇ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಳುವಾಡಿ ಕೆ.ಎಂ.ನಾಗರಾಜು ಎಸ್.ಎಂ.ಕೃಷ್ಣ ಹಾಗೂ ಮಾಜಿ ಸಂಸದೆ ರಮ್ಯಾ ಮೂಲಕ ನಿಗಮ ಮಂಡಳಿ ಹಿಡಿಯುವ ಪ್ರಯತ್ನದಲ್ಲಿದ್ದಾರೆ. ಟೋಪಿ ಲಿಂಗಯ್ಯ, ಚಾಮಲಾಪುರ ನಾಗರಾಜು ಸೇರಿದಂತೆ 15 ಮಂದಿಯನ್ನು ನಿರ್ದೇಶಕರನ್ನಾಗಿ ಮಾಡಬೇಕೆಂದು ಎಸ್.ಎಂ.ಕೃಷ್ಣ ಪಟ್ಟಿ ಕೊಟ್ಟಿದ್ದಾರೆ. ಜಿಲ್ಲಾಧ್ಯಕ್ಷ ಆತ್ಮಾನಂದ ಕೂಡ ಎಸ್.ಎಂ.ಕೃಷ್ಣರ ಬಣದಲ್ಲಿದ್ದು, ಹಲವು ಜಿಲ್ಲೆಗಳ ಕಾಂಗ್ರೆಸ್‌ನ ಪಕ್ಷಾಧ್ಯಕ್ಷರಿಗೂ ಸ್ಥಾನ ಕಲ್ಪಿಸಲು ಸಿಎಂ ಸಿದ್ದರಾಮಯ್ಯ ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಆತನಿಗೂ ನಿಗಮ ಮಂಡಳಿಯಲ್ಲಿ ಜಾಗ ಸಿಗಬಹುದು. ಸಿಗದೆ ಹೋದರೂ ಆತ್ಮಾನಂದನಿಗೆ ಚಿಂತೆಯಿಲ್ಲ, ಯಾಕೆಂದರೆ, 2016ರಲ್ಲಿ ಖಾಲಿಯಾಗುವ ವಿಧಾನಪರಿಷತ್ ಸ್ಥಾನ ಆದಾಗಲೇ ಆತನ ಹೆಸರಿಗೆ ಕಾಂಗ್ರೆಸ್ ನಾಯಕರಿಂದಲೇ ನಿಕ್ಕಿಯಾಗಿದೆ.

ಶ್ರೀರಂಗಪಟ್ಟಣದಿಂದ ಪುಟ್ಟೇಗೌಡ, ಅಂಬಿ ಶಿಷ್ಯ ಶೆಟ್ಟಹಳ್ಳಿ ಲಿಂಗರಾಜು, ಸಚ್ಚಿದಾನಂದ ನಿಗಮ ಮಂಡಳಿ ರೇಸಿನಲ್ಲಿದ್ದಾರೆ. ಜಿಲ್ಲೆಯಲ್ಲಿ ಅಂಬಿ- ಎಸ್.ಎಂ.ಕೃಷ್ಣರ ಬಣಗಳನ್ನು ಸಮಾಧಾನಪಡಿಸಲು 50:50 ಅನುಪಾತದಲ್ಲಿ ಸ್ಥಾನ ಹಂಚಿಕೆ ಮಾಡಲು ಸಿಎಂ ಸಿದ್ದರಾಮಯ್ಯ ಹಾಗೂ ಪರಮೇಶ್ವರ್ ತೀರ್ಮಾನಿಸಿರುವುದಾಗಿ ಸುದ್ದಿ ಹರಿದಾಡುತ್ತಿದೆ. ಆದರೂ ಈ ಬಾರಿ ಅಂಬಿ ಶಿಷ್ಯರಿಗೆ ಹೆಚ್ಚಿನ ಸ್ಥಾನ ದೊರಕುವ ಸಾಧ್ಯತೆ ಕಡಿಮೆ ಅಂತಲೇ ಅನ್ನಬಹುದು.

ಮಾಜಿ ಶಾಸಕರ ಎಂಟ್ರಿ

ಮತದಾರರ ಅವಕೃಪೆಗೆ ಗುರಿಯಾಗಿ ಮನೆ ಸೇರಿರುವ ಮಾಜಿ ಶಾಸಕರುಗಳಾದ ನಾಗಮಂಗಲ ಸುರೇಶ್‌ಗೌಡ, ಶಿವರಾಮೇಗೌಡ ಹಾಗೂ ಕೆ.ಆರ್.ಪೇಟೆ ಚಂದ್ರಶೇಖರ್ ನಿಗಮ ಮಂಡಳಿಯ ಅಧ್ಯಕ್ಷರಾಗಿ ಅಧಿಕಾರ ಹಿಡಿಯಲು ಹೊಂಚು ಹಾಕಿದ್ದಾರೆ. ಮಾಜಿ ಶಾಸಕರಿಗೆ ಸ್ಥಾನ ಕೊಡಲು ಸಾಧ್ಯವಿಲ್ಲ ಎಂದು ಸಿದ್ದರಾಮಯ್ಯ, ಪರಮೇಶ್ವರ್ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಎಲ್ಲಾ ಮಾಜಿಗಳು ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದರಿಂದ ನಮಗೂ ಒಂದು ಛಾನ್ಸ್ ಸಿಗಬಹುದೆಂಬ ವಿಶ್ವಾಸದಲ್ಲಿ ಈ ತ್ರಿಮೂರ್ತಿಗಳು ಚಲಾವಣೆಯಲ್ಲಿದ್ದಾರೆ. ಅಧಿಕಾರವಿದ್ದಾಗ ಜನರ ವಿಶ್ವಾಸ ಗಳಿಸಿಕೊಳ್ಳಲಾಗದ ಮಾಜಿಗಳು ಈಗ ಮತ್ತೊಮ್ಮೆ ಅಧಿಕಾರಕ್ಕಾಗಿ ಪಕ್ಷದ ನಾಯಕರ ಹಿಂದಿಂದೆಯೇ ಅಲೆಯುತ್ತಿದ್ದಾರೆ.

ಇನ್ನು ಮದ್ದೂರಿನ ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು, ಕೆ.ಆರ್.ಪೇಟೆ ಕೃಷ್ಣ ಇಬ್ಬರೂ ಸಿದ್ದರಾಮಯ್ಯನವರ ವಿಶ್ವಾಸಕ್ಕೆ ಕಟ್ಟುಬಿದ್ದು ಜೆಡಿಎಸ್ ತ್ಯಜಿಸಿ ಕಾಂಗ್ರೆಸ್ ಸೇರಿ ಕಳೆದ 2 ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿದ್ದಾರೆ. ಸಿದ್ದರಾಮಯ್ಯ ಈ ಋಣ ತೀರಿಸಿಯಾರೆ ಎಂಬ ನಿರೀಕ್ಷೆ ಅವರಿಗೂ ಇದೆ.

ಅಹಿಂದಕ್ಕೂ ಜೈ, ಮಹಿಳೆಯರೂ ಸೈ


ಸಿದ್ದರಾಮಯ್ಯ ಸಿಎಂ ಗಾದಿಗೇರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಅಹಿಂದ ಪೊಲಿಟಿಕ್ಸ್. ಹಾಗಾಗಿ ಸಿಎಂ ಜಿಲ್ಲೆಯಲ್ಲಿರುವ ಅಹಿಂದ ವರ್ಗಕ್ಕೂ ದೊಡ್ಡ ಮಟ್ಟದಲ್ಲಿ ಅವಕಾಶ ಕಲ್ಪಿಸುತ್ತಾರೆಂಬ ಕನವರಿಕೆ ವ್ಯಾಪಕವಾಗಿದೆ. ಇದೇ ಕಾರಣಕ್ಕೆ ಸ್ವ-ಜಾತಿ ಬಾಂಧವ ಮಳವಳ್ಳಿಯ ದಡದಪುರದ ಶಿವಣ್ಣನಿಗೆ ನಿಗಮ ಮಂಡಳಿ ಸ್ಥಾನ ಕಲ್ಪಿಸುವ ಇರಾದೆಯೂ ಸಿದ್ದರಾಮಯ್ಯನವರಿಗೆ ಇದ್ದಂತಿದೆ. ಈಗಾಗಲೇ ಶಿವಣ್ಣ ಹೆಸರು ಫೈನಲ್ ಆಗಿದ್ದು ಅಧಿಕೃತ ಪ್ರಕಟಣೆಯಷ್ಟೇ ಹೊರಬರಬೇಕಿದೆ. ಹಾಗೆಯೇ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಾಗರಾಜು ಹೆಸರು ಮೈಷುಗರ್ ಅಧ್ಯಕ್ಷ ಸ್ಥಾನಕ್ಕೆ ಕೇಳಿಬರುತ್ತಿದೆ. ಸಾತನೂರಿನ ನರಸಪ್ಪ ಹೆಗಡೆ, ಕೆ.ಆರ್.ಪೇಟೆಯ ನಾಗೇಂದ್ರಕುಮಾರ್, ದೇವರಾಜು ಸೇರಿದಂತೆ ಹಲವು ಕುರುಬ ಜನಾಂಗದ ನಾಯಕರು ಜಾತಿ ಹೆಸರಿನಲ್ಲಿ ಸಿದ್ದರಾಮಯ್ಯನವರ ಬೆನ್ನು ಬಿದ್ದಿದ್ದಾರೆ.

ಈ ವಿಚಾರದಲ್ಲಿ ದಲಿತ ಸಮುದಾಯಕ್ಕೂ ನಿರೀಕ್ಷೆಗಳು ಇಲ್ಲದಿಲ್ಲ. ದಲಿತ ಸಂಘರ್ಷ ಸಮಿತಿಯ ನಾಯಕ ಗುರುಪ್ರಸಾದ್ ಕೆರಗೋಡು ಹೆಸರು ಈ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ. ಪ್ರಗತಿಪರ ನಾಯಕರ ಬೆಂಬಲವೂ ಗುರುಪ್ರಸಾದ್ ಬೆನ್ನಿಗಿದೆ.

ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನಕ್ಕೆ ತಹತಹಿಸುತ್ತಿರುವವರಲ್ಲಿ ಮಹಿಳಾಮಣಿಗಳ ಸಂಖ್ಯೆಯೂ ದೊಡ್ಡದಿದೆ. ಮಳವಳ್ಳಿ ಮಾಜಿ ಶಾಸಕಿ ಮಲ್ಲಾಜಮ್ಮ ಮತ್ತು ನಗರಸಭೆ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್ ದಲಿತರ ಕೋಟಾದಲ್ಲಿ ನಮಗೊಂದು ಅವಕಾಶ ಕೊಡಿ ಎಂದು ವರಿಷ್ಠರ ಮೊರೆ ಹೋಗಿದ್ದಾರೆ. ಮಲ್ಲಾಜಮ್ಮನ ಮೇಲೆ ಎಸ್.ಎಂ.ಕೃಷ್ಣ ಹಾಗೂ ಪರಮೇಶ್ವರ್ ಕೃಪಾಶೀರ್ವಾದವಿದ್ದರೆ ವಿಜಯಲಕ್ಷ್ಮಿ ರಘುನಂದನ್‌ಗೆ ಲೋಕೋಪಯೋಗಿ ಸಚಿವ ಹೆಚ್.ಸಿ.ಮಹದೇವಪ್ಪರ ಬೆಂಬಲವಿದೆ. ಇನ್ನು ನಗರಸಭೆ ಮಾಜಿ ಅಧ್ಯಕ್ಷರಾದ ನಿರ್ಮಲ ಚಿಕ್ಕೇಗೌಡ, ಹಸ್ನಿಯಾಬಾನು, ಲಲಿತಾಭಾಸ್ಕರ್, ಶಾರದ ರಮೇಶ್‌ರಾಜು ಸೇರಿದಂತೆ ಡಜನ್‌ಗೂ ಹೆಚ್ಚು ಮಹಿಳೆಯರು ಅವಕಾಶಕ್ಕಾಗಿ ಗಾಳ ಹಾಕಿ ಕುಳಿತಿದ್ದಾರೆ. ವಿಜಯಲಕ್ಷ್ಮಿ ರಘುನಂದನ್ ಬಿಟ್ಟರೆ ಉಳಿದ ಮಹಿಳಾ ಮಣಿಗಳ ಧ್ವನಿ ಕ್ಷೀಣ ಅಂತಲೇ ಹೇಳಬಹುದು.

■ ಮಂಡ್ಯ ನಾಗೇಶ್

ಶಾಸಕ ನರೇಂದ್ರಸ್ವಾಮಿ ಒಪ್ತಾರ?




ನಿಗಮ ಮಂಡಳಿ ಅಧ್ಯಕ್ಷ ಸ್ಥಾನದ ಪಟ್ಟಿಯಲ್ಲಿ ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಹೆಸರು ಮುಂಚೂಣಿಯಲ್ಲಿದೆ. ಜಿಲ್ಲೆಯಿಂದ ಸಚಿವರಾಗುವ ಅರ್ಹತೆಯಿರುವ ನರೇಂದ್ರಸ್ವಾಮಿ ಸಿಎಂ ಸಿದ್ದರಾಮಯ್ಯನವರ ಪರಮಾಪ್ತರೂ ಹೌದು. ಹಾಗಾಗಿ ಅವರಿಗೆ ಸಿದ್ದರಾಮಯ್ಯ ಅಧ್ಯಕ್ಷಗಿರಿ ದಯಪಾಲಿಸುವ ಸಾಧ್ಯತೆಗಳು ದಟ್ಟವಾಗಿವೆ. ಆದರೆ ಇದಕ್ಕೆ ಸ್ವತಃ ನರೇಂದ್ರಸ್ವಾಮಿಯೇ ತಕರಾರು ತೆಗೆಯುವ ಸಾಧ್ಯತೆ ಇದೆ. ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಚಿವನಾಗಿದ್ದ ತಾನು ಹಿಂಬಡ್ತಿ ಪಡೆದು ನಿಗಮ ಮಂಡಳಿ ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಸಿಕ್ಕರೆ ಸಚಿವಸ್ಥಾನ ಸಿಗಲಿ ಇಲ್ಲದಿದ್ದರೆ ಶಾಸಕನಾಗಿಯೇ ಉಳಿದುಬಿಡುತ್ತೇನೆ ಎಂದು ಅವರು ಆಪ್ತರಲ್ಲಿ ತಮ್ಮ ಅಳಲು ತೋಡಿಕೊಳ್ಳುತ್ತಿದ್ದಾರೆ.

ಅಲ್ಲದೆ ಪುಟ್ಟಂಕಯ್ಯ ನೇತೃತ್ವದಲ್ಲಿ ಅಹಿಂದ ಮುಖಂಡರ ಗುಂಪೊಂದು ಇತ್ತೀಚೆಗಷ್ಟೇ ಸಿಎಂ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ 'ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಜನರ ಕೈಗೆ ಸಿಗುತ್ತಿಲ್ಲ, ಜಿಲ್ಲೆಯ ಸಮಸ್ಯೆಗಳು ದಟ್ಟವಾಗಿದ್ದು ಅವುಗಳ ಬಗ್ಗೆ ಅಂಬರೀಶ್ ಗಮನ ಹರಿಸಿಲ್ಲ, ಮುಂದಿನ ವರ್ಷದಲ್ಲಿ ಜಿ.ಪಂ., ತಾ.ಪಂ., ವಿಧಾನಪರಿಷತ್ ಚುನಾವಣೆಗಳು ಬರುವುದರಿಂದ ಜಿಲ್ಲೆಯಲ್ಲಿ ಎಲ್ಲಾ ಸಮುದಾಯಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ನರೇಂದ್ರಸ್ವಾಮಿಯವರನ್ನು ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಪರಿಗಣಿಸಿದರೆ ಲಾಭವಾಗಲಿದೆ' ಎಂದು ಹೇಳಿಬಂದಿದ್ದಾರೆ.

ಹಾಗೆಯೇ ಮಳವಳ್ಳಿಯ ಕಾಂಗ್ರೆಸ್ ಮುಖಂಡರೂ ನರೇಂದ್ರಸ್ವಾಮಿಗೆ ಸಚಿವ ಸ್ಥಾನ ನೀಡುವಂತೆ ಅಲವತ್ತುಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನರೇಂದ್ರಸ್ವಾಮಿ ಸಚಿವ ಸ್ಥಾನಕ್ಕೆ ಪಟ್ಟು ಹಿಡಿಯುತ್ತಾರೋ... ಇಲ್ಲಾ ಸಿದ್ದರಾಮಯ್ಯನ ಮಾತಿಗೆ ಕಟ್ಟುಬಿದ್ದು ನಿಗಮ ಮಂಡಳಿ ಅಧ್ಯಕ್ಷ ಸ್ಥಾನಕ್ಕೇ ತೃಪ್ತರಾಗುತ್ತಾರೋ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಜಯಾ ಜೈಲು ಫಜೀತಿ



ಮನುಷ್ಯನ ಬದುಕಿನ ನಾಲ್ಕು ವರ್ಷಗಳೆಂದರೆ ಸಣ್ಣ ಮಾತೇ? ಅದರಲ್ಲೂ 10 ವರ್ಷಗಳ ಕಾಲ ಚುನಾವಣೆಯನ್ನೇ ಸ್ಪರ್ಧಿಸಕೂಡದೆಂದು ಮುಖ್ಯಮಂತ್ರಿಯಾಗಿ ಮೆರೆದ ರಾಜಕಾರಣಿಯೊಬ್ಬನನ್ನು ಕಟ್ಟಿಹಾಕಿಬಿಟ್ಟರೆ ಆತನ ಮನಸ್ಥಿತಿ ಏನಾಗಬೇಡ?

ತಮಿಳುನಾಡಿನ ಅನಭಿಷಕ್ತ ದೊರೆಸಾನಿಯಾಗಿ ಮೆರೆದ ಜಯಲಲಿತಾ ಬೇಗುದಿಯಿದೆಯಲ್ಲ, ಅದು ಶಬ್ದ, ಮಾತು, ಕಲ್ಪನೆಗೂ ನಿಲುಕದ್ದು. ಪರಪ್ಪನ ಅಗ್ರಹಾರದ ವಿಶೇಷ ನ್ಯಾಯಾಲಯದ ಜಡ್ಜ್ ಜಾನ್ ಮೈಕೆಲ್ ಡಿಕುನ್ಹಾ ತನ್ನ ಪಾಲಿಗೆ ಅಷ್ಟೊಂದು ನಿರ್ದಯಿಯಾಗಲಾರರು ಎಂಬ ಆಕೆಯ ನಿರೀಕ್ಷೆ ತಲೆಕೆಳಕಾದದ್ದು ಮೊನ್ನೆ ಸೆಪ್ಟೆಂಬರ್ 27ರ ಶನಿವಾರದಂದು. ಮುಖ್ಯಮಂತ್ರಿ ಸ್ಥಾನ ಚ್ಯುತಿ, ಶಾಸಕತ್ವಕ್ಕೂ ಕುತ್ತು, ನಾಲ್ಕು ವರ್ಷಗಳ ಕಾರಾಗೃಹ ಶಿಕ್ಷೆ, ನೂರು ಕೋಟಿಯ ದಂಡ ಜೊತೆಗೆ ಆ ನಂತರದ ಆರು ವರ್ಷಗಳ ಕಾಲ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ವಾಸುರೆಡ್ಡಿ ಮಗ ಸುಧಾಕರನ್, ಇಳವರಸಿ, ಗೆಳತಿ ಶಶಿಕಲಾ ಸೇರಿದಂತೆ ಜಯಲಲಿತಾರನ್ನು ವಶಕ್ಕೆ ಪಡೆಯುತ್ತಿದ್ದಂತೆ ಜಯಾ ಮುಖ ಕಪ್ಪುಗಟ್ಟಿತ್ತು.


'ಅಮ್ಮಾ ಕವಲ ಪಡಾದೇ... ಹೈಕೋರ್ಟ್ಲ ವಿಲ್ ಡೆಫನೇಟ್ಲೀ ಸ್ಟೇ ದಿಸ್...' ಎಂದು ಹಿರಿಯ ವಕೀಲರಿಬ್ಬರು ಎಷ್ಟೇ ಸಂಭಾಳಿಸಲೆತ್ನಿಸಿದರೂ ಹಣೆಯ ಗೆರೆ ಇಳಿಯಲಿಲ್ಲ. ನಿಧಾನವಾಗಿ ಸುತ್ತುವರಿದ ಪೊಲೀಸರ ಜೊತೆ ಪರಪ್ಪನ ಅಗ್ರಹಾರ ಜೈಲಿನ ದಿಕ್ಕಿಗೆ ಹೆಜ್ಜೆಯಿಟ್ಟರು ಅಮ್ಮ!


ಉಳಿದ ಏಕೈಕ ಆಶಾಕಿರಣದಂತಿದ್ದ ಹೈಕೋರ್ಟ್ ತಡೆಯ ಕ್ಷೀಣ ಯತ್ನ ಕೂಡ ವಿಫಲವಾದದ್ದು ಅಕ್ಟೋಬರ್ 7ರ ಮಂಗಳವಾರ ಮಧ್ಯಾಹ್ನಕ್ಕೆ. ದೇಶದ ಪ್ರಖ್ಯಾತ ವಕೀಲ ರಾಂಜೇಠ್ಮಲಾನಿ, ಸುಪ್ರೀಂಕೋರ್ಟ್‌ನ ಜಾಮೀನು ತಜ್ಞ ಅಮಿತ್ ದೇಸಾಯಿ ಇದ್ದೂ ಜಯಾಗೆ ಜಾಮೀನು ಸಿಗಲಿಲ್ಲ. ಪಬ್ಲಿಕ್ ಪ್ರಾಸಿಕ್ಯೂಟರ್ ಭವಾನಿಸಿಂಗ್‌ರ ಮರ್ಜಿಯನ್ನೂ ಮೀರಿ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ನೀಡಿದ ತೀರ್ಪ ಐತಿಹಾಸಿಕವಾಗಿತ್ತು. 'ಭ್ರಷ್ಟಾಚಾರವೆಂಬುದು ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆ ಕೂಡ. ಜಯಲಲಿತಾ ರಾಜಕಾರಣದ ಉನ್ನತ ದರ್ಜೆಯಲ್ಲಿರುವುದರಿಂದ ಅವರಿಗೆ ಜಾಮೀನು ನೀಡಿಬಿಟ್ಟರೆ ಅದು ಆರೋಗ್ಯಕಾರಿ ರಾಜಕಾರಣದ ಮೇಲೆ ಕೆಟ್ಟ ಪರಿಣಾಮ ಬೀರಿದಂತೆಯೇ.'


ಪರಪ್ಪನ ಜೈಲು

ಅಲ್ಲಿಗೆ ಜಯಾ ಭರವಸೆಯ ಕ್ಷೀಣ ಸಾಧ್ಯತೆಯೂ ಅಂತ್ಯ ಕಂಡಿತ್ತು. ಜೈಲು ಮುಗಿಯುವ ಸಣ್ಣ ನಿರೀಕ್ಷೆಯೂ ಅವಕಾಶವಿಲ್ಲದ ಮನಸ್ಥಿತಿ ಜಯಾ ಪಾಲಿಗೆ ಕಾಯಮ್ಮುಗೊಂಡಿತ್ತು. ಇವತ್ತಿಗೆ ಜಯಾ ಜೈಲುವಾಸದ ಹದಿನೈದನೇ ದಿನ. ಅದ್ಯಾವ ಗಳಿಗೆಯಲ್ಲಿ ಪರಪ್ಪನ ಅಗ್ರಹಾರ ಜೈಲಿಗೆ ಶಂಕುಸ್ಥಾಪನೆಯಾಯಿತೋ ಘಟಾನುಘಟಿಗಳನ್ನೆಲ್ಲ ತನ್ನ ಒಡಲೊಳಗೆ ಹಿಡಿದಿಟ್ಟಿದ್ದ ಪರಪ್ಪನ...! ಜೈಲು ಜಯಾ ಪಾದಾರ್ಪಣೆಯ ಮೂಲಕ ಬೇರೆಯದೇ ಮಜಲ್ಗಿಗೆ ಬಂದಿತ್ತು.


ಪರಪ್ಪನ ಅಗ್ರಹಾರ ಜೈಲೆಂದರೆ ಅದು ಹೇಳಿಕೇಳಿ


ಶಶಿಕಲಾ


ಜಯಾ ಸಾಕು ಮಗ ಸುಧಾಕರ್


ಇಳವರಸಿ

ಬೆಂಗಳೂರಿನ ತಮಿಳು ಕ್ರಿಮಿನಲ್‌ಗಳ ಕೊಂಪೆಯೆ. ಅಂಥಾ ಜೈಲು ಡಿಐಜಿ ಅಬ್ಬಾಯಿಯೇ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾದ ಜೈಲಿದು. ಸದ್ಯ ಇದಕ್ಕೆ ಮುಖ್ಯಸ್ಥನಾಗಿರುವವನು ಜಯಸಿಂಹ. ಪಕ್ಕಾ ಬ್ರಾಹ್ಮಣ. ಈ ಹಿಂದೆ ನಕಲಿ ಛಾಪಾ ಹಗರಣದಲ್ಲಿ ಸಿಲುಕಿ ಬಿದ್ದು ಇದೇ ಜೈಲಿನಲ್ಲೇ ಬಂಧಿಯಾಗಿದ್ದ ಜಯಸಿಂಹ ಮೈಸೂರು ಜೈಲಿನಿಂದ ಇಲ್ಲಿಗೆ ವರ್ಗಾ ಆಗಿ ಬರುವಲ್ಲಿ ನಡೆಸಿದ ಹರಸಾಹಸದ್ದೇ ಪ್ರತ್ಯೇಕ ಕತೆಯಾಗುತ್ತದೆ. ಬಂದಿಖಾನೆಗಳ ಎಡಿಜಿಪಿ ಗಗನ್‌ದೀಪ್ ಅವರ ಆಫೀಸಿನಲ್ಲಿ ಮತ್ತೊಬ್ಬ ಡಿಐಜಿ ರಾಜಾ ಸೇರಿದಂತೆ ಬಹುತೇಕ ಜೈಲಧಿಕಾರಿಗಳೆಲ್ಲ ಒಂದಲ್ಲ ಒಂದು ಕಾರಣಕ್ಕೆ


ಜಯಸಿಂಹ


ದಿವ್ಯಶ್ರೀ

ಸಮಸ್ಯೆಗೆ ಸಿಲುಕಿ ನರಳುತ್ತಿರುವವರೆ.

ವಿಚಿತ್ರವೆಂದರೆ ಪರಪ್ಪನ ಅಗ್ರಹಾರ ಜೈಲೆಂಬುದು ಅದೆಂಥಾ ಖತರ್‌ನಾಕ್ ಕ್ರಿಮಿಗೂ ಸ್ವರ್ಗ ಸದೃಶವೆ. ಪುಡಿರೌಡಿ ಕೂಡ ಇಲ್ಲಿ ಮೊಬೈಲು ಹೊಂದಲು ಸಾಧ್ಯ. ಹಾಗೆಯೇ ತಿಂಗಳಿಗಿಷ್ಟೆಂದು ಮಾಮೂಲು ಫಿಕ್ಸ್ ಮಾಡಿಕೊಂಡನೆಂದರೆ ಬೇಕಾದ ಊಟ, ಬೇಕುಬೇಕಾದಾಗೆಲ್ಲ ಪರಿಚಿತರ ಭೇಟಿ, ಬೇಕಾದ ವಾರ್ಡು ಎಲ್ಲವೂ ಸಾಧ್ಯ. ಅಂಥಾದ್ದರಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗೆ ಬೇಕಾದ ಸವಲತ್ತು ಸಿಗದಿರುತ್ತಾ?

ಸೆಪ್ಟೆಂಬರ್ 27 ರಾತ್ರಿ ಹೊತ್ತಿಗೆ ಜೈಲಿನ ಮಹಿಳಾ ವಿಭಾಗವನ್ನು ವಿಶೇಷವಾಗಿ ಜಯಾಗಾಗಿಯೇ ಸಜ್ಜುಗೊಳಿಸಿದ್ದು ಡಿಐಜಿ ಜಯಸಿಂಹ ಮತ್ತು ಕ್ಯಾಂಟೀನ್ ಸೂಪರಿಂಟೆಂಡೆಂಟ್ ಮಾದೇವ ನಾಯ್ಕ, ಮಹಿಳಾ ಕೈದಿಗಳ ಪಾಲಿಗೆ ಆಸ್ಪತ್ರೆಯಾಗಿದ್ದ ವಿಶೇಷ ವಾರ್ಡ್‌ನಲ್ಲಿದ್ದ ಎಲ್ಲಾ ಖಾಟುಗಳನ್ನು ತೆಗೆದು ಅಮ್ಮನಿಗೆಂದು ಕೇವಲ ಒಂದು ಖಾಟನ್ನಷ್ಟೇ ಇರಿಸಲಾಗಿತ್ತು. ಆ ಖಾಟಿನ ಸುತ್ತಲೂ ದುಬಾರಿಯ ಪರದೆಗಳನ್ನು ಇಳಿಬಿಡಲಾಯಿತು. ಅದು ಅಮ್ಮನ ಪ್ರೈವೇಸಿಗೆಂದು ಮಾಡಿದ ವ್ಯವಸ್ಥೆ ವಿಶಾಲ ಪರದೆಯ ಎಲ್‌ಸಿಡಿ ಟೀವಿ, ಫ್ಯಾನುಗಳು, ಹೊಚ್ಚ ಹೊಸ ಹಾಸಿಗೆ, ಅದಕ್ಕೆ ಐಷಾರಾಮೀ ಬೆಡ್‌ಶೀಟುಗಳು... ಏರ್‌ಕಂಡೀಷನ್ ವ್ಯವಸ್ಥೆ ಒಂದರ ಹೊರತಾಗಿ ಅಲ್ಲಿ ಪಂಚತಾರಾ ಹೋಟೇಲೊಂದರ ಎಲ್ಲ ವ್ಯವಸ್ಥೆಯನ್ನೂ ಕಲ್ಪಿಸಲಾಗಿತ್ತು.

ಚೆನ್ನಾಗಿದ್ದೀರಾ..!

ಅಷ್ಟಕ್ಕೂ ಬೆಂಗಳೂರೆಂಬುದೇ ಒಂದು ಏರ್‌ಕಂಡಿಷನ್ಡ್ ನಗರವಾಗಿರುವಾಗ ಅಮ್ಮನಿಗಾಗಿ ವಿಶೇಷ ಹವಾನಿಯಂತ್ರಣ ತಾನೇ ಏಕೆ ಬೇಕು?

ಇತ್ತ ದತ್ತು ಪುತ್ರ ಸುಧಾಕರ್‌ನನ್ನು ಮೇಲ್ ವಾರ್ಡಿನಲ್ಲಿ ಗಣಿ ರೆಡ್ಡಿಯ ಪರಮಾಪ್ತ ಆಲಿಖಾನ್‌ನನ್ನು ಇರಿಸಿದ್ದ ವಿಶೇಷ ಕೊಠಡಿಯಲ್ಲಿ 'ವ್ಯವಸ್ಥೆ'ಗೊಳಿಸಿದ ತರುವಾಯ ಜಯಾ ಜೊತೆ ಶಶಿಕಲಾ ಮತ್ತು ಇಳವರಸಿಯನ್ನು ವಿಶೇಷ ಆಸ್ಪತ್ರೆ ವಾರ್ಡಿಗೆ ಕರೆತಂದದ್ದು ಖುದ್ದು ಡಿಐಜಿ ಜಯಸಿಂಹ. ಅಮ್ಮಾ, ಅಮ್ಮಾ ಎಂದೇ ಮಾತುಮಾತಿಗೆ ಪ್ರೊದ ಮಾಡುತ್ತಿದ್ದ ಜಯಸಿಂಹ ಮಾತ್ರವಲ್ಲದೆ ಎಡಿಜಿಪಿ ಗಗನ್‌ದೀಪ್, ಅಡ್ಮಿನಿಸ್ಟ್ರೇಷನ್ ಡಿಐಜಿ ರಾಜಾ ಯಾವತ್ತೂ ಇಲ್ಲದೆ ಅಮ್ಮನ ದರುಶನಕ್ಕಾಗಿ ಪರಪ್ಪನ ಅಗ್ರಹಾರಕ್ಕೆ ಆಗಮಿಸಿದ್ದರು. ಇದೆಲ್ಲಕ್ಕೂ ಮು[...] ಜಯಸಿಂಹ ಅಮ್ಮನಿಗಾಗಿ ಮಾಡಿದ ಮತ್ತೊಂದು ವಿಶೇ[...] ವ್ಯವಸ್ಥೆಯೆಂದರೆ ಹಳೇಕಾಲದ ಪಾದಾಧಾರಿ ಟಾಯ್ಲೆಟ್ಟನ್ನು ಒಡೆಸಿ ಅಲ್ಲಿ ಐಷಾರಾಮೀ ಕಮೋಡ್‌ನ ವ್ಯವಸ್ಥೆಗೊಳಿಸಿದ[...]

ತನ್ನ ಸುತ್ತ ಆವರಿಸಿದ್ದ ಜೈಲಧಿಕಾರಿಗಳನ್ನು ಸಾವಕಾ[...]ವಾಗಿ ನಿಟ್ಟಿಸಿದ ಅಮ್ಮನ ಬಾಯಿಂದ ಬಂದ ಮೊದ[...] ಶಬ್ದವೇ ಅಚ್ಚ ಕನ್ನಡದಲ್ಲಿ "ಚೆನ್ನಾಗಿದ್ದೀರಾ...?" ಜಯ[...] ಬಾಯಿಂದ ಹೊರಬಿದ್ದ ಶಬ್ದಗಳು ಸ್ಪಷ್ಟವಾಗಿದ್ದವು. ಮ[...] ಕೇಳಿದರು "ಚೆನ್ನಾಗಿದ್ದೀರಾ...!"

ಇದ್ದ ಏಕೈಕ ಖಾಟಿನ ಹೊರತಾಗಿ ಇನ್ನೂ ಎರ[...] ಹಾಸಿಗೆಗಳನ್ನು ನೆಲಕ್ಕೆ ಹಾಸಲಾಗಿತ್ತು. ಒಂದು ಶಶಿಕಲ[...] ಮತ್ತೊಂದು ಇಳವರಸಿಗೆ. ಮೊದಲಿಗೆ ಜಯಾ ಆರೋ[...]ವನ್ನು ತಪಾಸಿಸಲಾಯಿತು. ಸದಾ ಕಾಲಕ್ಕೆ ಒಬ್ಬ ಡಾಕ್ಟ[...] ಮತ್ತು ಮೂವರು ನರ್ಸ್‌ಗಳನ್ನು ವಾರ್ಡಿಗೆ ಹೊ[...]ಕೊಂಡಂತೆ ಇರಿಸಲಾಗಿತ್ತು. ನಾಮಕಾವಸ್ತೆಗೆಂಬಂತೆ ಜೈಲಿ[...] ಉಡುಪನ್ನು ತಂದಿಡಲಾಯಿತು. ಜಯಾ ಆಪ್ತ ಸಹಾಯ[...] ವೀರ ಪೆರುಮಾಳ್ ಎಳನೀರು, ಹಣ್ಣುಗಳು, ಮೊಸ[...] ಇತ್ಯಾದಿ ತಿಂಡಿ ತಿನಿಸುಗಳನ್ನು ತಂದುಕೊಟ್ಟದ್ದ. ಅದ[...] ಶಶಿಕಲಾ ಮೊದಲು ರುಚಿ ನೋಡಿ ಅನಂತರ ಜಯ[...] ಕೈಗಿಡುತ್ತಿದ್ದಳು.

ಆದರೆ ಸೆಪ್ಟೆಂಬರ್ 28ರ ಹೊತ್ತಿಗೆ ಅಂದರೆ ಜಯ[...] ಜೈಲು ಪ್ರವೇಶದ ಮರುದಿನಕ್ಕೆ ಪರಪ್ಪನ ಅಗ್ರಹಾ[...] ಚಿತ್ರಣವೇ ಬೇರೆಯಾಗಿತ್ತು. ಬೆಳಗ್ಗೆಯಾದರೆ ಸಾ[...] ತಮಿಳುನಾಡಿನ ಹಿಂಡುಗಟ್ಟಲೆ ಸಂಸದರು, ಮಂತ್ರಿಗ[...] ಶಾಸಕರು, ನಿಗಮ ಮಂಡಳಿಗಳ ಅಧ್ಯಕ್ಷರೆಲ್ಲ ಸೀದಾ ಜೈ[...] ಮುಖ್ಯದ್ವಾರದೆದುರು ಬಂದು ಸೇರುತ್ತಿದ್ದರು. ಹಾಗ[...] ಅಣ್ಣಾ ಡಿಎಂಕೆ ಪಕ್ಷದ ಕಾರ್ಯಕರ್ತರಿಗಾಗಲಿ ಜಯ[...]

ಆಲಿಖಾನ್ ಕೊಠಡಿಯಲ್ಲಿ ಸುಧಾಕರ್‌ನ ಹುಚ್ಚಾಟಗಳು!

ಇತ್ತ ಜಯಾ ಪಾಡು ಹೀಗಾದರೆ ಸಾಕು ಮಗ ಸುಧಾಕರ್‌ನದ್ದು ಇನ್ನೂ ಫಜೀತಿ. ಗಣಿ ರೆಡ್ಡಿಯ ಸಕಲ ಪಾಪಗಳೆಲ್ಲಕ್ಕೂ ಕಾರಣಕರ್ತನಂತಿದ್ದ ಆಲಿಖಾನ್ ಇದ್ದ ಜೈಲು ಕೊಠಡಿಯಲ್ಲೇ ಸುಧಾಕರ್‌ನನ್ನು ಇರಿಸಲಾಗಿದೆ. ಅಷ್ಟೆಲ್ಲಾ ಆಸ್ತಿ ಸುಖ, ಸವಲತ್ತುಗಳಿದ್ದೂ ಯಾವುದೋ ಪೌರಾಣಿಕ ನಾಟಕದ ಶನಿ ವೇಷಧಾರಿಯಂತೆ ಕಾಣುವ ಸುಧಾಕರ್ ಹುಂಬ ಮತ್ತು ಅನಾಗರಿಕ. ತಾಯಿಯ ವಿರುದ್ಧವೇ ತಿರುಗಿ ಬಿದ್ದು ಜೈಲು ಕಂಡಿದ್ದ.


ಆಲಿಖಾನ್


ಈಗ ಪರಪ್ಪನ ಅಗ್ರಹಾರ ಜೈಲಿನ ವಿಶೇಷ ವಾರ್ಡಿಗೆ ಬಿದ್ದ ಸುಧಾಕರ್ ಕೋರ್ಟ್ ತೀರ್ಪಿನಿಂದ ಅದೆಷ್ಟು ಭೀತಿಗೆ ಬಿದ್ದಿದ್ದಾನೆಂದರೆ ನಡುರಾತ್ರಿ ಎದ್ದು ಕೂತು ಅಳುತ್ತಾನೆ. ಇದ್ದಕ್ಕಿದ್ದಂತೆ ತನ್ನ ಜೇಬಿನಿಂದ ತನ್ನ ಖಾಸಾ ಅಮ್ಮನ ಫೋಟೋ ಒಂದನ್ನು ತೆಗೆದದ್ದೇ ಗೋಡೆಗೆ ಅನಿಸುತ್ತಾನೆ. ಏನೋ ಧ್ಯಾನ ಮಾಡಿದಂತೆ ಮಾಡಿ ಆ ಫೋಟೋ ಜೊತೆ ಮಾತಾಡಲು ಆರಂಭಿಸುತ್ತಾನೆ. ಖಾಸಾ ತಾಯಿ ಅಂದರೆ ಅದು ಶಶಿಕಲಾಳ ತಂಗಿಯ ಫೋಟೋ. ನಡುರಾತ್ರಿ ಎದ್ದು ಕೂತು ಫೋಟೋ ಒಂದರ ಜೊತೆ ಏನೇನೋ ಮಾತಾಡಿ, ಗೋಳಾಡುವ ವಿಚಿತ್ರ ವೇಷಭೂಷಣದ ಆಸಾಮಿಯನ್ನು ಕಂಡ ಸಹಕೈದಿ ಆಲಿಖಾನ್‌ಗೆ ಹೇಗಾಗಬೇಡ?

ಕೆಲವೊಮ್ಮೆ ಮಟಮಟ ಮಧ್ಯಾಹ್ನವೇ ಸುಧಾಕರ್ ಏನೇನೋ ಮಂತ್ರ, ತಂತ್ರ, ಪೂಜೆ ಎಂದು ಕೂತುಬಿಡುತ್ತಾನಂತೆ. ಇದರರ್ಥ ಆತನ ಪಾಲಿಗೆ ಸಾಕು ಅಮ್ಮ ಜಯಾಗಿಂತಲೂ ಹೆತ್ತ ತಾಯಿಯೇ ಸರ್ವಸ್ವ. ಅದು ಜಯಲಲಿತಾ ವಿರುದ್ಧದ ಆತನ ಅಸಹನೆಯೂ ಹೌದು. ಇದ್ದಕ್ಕಿದ್ದಂತೆ ದೇವರು ಮೈಮೇಲೆ ಬಂದಂತೆ ಚಿತ್ರವಿಚಿತ್ರವಾಗಿ ಬೊಬ್ಬೆ ಹಾಕುವ ಸುಧಾಕರ್ ಯಾವ ಗಳಿಗೆಯಲ್ಲಿ ತನಗೆ ಏನು ಮಾಡುತ್ತಾನೋ ಎಂಬ ಭೀತಿಗೆ ಬಿದ್ದ ಆಲಿಖಾನ್ ಈತನನ್ನು ತನ್ನ ವಾರ್ಡಿನಿಂದ ಬದಲಾಯಿಸುವಂತೆ ಜೈಲಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾನಂತೆ. ಕನಿಷ್ಠ ತನ್ನನ್ನಾದರೂ ಬೇರೆ ವಾರ್ಡಿಗೆ ಸ್ಥಳಾಂತರಿಸಿ ಎಂದು ಗೋಗರೆಯುತ್ತಿದ್ದಾನಂತೆ.

ಪಾಪದ ದುಡ್ಡು ಮನುಷ್ಯನನ್ನು ಹೇಗೆ ಹೇಡಿಯನ್ನಾಗಿ, ಹೇತ್ಲಾಂಡಿಯನ್ನಾಗಿ ಮಾಡುತ್ತದೆ ಎಂಬುದಕ್ಕೆ ಸಾಕುಮಗ ಸುಧಾಕರ್‌ನ ಮನಸ್ಥಿತಿಗಿಂತ ಉದಾಹರಣೆ ಬೇಕೆ?

ತಲಾ ಜೈಲರ್‌ಗೆ ಅಮ್ಮನ ಐದು ಸಾವಿರದ ಭಕ್ಷೀಸು!

ಜಯಾ ಜೈಲಿನ ಊಟವನ್ನೇ ಮಾಡುತ್ತಾರೆ, ಜೈಲಿನ ಉಡುಪನ್ನು ತೊಡುತ್ತಿಲ್ಲ ಎಂಬುದನ್ನು ಬಿಟ್ಟರೆ ಮಿ[...] ವಿಷಯಗಳಲ್ಲೂ ಆಕೆ ಕಾನೂನು ವಿನಮ್ರಳೇ ಎಂದು ಜೈಲು ಡಿಐಜಿ ಜಯಸಿಂಹ ನೀಡುತ್ತಿರುವ ಹೇಳಿಕೆಗಳ ಮರ್ಮವೇ ಬೇರೆಯಿದೆ.



ಶೇಷಮೂರ್ತಿ

ಜಯಾ ಜೈಲು ಊಟ ಉಣ್ಣುವುದಿರಲಿ ಇಡೀ ಜೈಲೇ ಜಯಾ ಸೇವೆಗೆ ನಿಂತುಬಿಟ್ಟಿದೆ. ಮೇಲುನೋಟಕ್ಕೆ ಜಯಾ ಯಾರನ್ನೂ ಭೇಟಿಯಾಗುವುದಿಲ್ಲ ನಿಜ. ಹಾಗಂತ ಜೈಲಧಿಕಾರಿಗಳು ನಿಷ್ಠುರಿಗಳೆಂದೇನಲ್ಲ. ಹೊಸೂರು ರಸ್ತೆಯ ಯಾವುದೋ ಲಾಡ್ಜ್ ಒಂದರಲ್ಲಿದ್ದುಕೊಂಡು ಅಲ್ಲಿಂದಲೇ ಪ್ರತಿನಿತ್ಯ ಕರ್ತವ್ಯಕ್ಕೆ ಹಾಜರಾಗುವ ಜಯಸಿಂಹರನ್ನು ಬೇರೆಯದೇ ರೀತಿಯಲ್ಲಿ ಜಯಾ ಆಪ್ತ ಸಹಾಯಕರಾದ ವೀರ ಪೆರುಮಾಳ್ ಮತ್ತು ಪೂಕುಂಡನ್ ಪಳಗಿಸಿಕೊಂಡಿದ್ದಾರೆ.

ಇಲ್ಲದೇ ಹೋಗಿದ್ದರೆ ಜಯಸಿಂಹರ ಆಣತಿಯ ಮೇರೆಗೇ ಜೈಲು ಸೂಪರಿಂಟೆಂಡೆಂಟ್ ಶೇಷಮೂರ್ತಿ ಜಯಾ ಸೇವೆಗೆ ನಿಲ್ಲುತ್ತಿರಲಿಲ್ಲ. ಬೆಳಗ್ಗಿಯ ಉಪಾಹಾರದಿಂದ ಹಿಡಿದು ಜಯಾಗೆ ಬೇಕಾದ ಮೇಕಪ್ ಸಾಮಗ್ರಿಗಳು, ವಸ್ತ್ರ ಒಡವೆ ಪ್ರತಿಯೊಂದನ್ನು ಜೈಲಿನೊಳಕ್ಕೆ ತಂದು ಕೊಡುವ ಉಸ್ತುವಾರಿಯೂ ಇದೇ ಶೇಷಮೂರ್ತಿಯ[...] ಜೈಲು ಆವರಣದಲ್ಲೇ ಶೇಷಮೂರ್ತಿಯ ಸರ್ಕಾರಿ ವಸತಿಗೃಹವಿದೆ. ಜಯಾ ಬಂಟರಾದ ವೀರ ಪೆರುಮಾಳ್ ವ[...] ಪೂಕುಂಡನ್‌ರ ಕಾರುಗಳು ನೇರವಾಗಿ ಶೇಷಮೂರ್ತಿಯ ಮನೆಯೆದುರಿಗೇ ಬಂದು ನಿಲ್ಲುತ್ತವೆ.

ಅದರರ್ಥ ಜಯಾ ಮತ್ತು ಸಂಗಡಿಗರಿಗೆ ಬೇಕಾದ ಸಾಮಾನ್ನೆಲ್ಲ ನೇರವಾಗಿ ಶೇಷಮೂರ್ತಿಯ ಮನೆ [...] ಅಲ್ಲಿಂದಲೇ ಜೈಲಿನ ಒಳಕ್ಕೆ ರವಾನೆಯಾಗುತ್ತವೆ. ಏಕೆಂದರೆ ಶೇಷಮೂರ್ತಿಯ ಸರ್ಕಾರಿ ವಾಹನವಾದ ಸುವ[...] ನೇರವಾಗಿ ಜೈಲಿನ ಒಳಕ್ಕೇ ಹೋಗುತ್ತದೆ. ಅದನ್ನು ಯಾರೂ ತಪಾಸಣೆ ಮಾಡುವುದಿಲ್ಲವಾದ್ದರಿಂದ ಜೈಲು ವಾಹನದ[...] ಬರುವ ಅಮ್ಮನ ಸರಂಜಾಮನ್ನು ಸೇಫಾಗಿ ಅಮ್ಮನ ಮಡಿಲಿಗೆ ಸೇರಿಸಲಾಗುತ್ತದೆ. ವೀರ ಪೆರುಮಾಳ್ ವ[...] ಪೂಕುಂಡನ್ ಮಾತ್ರವಲ್ಲದೆ ತಮಿಳುನಾಡಿನ ಕೆಲ ಮಂತ್ರಿಗಳು, ಸಂಸದರ ಕಾಣಿಕೆಗಳು ಕೂಡ ಶೇಷಮೂರ್ತಿ[...] ಮೂಲಕವೇ ರವಾನೆಯಾಗುತ್ತವೆ.

ಇದಲ್ಲದೆ ಮೊನ್ನೆ ಇನ್ನೇನು ಅಮ್ಮನಿಗೆ ಜಾಮೀನು ಸಿಕ್ಕೇಬಿಟ್ಟಿತೆಂದು ಜಯಾ ಆಪ್ತ ಪೂಕುಂಡನ್ ಜೈಲಿನ [...] ಸಿಬ್ಬಂದಿಗಳಿಗೂ ತಲಾ ಐದು ಸಾವಿರ ರೂಪಾಯಿಯಂತೆ ಭಕ್ಷೀಸನ್ನೂ ಹಂಚಿಬಿಟ್ಟ. ಹೀಗೆ ಜಯಾ ಬಂಟನಿಂದ [...] ಲಕ್ಷಗಟ್ಟಲೇ ಭಕ್ಷೀಸನ್ನು ಪ್ರತಿ ಸಿಬ್ಬಂದಿಗೂ ಬಟವಾಡೆ ಮಾಡಿದ್ದು ಜೈಲಧಿಕಾರಿಗಳಾದ ತಿಮ್ಮಯ್ಯ ಮತ್ತು ಮಾ[...] ನಾಯ್ಕ. ಜೈಲಿನ ನಿಯಮವನ್ನು ಜಯಾ ಪಾಲಿಸುತ್ತಾಳೋ ಇಲ್ಲವೋ ಬಲ್ಲವರಿಲ್ಲ. ಆದರೆ ಇಡೀ ಜೈಲಂತೂ ಅ[...] ಸೇವೆಗೆ ಟೊಂಕ ಕಟ್ಟಿರುವುದಂತೂ ಸತ್ಯ.



...ಮಾನಿಗಳಿಗಾಗಲಿ ಜೈಲು ಆವರಣದೊಳಕ್ಕೆ ಪ್ರವೇಶವಿಲ್ಲ. ...ನ್ನು ಹೊಸೂರು ರಸ್ತೆಯ ಪ್ರವೇಶದಲ್ಲೇ ಪೊಲೀಸರು ...ಯುತ್ತಿದ್ದರು. ಪ್ರವೇಶವೇನಿದ್ದರೂ ಲೋಕಸಭಾ ಸದಸ್ಯರು, ...ತ್ರಿಗಳು, ಶಾಸಕರಿಗಷ್ಟೆ.

ತಮಿಳು ಪುಢಾರಿಗಳ ಸಂತೆ

...ಹಾಗೆ ಬೆಂಗಳೂರು ಪೊಲೀಸರ ಕೃಪೆಗಿಟ್ಟಿಸಿ ಜೈಲಿನ ...ಖ್ಯದ್ವಾರದ ಬಳಿ ಬಂದರೆ ಅದೇ ಕೊನೆ. ಏಕೆಂದರೆ ... ಯಾರನ್ನೂ ಭೇಟಿಯಾಗಲಿಚ್ಛಿಸುತ್ತಿಲ್ಲ. ಯಾರಿಗೂ ...ನ ದರ್ಶನ ಸಾಧ್ಯವಿಲ್ಲ. ಹೆಚ್ಚೆಂದರೆ ಗೆಳತಿ ಶಶಿಕಲಾಳನ್ನು ...ಯಾಗಬಹುದಷ್ಟೆ. ಆದರೆ ಶಶಿಕಲಾ ಕೂಡ ಜಯಾಳ ... ಕಾರ್ಯದರ್ಶಿಗಳಾದ ವೀರ ಪೆರುಮಾಳ್ ಮತ್ತು ...ಂಡನ್‌ನ ಹೊರತಾಗಿ ಬೇರೆ ಯಾರನ್ನೂ ...ಡಿಸುವುದಿಲ್ಲ. ಹಾಗಿದ್ದೂ ಪ್ರತಿನಿತ್ಯ ಡಜನ್ನುಗಟ್ಟಲೇ ...ನಾಡಿನ ಸಂಸದರು, ಮಂತ್ರಿಗಳು, ಶಾಸಕರಿಗೆ ಪರಪ್ಪನ ...ರ ಜೈಲುದ್ವಾರ ಕಾಯುವುದೇ ಕೆಲಸ.

...ಕೆಂದರೆ ಅದು ಅಮ್ಮನ ನಿಷ್ಠೆಯ ದ್ಯೋತಕ. ...ಮಾದರೆ ಸಾಕು ಜೈಲು ಮುಖ್ಯದ್ವಾರದ ಬಳಿ ...ಗುವುದು. ಅಲ್ಲಿ ಮರದ ನೆರಳಿಗೋ ಫುಟ್‌ಪಾತಿ... ವರ್ಷ ಕೂತು ಹರಟುವುದು, ಸಂಜೆಯಾಗುತ್ತಿದ್ದಂತೆ ...ಗಿ ಬೆಂಗಳೂರಿನ ತಮ್ಮ ನೆಂಟರ ಮನೆಯಲ್ಲಿ ...ಕೊಂಡು ಮತ್ತೆ ಮಾರನೇ ಬೆಳಗ್ಗೆ ಜೈಲುಗೇಟು ...ವ ತಮಿಳು ಪುಡಾರಿಗಳ ಅಮ್ಮನ ಭಕ್ತಿಗೂ ...ದೆ. ಅದು ಷೋ ಆಫ್ ಪುಢಾರಿಗಿರಿ. ಜಯಾ ... ಪಾಲಾದಾಗಿನಿಂದ ಪರಪ್ಪನ ಅಗ್ರಹಾರ ಜೈಲು ... ನ್ಯಾಯಾಲಯದ ನಡವಳಿಕೆಗಳ ವರದಿಗೆಂದು ...ನಾಡಿನ ಒಂದು ಡಜನ್ ಸುದ್ದಿ ಚಾನಲ್ಲುಗಳು ...ರಿಸಲ್ಲಿ ಠಿಕಾಣಿ ಹೂಡಿವೆ. ಜಯಾ ಟಿವಿ, ತಂತಿ ...ಪ್ಪದಿಯ ತಲೈಮುರೈ- ಹೀಗೆ ವಿವಿಧ ಟಿವಿ ...ಗಳು ಜೈಲು ಹೊರಗಿನ ಆಗುಹೋಗುಗಳನ್ನು ...ತ್ತಲೇ ಇರುತ್ತವೆ. ಆದರಲ್ಲೂ ಜಯಾ ಟಿವಿಯ ...ಗಳನ್ನು ಕಂಡರೆ ಸಾಕು ತಮಿಳು ಪುಢಾರಿಗಳು ...ಆಳಲಾರಂಭಿಸುತ್ತಾರೆ. ಎದೆ ಬಡಿದುಕೊಳ್ಳುವುದು, ...ಚಿಕೊಳ್ಳುವುದು, ನೆಲಕ್ಕೆ ಬಿದ್ದು ಒದ್ದಾಡುವುದು, ...ವುದು, ಅಳುವುದು ಇತ್ಯಾದಿಗಳೆಲ್ಲ 'ಅಮ್ಮ ನಿಷ್ಠೆಯ ... ವೈಖರಿಗಳು. ಅಲ್ಲಿ ಪಕ್ಷನಿಷ್ಠೆಗಿಂತಲೂ 'ಅಮ್ಮ ... ಮುಖ್ಯ. ಒಳಗೆ 'ಅಮ್ಮ' ತನ್ನ ಜೈಲು ...ದುಲ್ಲಿ ಕೂತು ಹೊರಗಿನ ವಿದ್ಯಮಾನಗಳನ್ನೆಲ್ಲ ಜಯಾ ... ಮೂಲಕವೇ ಗಮನಿಸುತ್ತಾರಾದ್ದರಿಂದ ...ಮ್ಮ ತಮ್ಮ ರಾಜಕೀಯ ಭವಿಷ್ಯಕ್ಕೂ ಇದೇ ...ಂಡವಾಗಬಹುದೆಂಬ ದುರಾಶೆ ತಮಿಳು ...ನೆಲದ್ದು.

ಉಗಿಸಿಕೊಂಡ ಜಯಸಿಂಹ

ಪರಪ್ಪನ ಅಗ್ರಹಾರ ಜೈಲೆಂಬುದು ತಮಿಳು ಪುಢಾರಿಗಳ ಪಾಲಿಗೆ ಅಕ್ಷರಶಃ ಪಿಕ್‌ನಿಕ್ ತಾಣವಾಗಿ ಪರಿವರ್ತನೆಗೊಂಡಿರುವುದು ಇದೇ ಕಾರಣಕ್ಕೆ. ಸಂಸದರು, ಮಂತ್ರಿಗಳು ಇತ್ತ ಜೈಲಿನ ಮುಖ್ಯದ್ವಾರದ ಹೊರಗೆ ತಮ್ಮ ನಿಷ್ಠೆ ಮೆರೆದರೆ ಅತ್ತ ಪೊಲೀಸ್ ಭದ್ರಕೋಟೆಯಾಚೆಗಿನ ಹೊಸೂರು ರಸ್ತೆಯಂತೂ ಜಯಾ ಅಭಿಮಾನಿಗಳ ಸಂತೆಯಾಗಿ ಬಿಟ್ಟಿದೆ. ಪಕ್ಷದ ಸಹಸ್ರಾರು ಕಾರ್ಯಕರ್ತರು ನಡುರಸ್ತೆಯಲ್ಲಿ ನಿಂತು ಎದೆ ಬಡಿದುಕೊಳ್ಳುವುದೇ ದಿನಚರಿಯಾಗಿ ಬಿಟ್ಟಿದೆ. ಒಂದು ಮೂಲದ ಪ್ರಕಾರ ಈ ರೀತಿ ತಮಿಳುನಾಡಿನಿಂದ ಬೆಂಗಳೂರಿಗೆ ಬಂದು ಜಯಾ ಪರ ಬೊಬ್ಬೆ ಹೊಡೆಯುವವರ ಸಂಖ್ಯೆ ಕಮ್ಮಿಯೆಂದರೂ ಹತ್ತು ಸಾವಿರ!

ಇತ್ತ ಜಯಾ ಜೈಲು ಕೊಠಡಿಯ ಹಕೀಕತ್ತೇ ಬೇರೆ. ಮೊದಲ ದಿನವೇ ಅಪರಾತ್ರಿ ವೇಳೆಗೆ ಅಮ್ಮನ ದರ್ಶನಕ್ಕೆಂದು ಹೋಗಿದ್ದ ಡಿಐಜಿ ಜಯಸಿಂಹನಿಗೆ ಎದುರಾದದ್ದು ವಾಚಾಮಗೋಚರ ಬೈಗುಳ. 'ಹೂ ಆರ್ ಯೂ... ಒಬ್ಬ ಗಂಡಸಾಗಿ ಮಹಿಳೆಯರ ಕೊಠಡಿಗೆ ಬರಬಾರದು ಎಂಬ ಕಾಮನ್‌ಸೆನ್ಸ್ ನಿನಗಿಲ್ವಾ?' ಇತ್ಯಾದಿಯಾಗಿ ಜಯಾರಿಂದ ಬೈಸಿಕೊಂಡ ನಂತರವೇ ಜಯಸಿಂಹ ಮೈಸೂರಿನಿಂದ ದಿವ್ಯಶ್ರೀ ಎಂಬ ಜೈಲು ಸೂಪರಿಂಟೆಂಡೆಂಟಳನ್ನು ಬೆಂಗಳೂರಿಗೆ ಬರಮಾಡಿಕೊಂಡಿದ್ದು.

ಹಾಗಂತ ಜಯಾ ಚಾಕರಿಗೆ ಜೈಲಲ್ಲಿ ಮಹಿಳೆಯರಿಲ್ಲವೆಂದಲ್ಲ, ನರ್ಸ್ ದಮಯಂತಿಯ ನೇತೃತ್ವದಲ್ಲಿ ನಾಲ್ವರು ನರ್ಸ್‌ಗಳು ಪಾಳಿ ಲೆಕ್ಕದಲ್ಲಿ ಜಯಾ ಚಾಕರಿಗಿಳಿದಿದ್ದಾರೆ. ಜೈಲು ಆಸ್ಪತ್ರೆ ವಾರ್ಡಿನ ಡಾಕ್ಟರ್‌ಗಳಾದ ವಿಜಯ್‌ಕುಮಾರ್ ಮತ್ತು ಕುಮಾರ್ ಹಗಲಿರುಳೆನ್ನದೆ ಜಯಾ ಆರೋಗ್ಯದ ಉಸ್ತುವಾರಿ ಹೊತ್ತಿದ್ದಾರೆ. ಸಾಲದ್ದಕ್ಕೆ ಸೂಪರಿಂಟೆಂಡೆಂಟ್ ದಿವ್ಯಶ್ರೀಯೇ ಮೇಲೆ ಬಿದ್ದು ನರ್ಸ್‌ಗಳೂ ನಾಚುವಂತೆ ಅಮ್ಮನ ಆರೈಕೆ ಮಾಡುತ್ತಾಳೆ. ಇಷ್ಟೆಲ್ಲ ಇದ್ದೂ ಅಮ್ಮನ ಮುಖದಲ್ಲಿ ನೆಮ್ಮದಿಯಿಲ್ಲ.





ಪನ್ನೀರ್‌ಸೆಲ್ವಂನ ಫಜೀತಿ

ಪ್ರತಿನಿತ್ಯ ಐದಾರು ತಮಿಳು ಪತ್ರಿಕೆಗಳ ಜೊತೆಗೆ ಎರಡು ಇಂಗ್ಲಿಷ್ ಪತ್ರಿಕೆಗಳನ್ನು ಸೇರಿಸಿ ಜಯಾ ಮುಂದಿಡಲಾಗುತ್ತದೆ. ಪತ್ರಿಕೆ ನೋಡಿದ ನಂತರ ಇದ್ದ ವಾರ್ಡಿನಲ್ಲೇ ಜಯಾ ಅಲ್ಲಿಂದಿಲ್ಲಿ ಇಲ್ಲಿಂದಲ್ಲಿಗೆ ನಡೆದಾಡುತ್ತಾರೆ. ಅಂದರೆ ಕಾಟಾಚಾರದ ವಾಕಿಂಗ್. ಆ ನಂತರ ಹೊರಗಿನಿಂದ ತರಿಸಿದ ತಿಂಡಿ, ತದನಂತರ ಶಶಿಕಲಾ ಜೊತೆ ಸಮಾಲೋಚನೆ. ಇದಾದ ಮೇಲೆ ನ್ಯೂಸ್ ಚಾನಲ್ಲುಗಳ ವೀಕ್ಷಣೆ. ಆ ನಂತರ ವೈದ್ಯಕೀಯ ತಪಾಸಣೆ. ಜೊತೆಗೆ ಆಪ್ತ ಕಾರ್ಯದರ್ಶಿಗಳಾದ ವೀರ ಪೆರುಮಾಳ್ ಮತ್ತು ಪೂಕುಂಡನ್ ಶಶಿಕಲಾ ಮೂಲಕ ರವಾನಿಸಿದ ಮಾಹಿತಿಗಳ ಪರಿಶೀಲನೆ. ಮಧ್ಯಾಹ್ನದ ಊಟದ ನಂತರ ಸಣ್ಣ ನಿದ್ದೆ. ತರುವಾಯ ಮತ್ತೆ ಟೀವಿ ವೀಕ್ಷಣೆ. ಕಾಫಿ, ಮತ್ತೆ ವಾಕಿಂಗ್, ಮತ್ತೆ ಟೀವಿ, ರಾತ್ರಿ ಫಲಾಹಾರ. ಆ ನಂತರ ತನ್ನ ಖಾಸಗಿ ವೈದ್ಯ ಡಾ. ಶಾಂತಕುಮಾರನ್‌ರಿಂದ ಆರೋಗ್ಯ ತಪಾಸಣೆ- ಹೀಗೆ ಸಾಗುತ್ತದೆ ಜಯಾ ಜೈಲು ದಿನಚರಿ.

ಈ ಮಧ್ಯೆ ತಮಿಳು ರಾಜಕಾರಣದ ಗುಲಾಮಗಿರಿಯೇ ಬೆಂಗಳೂರಿಗೆ ಸ್ಥಳಾಂತರಗೊಂಡಂತೆ ಸಂಭವಿಸಿದ್ದು ಪನ್ನೀರ್ ಸೆಲ್ವಂನ ಮಾತೃಭಕ್ತಿ. ಅತ್ತ ಚೆನ್ನೈಯಲ್ಲಿ ಅಮ್ಮನ ಫೋಟೋ ಇಟ್ಟೇ ಪ್ರಮಾಣವಚನ ಸ್ವೀಕರಿಸಿ ಕಣ್ಣೀರಿಟ್ಟ ಮುಖ್ಯಮಂತ್ರಿ ಪನ್ನೀರ್ ಸೆಲ್ವಂ ನೇರವಾಗಿ ಬೆಂಗಳೂರಿಗೇ ಬಂದುಬಿಟ್ಟಿದ್ದ. ನಡುರಾತ್ರಿ ತನಕ ಕಾದರೂ ಅಮ್ಮ ಭೇಟಿಗೆ ಅನುಮತಿಸಲೇ ಇಲ್ಲ, ರಾತ್ರಿ ಹೆಚ್‌ಎಎಲ್ ಬಳಿಯ ಲೀಲಾ ಪ್ಯಾಲೇಸ್ ಎದುರಿನ ಲಾಂಟೀನ್ ಹೋಟೇಲಿನಲ್ಲಿ ತಂಗಿ ಮತ್ತೆ ಬೆಳಗ್ಗೆ ಪರಪ್ಪನ ಅಗ್ರಹಾರ ಜೈಲಿನ ಬಾಗಿಲು ಕಾಯಬೇಕಾದ ದುರ್ಗತಿ ಮುಖ್ಯಮಂತ್ರಿ ಪನ್ನೀರ್ ಸೆಲ್ವಂನದ್ದು. ಸಂಜೆಯಾದರೂ ಅಮ್ಮನ ದರ್ಶನಭಾಗ್ಯ ಸಿಗಲೇ ಇಲ್ಲ. ಸಂಜೆ ವಿಧಿಯಿಲ್ಲದೆ ಚೆನ್ನೈಗೆ ವಾಪಸ್ಸಾದನಾದರೂ ಮಾರನೇ ದಿನ ಮತ್ತೆ ರಹಸ್ಯವಾಗಿ ಬೆಂಗಳೂರಿಗೆ ಬಂದು ಹೊಸೂರು ರಸ್ತೆಯ ರೆಸಾರ್ಟ್‌ವೊಂದರಲ್ಲಿ ಎರಡು ದಿನಗಳವರೆಗೆ ಕಾದು ಕುಳಿತ. ಏನೇ ಮಾಡಿದರೂ ಅಮ್ಮ ಅನುಮತಿಸಲಿಲ್ಲ.

ಅಂದರೆ ಅಮ್ಮ ಯಾರನ್ನೂ ಭೇಟಿಯಾಗುವುದಿಲ್ಲ. ಏಕೆಂದರೆ ಯಾರ ಮುಖ ನೋಡುವುದಕ್ಕೂ ಮನಸ್ಸಿಲ್ಲ. ಅದು ಇಳಿವಯಸ್ಸಿನ ಜಯಾ ಮೂಕವೇದನೆ. ಎಂಜಿಆರ್ ಹೃದಯ ಸಾಮ್ರಾಜ್ಞಿಯಾಗಿ ಮೆರೆದವಳು. ತಮಿಳುನಾಡಿನ ದೊರೆಸಾನಿಯಾದವಳು. ಸರ್ಕಾರಗಳ ಮೇಲೆ ಸರ್ಕಾರವನ್ನು ತಂದವಳು. ಮುಖ್ಯಮಂತ್ರಿಯನ್ನೇ ತನ್ನ ಕಾಲಿಗೆ ಬೀಳಿಸಿಕೊಂಡವಳು. ಪಟ್ಟ ಸುಖಕ್ಕೆ ಕಂದಾಯದ ಬಾಕಿ ಉಳಿಸಿಕೊಳ್ಳಬಾರದಂತೆ. ಮೆರೆದ ವೈಭವಕ್ಕೂ ದಂಡ ಕಟ್ಟಲೇಬೇಕಂತೆ. ಆದೀಗ ಈ ರೀತಿ ತನ್ನ ಇಳಿವಯಸ್ಸಿನಲ್ಲಿ ಒಟ್ಟೊಟ್ಟಾಗಿ ಎದುರಾಗಬಹುದೆಂಬ ನಿರೀಕ್ಷೆ ತಾನೇ ಆಕೆಗೆಲ್ಲಿತ್ತು?

ಅಕ್ಟೋಬರ್ 7ರ ಹೈಕೋರ್ಟ್ ವಿಚಾರಣೆಯೊಂದೇ ಆಕೆಗಿದ್ದ ತೃಣ ಮಾತ್ರದ ಭರವಸೆಯಾಗಿತ್ತೇನೊ. ಜಾಮೀನು ಸಿಕ್ಕೇ ಸಿಗುತ್ತದೆಯೆಂಬ ನಿರೀಕ್ಷೆಯಲ್ಲೇ ಇದ್ದ ಜಯಾ ಪಾಲಿಗೆ ಜಸ್ಟೀಸ್ ಚಂದ್ರಶೇಖರ್ ತೀರ್ಪು ಬರ ಸಿಡಿಲಾಗಿ ಬಡಿಯಿತು. ಜೈಲಲ್ಲೇ ತಲೆಸುತ್ತು ಬಂದು ಬಿದ್ದರಂತೆ ಅಮ್ಮ. ಜೊತೆಗಿದ್ದ ಶಶಿಕಲಾ ಮತ್ತು ಇಳವರಸಿ ಅಮ್ಮನನ್ನು ಅಪ್ಪಿಕೊಂಡು ಗೋಳಿಟ್ಟರಂತೆ. ಇಳಿವಯಸ್ಸಿನ ವ್ಯಾಧಿಗಳ ಕಾಟ ಬೇರೆ. ಸಕ್ಕರೆ ಕಾಯಿಲೆ, ಬೀಪಿ ಜೊತೆಗೆ ಥೈರಾಯಿಡ್‌ನ ಯಾತನೆ. ಹಿಂದಿನ ಹುಮ್ಮಸ್ಸಿಲ್ಲ, ಮೈಯಲ್ಲಿ ಶಕ್ತಿಯಿಲ್ಲ. ಹಾಗೊಮ್ಮೆ ಸುಪ್ರೀಂಕೋರ್ಟ್ ಕೂಡ ಕೆಳಗಿನೆರಡು ಕೋರ್ಟುಗಳ ದಾರಿಯನ್ನೇ ತುಳಿಯಿತೆಂದರೆ ನಾಲ್ಕು ವರ್ಷಗಳ ಕಾಲ ಕಂಬಿ ಎಣಿಸಲೇಬೇಕು. ಅಲ್ಲಿಯತನಕ ತಾನು ಬದುಕುಳಿಯುತ್ತೇನಾ ಎಂಬ ಆತಂಕ ಬೇರೆ. ಹಾಗೊಮ್ಮೆ ಬದುಕುಳಿದರೂ ಸತ್ತಂತೆಯೆ. ಅಧಿಕಾರ, ಅಂತಸ್ತು, ಐಷಾರಾಮ, ವೈಭವದ ಮತ್ತೊಂದು ಮಗ್ಗುಲಲ್ಲಿ ಕರಾಳ ಯಾತನೆಯಿರುತ್ತದೆ ಎಂಬ ಪರಮಸತ್ಯವನ್ನು ಜಯಾ ಇಷ್ಟೊಂದು ಹೀನಾಯವಾಗಿ ಎದುರಾಗಬೇಕಿತ್ತೆ?

■ ರಾ. ಸೋಮನಾಥ್

ಗಿಲಿಗಿಲಿ ವೆಂಕಟೇಶನ ತಮಿಳು ನಿಷ್ಠೆ

ಪರಪ್ಪನ ಅಗ್ರಹಾರ ಜೈಲು ಆವರಣದಲ್ಲಿ ಅಮ್ಮನಿಗಾಗಿ ಬೊಬ್ಬೆ ಹಾಕುವ ತಮಿಳುನಾಡಿನ ಮಂತ್ರಿ, ಸಂಸದರಿಗೆಲ್ಲ ಮಧ್ಯಾಹ್ನವಾಗುತ್ತಿದ್ದಂತೆಯೇ ಬಿರಿಯಾನಿ ಪ್ಯಾಕೆಟ್ಟುಗಳು ರವಾನೆಯಾಗುತ್ತವೆ. ನಡುನಡುವೆ ಕಾಫಿ-ಟೀ ಕೂಡ ಸರಬರಾಜಾಗುತ್ತದೆ. ಹಾಗೇ ಸಪ್ಪೂರದ ಕುರುಚಲಗಡ್ಡದ ಆಸಾಮಿಯೊಬ್ಬ ಇದೆಲ್ಲ ವ್ಯವಸ್ಥೆಯನ್ನೂ ಓಡಾಡಿಕೊಂಡು ಮಾಡುವುದು ಕಾಣಿಸುತ್ತದೆ. ಆತನೇ ಬಿಬಿಎಂಪಿಯ ಖದೀಮ ಕಂಟ್ರಾಕ್ಟರ್ ಗಿಲಿಗಿಲಿ ವೆಂಕಟೇಶ.



ಶ್ರೀರಾಂಪುರದ ಪ್ರಕಾಶ್ ನಗರದ ಅಯ್ಯಪ್ಪಸ್ವಾಮಿ ದೇವಸ್ಥಾನದ ಹಿಂಬದಿಯ ತನ್ನ ಐಷಾರಾಮಿ ಬಂಗಲೆಯಿಂದಲೇ ಜಯಲಲಿತಾರ ಜೈಲು ಉಸಾಬರಿಯನ್ನೆಲ್ಲ ನಿಭಾಯಿಸುವ ಈ ಗಿಲಿಗಿಲಿ ವೆಂಕಟೇಶನಿಗೂ ತಮಿಳುನಾಡಿನ ಉಸಾಬರಿಗೂ ಎತ್ತಣದಿಂದೆತ್ತ ಸಂಬಂಧ?

ಬಿಬಿಎಂಪಿಯ ಇಂಜಿನಿಯರ್‌ಗಳು, ಬೆಂಗಳೂರಿನ ರಾಜಕಾರಣಿಗಳೆಲ್ಲರ ಪಾಲಿಗೆ ಖತರ್‌ನಾಕ್ ಕಂಟ್ರಾಕ್ಟರ್ ಎಂದೇ ಚಾಲ್ತಿಯಲ್ಲಿರುವ ಗಿಲಿಗಿಲಿ ವೆಂಕಟೇಶ್ ಹೇಳಿಕೇಳಿ ಬಿಜೆಪಿಯ ಮಾಜಿ ಮಂತ್ರಿ ಸುರೇಶ್ ಕುಮಾರ್‌ರ ನಂಬಿಕಸ್ಥ ಬಂಟ. ಆದರೆ ಈತನ ಕಾರ್ಯವ್ಯಾಪ್ತಿ ಕೇವಲ ಬೆಂಗಳೂರಿಗಾಗಲಿ ಕರ್ನಾಟಕಕ್ಕಾಗಲೀ ಸೀಮಿತಗೊಂಡಿಲ್ಲ. ಪ್ರತಿ ವರ್ಷ ಕಮ್ಮಿಯೆಂದರೂ ನೂರು ಕೋಟಿ ಮೊತ್ತದ ಕಾಮಗಾರಿಯನ್ನು ಕೇವಲ ತಮಿಳುನಾಡೊಂದರಲ್ಲೇ ಮಾಡುತ್ತಾನೆ. ಅನಾದಿಕಾಲದಿಂದಲೂ ಬಿಬಿಎಂಪಿಯ ಭ್ರಷ್ಟ ಇಂಜಿನಿಯರ್‌ಗಳನ್ನು ಬ್ಲಾಕ್‌ಮೇಲ್ ಮಾಡಿಕೊಂಡೇ ನೂರಾರು ಕೋಟಿಯ ಬೋಗಸ್ ಬಿಲ್ ಬಾಚಿಕೊಳ್ಳುವ ಗಿಲಿಗಿಲಿ ವೆಂಕಟೇಶ ಸಾಮಾನ್ಯನಲ್ಲ, ಬೆಂಗಳೂರಿನ ಬಹುತೇಕ ತಮಿಳು ರೌಡಿಗಳ ಪಾಲಿಗೆ ಈತನೇ ಅನ್ನದಾತ.

ಒಂದಾನೊಂದು ಕಾಲಕ್ಕೆ ಶ್ರೀರಾಂಪುರದ ರೌಡಿ ಸಿದ್ದನ ಶಿಷ್ಯನಾಗಿದ್ದ ಗಿಲಿಗಿಲಿ ಕೂಡ ಪುಡಿ ರೌಡಿಯೇ. ಸಿದ್ದನ ಕೊಲೆಯಾದಾಗ ಆತನ ಶವದ ಮುಂದೆ ಬಿದ್ದು ಒದ್ದಾಡಿ ತಾನೇ ಸೇಡುತೀರಿಸುವುದನ್ನು ಮುಗಿಸದೇ ಬಿಡಲಾರೆ ಎಂದು ಶಪಥಗೈದವನು ಕಾಲಕ್ರಮೇಣ ಬೋಗಸ್ ಬಿಲ್ ಕಂಟ್ರಾಕ್ಟು ದಂಧೆಗೆ ನಿಂತ. ವರ್ಷಂಪ್ರತಿ ಬಿಬಿಎಂಪಿಯ ನೂರು ಕೋಟಿಯಲ್ಲದೆ ಕೆಆರ್‌ಡಿಎಲ್‌ನ ನೂರಾರು ಕೋಟಿ ಕಾಮಗಾರಿಯನ್ನೂ ಹಿಡಿದು ದುಡ್ಡು ಬಾಚುತ್ತಾನೆ. ಮೂಲತಃ ತಮಿಳುನಾಡು ಮೂಲದ ಈತನನ್ನು ಜಯಲಲಿತಾಗೆ ಪರಿಚಯಿಸಿದ್ದು ಕರ್ನಾಟಕ ಅಣ್ಣಾ ಡಿಎಂಕೆ ಪಕ್ಷದ ನಾಯಕ ಪುಗಳೇಂದಿ ಎಂಬಾತ. ಜಯಲಲಿತಾ ಜೊತೆ ಈತನಿಗೆ ನೇರ ಸಂಪರ್ಕವೂ ಇದೆ. ಪ್ರತಿಬಾರಿ ಜಯಾ ಪರಪ್ಪನ ಅಗ್ರಹಾರದ ಕೋರ್ಟಿಗೆಂದು ಬಂದಾಗಲೂ ಇದೇ ಗಿಲಿಗಿಲಿಯೇ ಎಲ್ಲ ವ್ಯವಸ್ಥೆಯನ್ನೂ ಮಾಡುತ್ತಿದ್ದ. ಈಗ ಜಯಾ ಬಂಟರಿಗೆಲ್ಲ ಬಿರಿಯಾನಿ ಹಂಚುತ್ತಾನೆ. ಪಬ್ಲಿಕ್ ಪ್ರಾಸಿಕ್ಯೂಟರ್ ಭವಾನಿ ಸಿಂಗ್‌ರನ್ನು ಜಯಾ ಪರ ಸರಿ ಮಾಡಿದ್ದೇ ತಾನು ಎಂದು ರಾಜಾರೋಷವಾಗಿ ಕೊಚ್ಚಿಕೊಳ್ಳುವ ಖದೀಮ ಕಂಟ್ರಾಕ್ಟರ್ ಗಿಲಿಗಿಲಿ ವೆಂಕಟೇಶನ ಬಿಬಿಎಂಪಿ ವಂಚನೆಯನ್ನು ತನಿಖೆ ಮಾಡಿದರೆ ಸಾಕು, ಅಮ್ಮನ ಜೊತೆ ಈತನೂ ಪರಪ್ಪನ ಅಗ್ರಹಾರ ಜೈಲಿನ ಕಂಬಿ ಎಣಿಸಬೇಕಾಗುತ್ತದೆ.

ವಿಷಾದ

ಪತ್ರಿಕೆಯ ಮೇ 27, 2009ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಪೋರಿ ಹಿಂದೆ ಹೋರಿ' ಎಂಬ ಮುಖಪುಟ ಲೇಖನವು ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತಿ ಸ್ವಾಮಿಗಳನ್ನು ಕುರಿತಾಗಿದ್ದು ಆ ವರದಿಯು ರಾಮಚಂದ್ರಾಪುರ ಮಠದ ಅನೇಕ ಭಕ್ತರ ಮನಸ್ಸಿಗೆ ನೋವನ್ನುಂಟು ಮಾಡಿ ಅವರ ಧಾರ್ಮಿಕ ನಂಬಿಕೆಗಳಿಗೆ ಘಾಸಿಯುಂಟು ಮಾಡಿರುವುದು ಪತ್ರಿಕೆಯ ಗಮನಕ್ಕೆ ಬಂದಿದೆ.

ಸದರಿ ವರದಿಯು ರಾಮಚಂದ್ರಾಪುರ ಮಠದ ಅನುಯಾಯಿಗಳ ಮನಸ್ಸಿಗೆ ನೋವನ್ನುಂಟು ಮಾಡುವ ದುರುದ್ದೇಶದಿಂದಾಗಲೀ ಅಥವಾ ಶ್ರೀರಾಘವೇಶ್ವರ ಸ್ವಾಮಿಯವರ ಘನತೆ ಕುಂದಿಸುವ, ತೇಜೋವಧೆ ಮಾಡುವ ಉದ್ದೇಶದಿಂದಾಗಲೀ ಬರೆದದ್ದಾಗಿರಲಿಲ್ಲ. ಬದಲಾಗಿ ಸಾರ್ವಜನಿಕ ಜೀವನದಲ್ಲಿರುವವರ ಹೊಣೆಗಾರಿಕೆಯನ್ನು ಪ್ರತಿಪಾದಿಸುವ ಸದುದ್ದೇಶದಿಂದಷ್ಟೇ ಆ ವರದಿಯನ್ನು ಪ್ರಕಟಿಸಲಾಗಿತ್ತು.

ಆದಾಗ್ಯೂ, ಸದರಿ ವರದಿಯ ತಲೆಬರಹ ಹಾಗೂ ವಿವರಗಳು ಮಠದ ಭಕ್ತರಿಗೆ ನೋವನ್ನುಂಟು ಮಾಡಿರುವುದರಿಂದ ಆ ಬಗ್ಗೆ ಲಂಕೇಶ್ ವಾರ ಪತ್ರಿಕೆಯು ಈ ಮೂಲಕ ವಿಷಾದ ವ್ಯಕ್ತಪಡಿಸುತ್ತದೆ.

-ಸಂಪಾದಕ

ಮೂರು ಸಾವಿರ ಮಠ

ಗುರುಸಿದ್ದನ ಪೀಠ ತ್ಯಾಗದ ನಾಟಕ


ಗುರುಸಿದ್ಧೇಶ್ವರ

ಉತ್ತರ ಕರ್ನಾಟಕದ ಪ್ರಭಾವೀ ಮಠವಾದ ಹುಬ್ಬಳ್ಳಿಯ ಮೂರು ಸಾವಿರ ಮಠ ಮತ್ತೆ ಸುದ್ದಿಯಲ್ಲಿದೆ. ಮಠದ ಹಾಲಿ ಸ್ವಾಮಿ ಗುರುಸಿದ್ದ ರಾಜಯೋಗೀಂದ್ರ ಸ್ವಾಮಿ ಮೂರುಕೋಟಿ ಸಾಲ ಮಾಡಿಕೊಂಡು ಅದನ್ನು ತೀರಿಸೋದಕ್ಕೆ ಆಗದೆ, ಪೀಠ ತ್ಯಾಗದ ಹೈಡ್ರಾಮಾ ಸೃಷ್ಟಿ ಮಾಡಿ ಕೊನೆಗೂ ಡೀಲ್ ಕುದುರಿಸಿಕೊಂಡಿದ್ದಾನೆ!

ಈ ಹಿಂದೆ ಮಠದ ಹೈಪವರ್ ಕಮಿಟಿ ಸ್ವಾಮಿಯ ಬಾಲ ಕಟ್ ಮಾಡಿ ಮೂಲೆಗೆ ಸೇರಿಸಿದ್ದರು. ಇದರಿಂದ ಹೊರ ಬರೋದಕ್ಕೆ ಮತ್ತು ಹಣಕಾಸಿನ ಮೇಲೆ ಹಿಡಿತ ಸಾಧಿಸೋದಕ್ಕೆ ಗುರುಸಿದ್ದ 'ಪೀಠ ತ್ಯಾಗ', 'ಉತ್ತರಾಧಿಕಾರಿಯ ನೇಮಕ' ಎಂತೆಲ್ಲಾ ಸುದ್ದಿ ತೇಲಿಬಿಟ್ಟು ಈಗ ಅದೇ ಪೀಠದಲ್ಲಿ ಇನ್ನಷ್ಟು ಗಟ್ಟಿಯಾಗಿ ವಕ್ಕರಿಸಿದ್ದಾನೆ.

ನಾಡಿನ ಪ್ರತಿಷ್ಠಿತ ಶ್ರೀಮಂತ ಮಠಗಳಲ್ಲಿ ಮೂರು ಸಾವಿರ ಮಠಕ್ಕೆ ತನ್ನದೇ ಆದ ಸ್ಥಾನವಿದೆ. ಆದರೂ ಐತಿಹಾಸಿಕ ನೆಲೆಯುಳ್ಳ ಈ ಮಠಕ್ಕೆ ಕೆಲವು ದಶಕಗಳಿಂದ ಉತ್ತರಾಧಿಕಾರಿಯ ನೇಮಕವೊಂದೇ ಶಾಪವಾಗಿ ಪರಿಣಮಿಸಿದೆ. ಸದಾ ಈ ವಿಷಯಕ್ಕೆ ಸಂಬಂಧಿಸಿದಂತೆ ವಾದವಿವಾದಗಳು ನಡೆಯುತ್ತಲೇ ಬಂದಿದೆ.

ಹಿಂದಿನ ಸ್ವಾಮಿ ಮುಜಗಂ ನಿಧನದ ನಂತರ ಮಠದ ಅಂಗಳದಲ್ಲಿ ಎದ್ದ ಅನೇಕ ವಿವಾದಗಳನ್ನು ನಿವಾರಿಸಲು ಮತ್ತು ಮಠದ ಅಪಾರ ಆಸ್ತಿಯ ಮೇಲೆ ನಿಗಾ ಇಡಲು ಐದು ಜನ ಸದಸ್ಯರ ಹೈಪವರ್ ಕಮಿಟಿಯನ್ನು ರಚಿಸಲಾಗಿತ್ತು, ಈ ಸಮಿತಿ ಸ್ವಾಮಿಗಳ ವ್ಯವಹಾರದ ಮೇಲೆ ಒಂದು ಕಣ್ಣಿಟ್ಟಿತ್ತು, ಆದರೂ ಗುರುಸಿದ್ದ ಸ್ವಾಮಿ ಕದ್ದುಮುಚ್ಚಿ ಆಸ್ತಿ ಮಾರಿ ಸಮಿತಿಯಿಂದ ಆಗಾಗ ಛೀ.. ಥೂ.. ಅಂತ ಉಗಿಸಿಕೊಂಡದ್ದೂ ಆಗಿತ್ತು,

ಐಷಾರಾಮಿ ಬದುಕು, ಹಲವಾರು 'ಮೂಗುತಿ'ಗಳನ್ನು, ಇತ್ಯಾದಿ ಚಟಗಳನ್ನು ಹೊಂದಿರುವ ಗುರುಸಿದ್ದ ಅವನ್ನೆಲ್ಲ ಮೈಂಟೇನ್ ಮಾಡಲು ಕೈಸಾಲ ಮಾಡಲು ಶುರುಹಚ್ಚಿಕೊಂಡ. ಕಾಲ ಉರುಳಿದಂತೆ ಅವೆಲ್ಲ ಮೈಗೆ ಮೆತ್ತಿಕೊಂಡವು. ಒಂದು ಮೂಲದ ಪ್ರಕಾರ ಈಗ ಗುರುಸಿದ್ದ ಮಾರಿಕೊಂಡಿರುವ ಒಟ್ಟು ಸಾಲದ ಮೊತ್ತ ಬರೋಬ್ಬರಿ ಮೂರು ಕೋಟಿ ರೂಪಾಯಿಗಳಂತೆ. ಅಷ್ಟು ದೊಡ್ಡ ಸಾಲದ ಸುಳಿಯಲ್ಲಿ ಸಿಲುಕಿಕೊಂಡಿದ್ದ ಗುರುಸಿದ್ದ ಅದರಿಂದ ಹೊರಬರಲು ನಡೆಸಿದ ಸೆಂಟಿಮೆಂಟಲ್ ನಾಟಕವೇ 'ಪೀಠ ತ್ಯಾಗ'. ತನ್ನನ್ನು ನಿಯಂತ್ರಿಸುತ್ತಿದ್ದ ಸಮಿತಿಯ ವಿರುದ್ಧ ಮಠದ ಭಕ್ತರನ್ನು ಎತ್ತಿಕಟ್ಟಿ, ತಾನೂ ಮಠದಿಂದ ಎಸ್ಕೇಪ್ ಆಗಿ, ಸಮಿತಿಗೆ ಬತ್ತಿ ಇಡೋದರಲ್ಲಿ ಸ್ವಾಮಿ ಸದ್ಯಕ್ಕೆ ಗೆದ್ದಿದ್ದಾನೆ.

ಮೂರು ಸಾವಿರ ಮಠದ ಜೊತೆ ಹಾನಗಲ್ಲಿನ ಕುಮಾರೇಶ್ವರ ಮಠಕ್ಕೂ ಪೀಠಾಧಿಪತಿಯಾಗಿರುವ ಗುರುಸಿದ್ದ ಕಳೆದ ಒಂದೂವರೆ ದಶಕದಿಂದ ಎರಡೂ ಮಠಗಳ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾನೆ. ಹಾನಗಲ್ ಮಠದಲ್ಲಿ ಇವನನ್ನು ನಿಯಂತ್ರಿಸಲು ಯಾವ ಸಮಿತಿಯೂ ಇಲ್ಲ, ಅಲ್ಲಿ ಈತನದ್ದೇ ದರ್ಬಾರು. ಆದರೆ, ಹುಬ್ಬಳ್ಳಿ ಮಠದಲ್ಲಿ ಪ್ರಶ್ನೆ ಮಾಡುವಂತಹ ಜನ ಇರುವುದರಿಂದ ಗುರುಸಿದ್ದನ ಯಡವಟ್ಟು ಕಾರ್ಯಗಳಿಗೆ ಆಗಾಗ ಬ್ರೇಕ್ ಬೀಳುತ್ತಿತ್ತು,

ಇದನ್ನು ಸಹಿಸದ ಗುರುಸಿದ್ದ ಮಠಕ್ಕೆ ಬರುವ ಭಕ್ತರ ಮುಂದೆ ಕಣ್ಣೀರು ಹಾಕಿ "ನನ್ನ ಮನಸ್ಸಿಗೆ ನೋವಾಗಿದೆ. ಕೆಲವರು ನನ್ನನ್ನು ಮಠದಿಂದ ಹೊರಹಾಕುವ ಸ್ಕೆಚ್ ಹಾಕ್ತಿದ್ದಾರೆ" ಎಂತೆಲ್ಲಾ ಗೋಳಾಟ ಶುರುಮಾಡಿದ್ದ. ಇದು ಕಳೆದ ಆರು ತಿಂಗಳಿಂದ ನಡೆಯುತ್ತಾ ಬಂದಿತ್ತು, ಫೈನಲ್ಲಾಗಿ ಒಂದು ವಾರದ ಹಿಂದೆ "ಮೂರು ಸಾವಿರ ಮಠದ ಪೀಠವನ್ನು ತ್ಯಾಗ ಮಾಡಿ ಹಾನಗಲ್ಲಿಗೆ ಹೋಗಿಬಿಡ್ತೀನಿ" ಎಂದು ಡೈಲಾಗ್ ಹೊಡೆದ ಗುರುಸಿದ್ದ ಏಕಾಏಕಿ ಹಾನಗಲ್ಲಿಗೆ ಶಿಫ್ಟಾಗಿ ಅಲ್ಲಿಂದಲೇ ಎಲ್ಲಾ ಸೀನ್ ಕ್ರಿಯೇಟ್ ಮಾಡಲು ಪ್ರಾರಂಭಿಸಿದ.

ಆಗ ಮೂರು ಸಾವಿರ ಮಠದ ಅಂಗಳದಲ್ಲಿ ಭಕ್ತರ ಪ್ರತಿಭಟನೆ ಜೋರಾಯಿತು. ಅದೇ ಹೊತ್ತಿಗೆ 'ಗುರುಸಿದ್ದ ಕುರ್ಚಿ ಖಾಲಿ ಮಾಡಿದರೆ, ಆ ಜಾಗೆಯ ಮೇಲೆ ನನ್ನ ಅಧಿಕಾರವಿದೆ' ಎನ್ನುತ್ತಾ ಹಿಂದಿನ ಸ್ವಾಮಿಗಳ ವಿಲ್ ಹಿಡಿದುಕೊಂಡು ತಮ್ಮದೂ ಪವಾಡ ತೋರಿಸಲು ಎರಡುಮೂರು ಜನ ಸ್ವಾಮಿಗಳು ಎದ್ದುನಿಂತರು. ಗುರುಸಿದ್ದ ಹುಟ್ಟು ಹಾಕಿದ ನಾಟಕ ಸ್ವಲ್ಪ ಹೆಚ್ಚೂ ಕಡಿಮೆಯಾಗಿದ್ದರೂ, ನಿಜವಾಗ್ಲು ಆತ ಕುರ್ಚಿ ಕಳೆದುಕೊಂಡು ಪರ್ಮನೆಂಟಾಗಿ ಹಾನಗಲ್ ಸೆಟ್ಲಾಗೋದಂತೂ ಗ್ಯಾರಂಟಿಯಾಗಿತ್ತು.

ವಿವಾದದಲ್ಲೇ ಪೀಠಕ್ಕೇರಿದ್ದ

ಒಂದು ಕಾಲದಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ರಾಂತಿಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಮೂಡಿಸುವ ಮೂಲಕ ಶಕ್ತಿ ಕೇಂದ್ರ ಎನಿಸಿಕೊಂಡಿದ್ದ ಹಾನಗ[…] ಕುಮಾರಸ್ವಾಮಿ ಮಠಕ್ಕೆ ಗುರುಸಿದ್ದ ರಾಜಯೋಗೀಂ[…] ಸ್ವಾಮೀಜಿ 1984 ರಲ್ಲಿ ಪೀಠಾಧಿಪತಿಯಾಗಿ ಪಟ್ಟಾಧಿಕ[…] ಸ್ವೀಕರಿಸಿದರು. ಆರಂಭದಿಂದಲೂ ಗುರುಸಿದ್ದ ಆಗಾ[…] ಮಾಡಿಕೊಳ್ಳುತ್ತಿದ್ದರೂ, ಧಾರ್ಮಿಕ ಜಾಗೃತಿ ಮೂಡಿಸು[…] ಕಾಯಕ ಮಾತ್ರ ಸ್ವಾಮೀಜಿ ನಿಷ್ಠೆಯಿಂದ ಮಾಡುತ್ತಿದ್ದ[…] ಆದರೆ ಯಾವಾಗ ಹುಬ್ಬಳ್ಳಿ ಮೂರು ಸಾವಿರ ಮ[…] ಉತ್ತರಾಧಿಕಾರಿಯಾಗಬೇಕು ಎನ್ನುವ ಆಸೆ ಈತನ[…] ಚಿಗುರಿತೋ ಆಗಿನಿಂದ ಕಾಯಂ ವಿವಾದಗಳ ಸುಳಿಯ[…] ಸಿಲುಕುತ್ತಾ ಸಾಗಿದ.

ಗುರುಸಿದ್ದನಿಗಿಂತ ಮೊದಲು ಮೂರು ಸಾವಿರ ಮ[…] ಪೀಠಾಧಿಪತಿಯಾಗಿದ್ದ ಡಾ. ಗಂಗಾಧರ ರಾಜಯೋಗೀಂ[…] ಸ್ವಾಮೀಜಿ 1958 ರಲ್ಲಿ ಮಠದ ಗದ್ದುಗೆ ಹಿಡಿದು ಮ[…] ಸಾಕಷ್ಟು ಪ್ರಮಾಣದಲ್ಲಿ ಚೈತನ್ಯ ತುಂಬಿದ್ದರು. ಆದ[…] ತಮ್ಮ ಇಳಿವಯಸ್ಸಿನಲ್ಲಿ ಪೀಠಾಧಿಕಾರಿ ನೇಮಿಸಲು ಹೋ[…] ವಿವಾದವನ್ನು ಮೈಮೇಲೆಳೆದುಕೊಂಡಿದ್ದರು. ಮೊದ[…] ಅವರು ತಮ್ಮ ಉತ್ತರಾಧಿಕಾರಿ ಎಂದು ಆಯ್ಕೆ ಮಾಡಿ[…] ರುದ್ರಮುನಿಸ್ವಾಮಿಯನ್ನು ಕೈಬಿಟ್ಟು ಕುಮಾರೇಶ್ವರ ಮ[…] ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಯ[…] ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡಿ ಮಠವ[…] ಮೊದಲ ಬಾರಿಗೆ ವಿವಾದದ ಕೇಂದ್ರವನ್ನಾಗಿ ಮಾಡಿ[…] ಕೀರ್ತಿ ಕೂಡ ಮುಜಗಂ ಅವರಿಗೆ ಸಲ್ಲುತ್ತದೆ.

ಪ್ರತಿಷ್ಠಿತ ಮಠದ ಪೀಠ ಕೈತಪ್ಪಿದ್ದರಿಂದ ಕಂಗಾಲ[…] ರುದ್ರಮುನಿದೇವರು ಮುಜಗಂ ನಿರ್ಧಾರವನ್ನು ವಿರೋ[…] ಕೋರ್ಟ್ ಮೆಟ್ಟಲು ಕೂಡ ಹತ್ತಿದರು. ಹಲವಾ[…] ವರ್ಷಗಳ ಕಾಲ ಮೂರು ಸಾವಿರ ಮಠದಲ್ಲಿ ಕಾವ[…] ಮಾರಾಮಾರಿ ನಡೆದವು. ನಂತರ ಸುಪ್ರೀಂಕೋರ್ಟ[…] ನಿರ್ದೇಶನದಂತೆ ಬಂದಿದ್ದ ದೂತರು, ಮಠದ ಉ[…] ಸಮಿತಿ ಹಾಗೂ ಭಕ್ತರ ಮಧ್ಯೆ ಸಂಧಾನ ಸಭೆ ನಡ[…] ಅಲ್ಲಿ ರುದ್ರಮುನಿ ಸ್ವಾಮೀಜಿ ಬದಲಾಗಿ ಗುರು[…] ರಾಜಯೋಗೀಂದ್ರರನ್ನು ಪೀಠಾಧಿಪತಿಯಾಗಿ ನೇಮಿ[…] ನಿರ್ಧಾರ ಕೈಗೊಳ್ಳಲಾಯಿತು. ವಿವಾದದಲ್ಲೇ 19[…] ಮಾರ್ಚ್ 29 ರಂದು ಗುರುಸಿದ್ಧ ರಾಜಯೋಗಿ[…] ಪೀಠಾಧಿಕಾರ ವಹಿಸಿಕೊಂಡರು.


ಮಠದ ಇತಿಹಾಸ[…]

ಹುಬ್ಬಳ್ಳಿ ಮೂರು ಸಾವಿರ ಮಠ ಒಂದು ಪ್ರಮುಖ[…] ಧಾರ್ಮಿಕ ಕೇಂದ್ರ. ಭಕ್ತರ ಬೇಡಿಕೆಗಳನ್ನೆಲ್ಲಾ ಪೂರೈಸುತ್ತಿರುವಂತ[…] ಇಲ್ಲಿಯ ಅಂಗಾರ. ಹಿಂದೂ ಮುಸ್ಲಿಂ ಜನಾಂಗದ ಶಾಂತಿಯ[…] ಮಂದಿರ ಧರ್ಮಕಾರ್ಯಗಳ ಜೊತೆಜೊತೆಯಲ್ಲೇ ಶೈಕ್ಷಣಿಕ[…] ರಂಗದಲ್ಲೂ ಸಲ್ಲಿಸಿರುವ ಸೇವೆ ಶ್ಲಾಘನೀಯ.

ಹುಬ್ಬಳ್ಳಿ ಅನ್ನೋ ಐತಿಹಾಸಿಕ ತಾಣ[…] ಹುಬ್ಬಳ್ಳಿಯಲ್ಲಿರುವ ಮೂರು ಸಾವಿರ ಮಠದ ಬಗ್ಗೆ 12[…] ಶತಮಾನದಲ್ಲೇ ಉಲ್ಲೇಖವಿದೆಯಂತೆ. ಶಿರಸಿಯಲ್ಲಿ[…] ಪತ್ತೆಯಾಗಿರುವ ಶಿಲಾಶಾಸನವೊಂದರಲ್ಲಿ ಮಠದ ಬಗ್[…] ಮಾಹಿತಿ ಇದೆ ಅನ್ನೋದು ಹಲವು ಇತಿಹಾಸತಜ್ಞ[…] ವಾದ. ಕಲ್ಯಾಣ ಕ್ರಾಂತಿಯ ನಂತರ ಅಲ್ಲಿ ನೆಲೆಸಿದ್ದ ಸಹಸ್ರಾರು[…] ಶರಣರು ಪಲಾಯನಗೈದಿದ್ದರು. ಆ ಪೈಕಿ ಮೂರು ಸಾವಿ[…] ಶರಣರು ಹುಬ್ಬಳ್ಳಿಯ ಮಠಕ್ಕೆ ಆಗಮಿಸಿ ಆಶ್ರಯ[…] ಪಡೆದುಕೊಂಡಿದ್ದರಂತೆ.

ಮಠ ಪ್ರಾಮುಖ್ಯತೆಗೆ ಬಂದದ್ದು 1958 ರ ನಂತರ[…] ಆಗ ಪೀಠಾಧಿಪತಿಯಾಗಿ ಅಧಿಕಾರ ವಹಿಸಿಕೊಂಡ[…] ಗಂಗಾಧರ ರಾಜಯೋಗೀಂದ್ರ ಸ್ವಾಮೀಜಿಯವರು ಮುಜಗ[…] ಎಂದೇ ಜನಪ್ರಿಯರಾಗಿದ್ದರು. ಕಾಡಸಿದ್ಧೇಶ್ವರ ಕಾಲೇಜು[…] ಜೆ.ಜೆ. ಕಾಮರ್ಸ್ ಕಾಲೇಜು ಸೇರಿದಂತೆ ಹಲವಾರು ಶಿಕ್ಷಣ[…] ಸಂಸ್ಥೆಗಳನ್ನು ಪ್ರಾರಂಭಿಸಿದ ಮುಜಗಂ ಈ ಪ್ರದೇಶದ[…] ಮೊದಲ ಮಹಿಳಾ ಕಾಲೇಜನ್ನೂ ಪ್ರಾರಂಭಿಸಿ ಸಹಸ್ರಾರು[…] ಯುವತಿಯರಿಗೆ ಉನ್ನತ ಶಿಕ್ಷಣ ದೊರೆಯುವಂ[…] ಮಾಡಿದ್ದರು.

ಧಾರ್ಮಿಕ ಮತ್ತು ಶೈಕ್ಷಣಿಕ ಸೇವೆಯ ಜೊತೆ[…] ಸಾಮಾಜಿಕ ಕಾರ್ಯದ ಮೂಲಕ ಸರ್ವ ಜನಾಂಗ[…] ಸಾಮರಸ್ಯ ಬೆಸೆಯುವಲ್ಲೂ ಮಠ ಪ್ರಮುಖ ಪಾ[…] ವಹಿಸಿತ್ತು. ಸೂಕ್ಷ್ಮ ಪ್ರದೇಶವಾಗಿರುವ ಹುಬ್ಬಳ್ಳಿಯ[…] ಹಿಂದೂ ಮುಸ್ಲಿಂರ ಮಧ್ಯೆ ಸಾಮರಸ್ಯ ಮೂಡಿಸುವ[…] ಮುಜಗಂ ಯಶಸ್ವಿಯಾಗಿದ್ದರು. ಹೀಗಾಗೇ ಮುಸ್[…] ಬಾಂಧವರು ತಮ್ಮ ಹಬ್ಬದ ದಿನಗಳಲ್ಲಿ ಇಂದಿಗೂ ಮಠ[…] ಭೇಟಿಕೊಡುವುದನ್ನು ಸಂಪ್ರದಾಯವನ್ನಾಗಿಸಿಕೊಂಡಿದ್ದಾ[…]


ರುದ್ರಮುನಿ ಸ್ವಾಮಿ


ಮುಜಗಂ


ಮಲ್ಲಿಕಾರ್ಜುನ ಸ್ವಾಮಿ


ದಿಗಲೇಶ್ವರ ಸ್ವಾಮಿ

ಮಾರುವುದೊಂದೇ ಈತನ ಕಾಯಕವಯ್ಯ

ಅನೇಕ ಇತಿಹಾಸಗಳನ್ನು ಸೃಷ್ಟಿಸಿದ್ದಲ್ಲದೆ ಸಂಗೀತ ಲೋಕಕ್ಕೆ ಪಂಚಾಕ್ಷರಿ ಗವಾಯಿಗಳಂತಹ ಮಹಾನ್ ಸಾಧಕರನ್ನ ಪರಿಚಯಿಸಿದ್ದು ಹಾನಗಲ್ಲ ಕುಮಾರೇಶ್ವರ ಮಠ. ಮಠದ ಇಂತಹ ಭವ್ಯ ಇತಿಹಾಸವನ್ನೇ ಬದಲಿಸಿದವನು ಈ ಗುರುಸಿದ್ದ ಸ್ವಾಮಿ.

ಈ ಹಿಂದೆ ಮಠದ ಕೀರ್ತಿಯನ್ನ ಎತ್ತರಕ್ಕೆ ಕೊಂಡೊಯ್ದಿದ್ದ ಕುಮಾರ ಸ್ವಾಮಿಗಳ ಸತ್ಕಾರ್ಯಗಳನ್ನು ಮೆಚ್ಚಿ ಜನ ಈ ಮಠಕ್ಕೆ ಸಾಕಷ್ಟು ಆಸ್ತಿಗಳನ್ನು ದಾನವಾಗಿ ನೀಡಿದ್ದರು. ಅವುಗಳಲ್ಲಿ ಬಹುತೇಕ ಆಸ್ತಿಗಳು ಹುಬ್ಬಳ್ಳಿಯ ಮಧ್ಯಭಾಗದಲ್ಲಿವೆ. ಸದ್ಯ ಅವುಗಳ ಬೆಲೆ ಕೋಟಿಗಳ ಲೆಕ್ಕದಲ್ಲಿ ತೂಗುತ್ತದೆ.

ಗುರುಸಿದ್ದ ಸ್ವಾಮಿ ಪೀಠಕ್ಕೆ ಏರಿ ಎರಡು ದಶಕಗಳಿಗೂ ಹೆಚ್ಚು ಕಾಲ ಕಳೆದರೂ ಆತ ಕಿಂಚಿತ್ತೂ ಸುಧಾರಿಸಲಿಲ್ಲ, ಹಾನಗಲ್ಲ ಮಠದಲ್ಲಿ ಸಂಗೀತ ಶಿಕ್ಷಕಿಯೊಂದಿಗೆ ಪಲ್ಲಂಗದಲ್ಲಿ ಸಿಕ್ಕಿ ಬಿದ್ದಾಗಲೇ ಆತ ಸುಧಾರಿಸಿಕೊಳ್ಳಬೇಕಾಗಿತ್ತು, ಆದರೆ ಹಾಗೆ ಮಾಡದ ಸ್ವಾಮಿ ತನ್ನ ರಕಂಗಳನ್ನು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾನಲ್ಲದೆ ಅವರನ್ನೆಲ್ಲ ಮೈಂಟೇನ್ ಮಾಡಲು ಮಠದ ಒಂದೊಂದೇ ಆಸ್ತಿಗಳನ್ನ ಮಾರಲು ಶುರು ಹಚ್ಚಿಕೊಂಡ ಎನ್ನುವ ಪುಕಾರಿದೆ.

2010 ರಲ್ಲಿ ಹುಬ್ಬಳ್ಳಿಯ ಸೊರಬದ ಓಣಿಗೆ ಹೊಂದಿಕೊಂಡಿರುವ ಸಿಂಧೋಗಿ-ಮುನವಳ್ಳಿಯ ಆಲೂರು ಮಠದ (ಹಾನಗಲ್ಲ ಕುಮಾರೇಶ್ವರ ಮಠದ ಶಾಖಾ ಮಠ) ಆಸ್ತಿಯನ್ನ ಪ್ರಭಾಕರ ಹಿಪ್ಪರಗಿ ಎಂಬ ವ್ಯಾಪಾರಿಯೊಬ್ಬನಿಗೆ ಮಾರಿದ್ದ. ಮುನವಳ್ಳಿ ಆಲೂರು ಮಠದ ಆಸ್ತಿಗಳ ಜಿಪಿಎ ಹೋಲ್ಡರ್ ಆದ ಬಿ.ಜಿ. ಸಂಕನಮಠ ಗುರುಸಿದ್ಧ ತೋರಿಸಿದ ಕಡೆಯೆಲ್ಲಾ ಸಹಿ ಮಾಡಿ ಕೈ ತೊಳೆದುಕೊಂಡಿದ್ದ.

ಖರೀದಿ ಪತ್ರದ ಪ್ರಕಾರ ಈ ಆಸ್ತಿಯನ್ನು ಒಂದು ಲಕ್ಷದ ಎಂಟು ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಲಾಗಿದೆ. ಆದರೆ ಅಸಲಿಗೆ ಈ ಮಾರಾಟದ ಬೆಲೆನೇ ಬೇರೆ ಇದೆ. ಸ್ವಾಮಿಯ ಎಲ್ಲ ಕುತಂತ್ರಿ ಕೆಲಸಗಳ ಹಿಂದೆ ಸೆಕ್ಯೂರಿಟಿ ಆಗಿ ನಿಲ್ಲುವ ಬಸವರಾಜ ಕುರುಡಗಿಮಠ ಈ ದೀಲನ್ನ ಕುದುರಿಸಿದ್ದಾನೆ.

ಧರ್ಮೋಪಚಾರ ಕೆಲಸದ ನಿಮಿತ್ತ ಪರ ಊರುಗಳಿಗೆ ಓಡಾಡಲು ಮತ್ತು ಮಠದ ಇನ್ನಿತರೆ ಕೆಲಸಗಳನ್ನು ನಡೆಸಿಕೊಂಡು ಹೋಗಲು ಹಣಕಾಸಿನ ತೊಂದರೆ ಇರುವುದರಿಂದ ಈ ಆಸ್ತಿಗಳನ್ನ ಮಾರಿದ್ದೇನೆ ಎಂದು ಗುರುಸಿದ್ದ ಹೇಳಿದ್ದ.

ಆಸ್ತಿ ಮಾರಾಟದ ನೋಂದಣಿ ಕಾಗದದಲ್ಲಿ ತೋರಿಸಿರುವ ಲೆಕ್ಕ ಬಿಟ್ಟು ಅಸಲಿ ಲೆಕ್ಕದಲ್ಲಿ ಬಂದ ಹಣವನ್ನು ಗುರುಸಿದ್ದ ಏನು ಮಾಡಿದ? ಸ್ವಾಮಿಯ ಹಿಂದಿರುವ ಚೇಲಾಗಳು ಹೇಳುವ ಪ್ರಕಾರ ಆತ ಆ ಆಸ್ತಿಯನ್ನು ಮಾರಿದ್ದು ಕೋಟಿಗೂ ಹೆಚ್ಚಿನ ಹಣಕ್ಕಂತೆ.

ಸಿಂಧೋಗಿ- ಮುನವಳ್ಳಿ ಆಲೂರು ಮಠದ ಆಸ್ತಿಯನ್ನ ಮಾರಿದ ನಂತರ ಗುರುಸಿದ್ದ ಸ್ವಾಮಿ ಹುಬ್ಬಳ್ಳಿಯ ಮಧ್ಯಭಾಗದಲ್ಲಿರುವ 42 ಆಸ್ತಿಗಳನ್ನ ಸತ್ಯನಾರಾಯಣ ರಾಯಬಾಗಿ ಮತ್ತು ದಿಲೀಪಕುಮಾರ ಬಾಬುಲಾಲಜಿ ಮುನೋಟ ಎಂಬುವರಿಗೆ 19-8-2010 ರಂದು ಸದ್ದಿಲ್ಲದೆ ಪರಭಾರೆ ಮಾಡಿದ್ದಾನೆ. 2 ಮೇ 1991 ರಿಂದ ಹಾನಗಲ್ಲ ಕುಮಾರೇಶ್ವರ ಮಠದ ಬಹುತೇಕ ಆಸ್ತಿಗಳಿಗೆ ಬಿ.ಜಿ. ಸಂಕಿನಮಠ ಅವರೆ ಜಿಪಿಎ ಹೋಲ್ಡರ್. ಮೊದಲಿನಿಂದಲೂ ಗುರುಸಿದ್ದ ಸ್ವಾಮಿಯ ಎಲ್ಲ ರೀತಿಯ ಐಷಾರಾಮಿ ಜೀವನಕ್ಕೆ ಬೆನ್ನಹಿಂದೆ ನಿಂತವರೆ ಇವರು.

ಬೆಳಗಾಂವ ಜಿಲ್ಲೆಯ ಸವದತ್ತಿ ತಾಲೂಕಿನ ಮುನವಳ್ಳಿ - ಸಿಂಧೋಗಿ ಮಠಕ್ಕೆ ಸೇರಿದ ಬರೋಬ್ಬರಿ 42 ಎಕರೆ ಫಲವತ್ತಾದ ಜಮೀನು ಇದೆ. ಅದರಲ್ಲಿ ಸ್ವಲ್ಪ ಜಮೀನನ್ನು ಮಾರುವುದಾಗಿ ಹೇಳಿ ಈಗ್ಗೆ ನಾಲ್ಕು ವರ್ಷದ ಹಿಂದೆ ವ್ಯವಹಾರ ಕುದುರಿಸಿದ್ದ ಗುರುಸಿದ್ದ ಸ್ವಾಮಿ ಕಳ್ಳ ಅಕ್ಕಿ ಸಾಗಣೆಯ ಹುಬ್ಬಳ್ಳಿಯ ಹರ್ಲಾಪುರ ಮಂಜ್ಯಾ ಎಂಬುವನಿಂದ 15 ಲಕ್ಷ ಅಡ್ವಾನ್ಸ್ ಆಗಿ ಪಡೆದಿದ್ದ. ಆದರೆ ಕೊನೆ ಘಳಿಗೆಯಲ್ಲಿ ಮಠದ ಸಮಿತಿಯ ಸದಸ್ಯರಾದ ಶಂಕ್ರಣ್ಣ ಮುನವಳ್ಳಿ ಮತ್ತು ವಿಜಯ ಸಂಕೇಶ್ವರ ಎಂಟ್ರಿ ಹೊಡೆದು ಸೇಲ್ ಕ್ಯಾನ್ಸಲ್ ಮಾಡಿಸಿದ್ದರು. ಅಷ್ಟೇ ಅಲ್ಲದೆ ಗುರುಸಿದ್ದ ಸ್ವಾಮಿ ಮಾರಲು ಹವಣಿಸಿದ್ದ ಬಹುತೇಕ ಆಸ್ತಿಗಳ ವಿಲೇವಾರಿಯನ್ನೂ ರದ್ದು ಮಾಡಿಸಿದ್ದರು ಎಂಬ ಮಾತು ಕೇಳಿಬರುತ್ತಿದೆ.

ಪುಣ್ಯಾಶ್ರಮದ ಮೇಲೆ ಕಣ್ಣು ಹಾಕಿದ್ದ

ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪುಟ್ಟರಾಜ ಗವಾಯಿಗಳು ನಿಧನರಾದ ನಂತರ ಅವರ ಉತ್ತರಾಧಿಕಾರಿಯಾಗಿ ...ಯೂ ತನ್ನ ಹವಾದ ತೋರಿಸುವ ಕಾತುರದಲ್ಲಿದ್ದ ಮೂರು ಸಾವಿರ ಮಠದ ಗುರುಸಿದ್ಧ ಸ್ವಾಮಿ. ...ಈಗಿರುವ ಎರಡು ಮಠಗಳ ಆಸ್ತಿ ಸಾಲದೆಂಬಂತೆ ಅಂಧರ ಬಾಳಿಗೆ ಬೆಳಕಾಗಿರುವ ಆಶ್ರಮದ ಪಿಠಕ್ಕೇರುವ ...ಸಿದ್ಧನ ಚಪಲಕ್ಕೆ ಬ್ರೇಕ್ ಬಿದ್ದದ್ದು ಒಳ್ಳೆಯದೇ ಆಯ್ತು.



ಪತ್ರಿಕಾಗೋಷ್ಠಿಯಲ್ಲಿ ಗುರುಸಿದ್ಧೇಶ್ವರ...

...ಪ್ಲಿಂದ ಇಲ್ಲಿಯವರೆಗೂ ಹಾನಗಲ್ ಕುಮಾರೇಶ್ವರ ...ಹಾಗೂ ಹುಬ್ಬಳ್ಳಿಯ ಮೂರು ಸಾವಿರ ಮಠದ ...ಪತಿಯಾಗಿರುವ ಗುರುಸಿದ್ಧ ರಾಜಯೋಗೀಂದ್ರ ...ಜಿ ಎಸಗಿರುವ ಅವ್ಯವಹಾರಗಳು ಒಂದೆರಡಲ್ಲ. ...ವಡೂ ಮಠಗಳ ಭಕ್ತರ ಹಾಗೂ ಸಮಾಜದ ಹಿತ ...ವ ಮೂಲಕ ಮಠದ ಘನತೆ ಮತ್ತು ಗೌರವವನ್ನು

ಮಠಗಳಂತೆ ಮೂರು ಸಾವಿರ ಮಠವೂ ಕೋಟ್ಯಾಂತರ ರೂಪಾಯಿಗಳ ಆಸ್ತಿಪಾಸ್ತಿಗಳನ್ನು ಹೊಂದಿದೆ. ಮಠದ ಇತಿಹಾಸ ಬಲ್ಲವರು ಹೇಳುವ ಪ್ರಕಾರ ಅಂದಾಜು 500 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಯನ್ನು ಮೂರು ಸಾವಿರ ಮಠ ಹೊಂದಿದೆ.

ರಾಜ್ಯದ ವಾಣಿಜ್ಯ ರಾಜಧಾನಿ ಹುಬ್ಬಳ್ಳಿ ನಗರದಲ್ಲೇ

ಪಲ್ಲಂಗ ಸ್ವಾಮಿಗೆ ಪೊಲಿಟಿಕಲ್ ಪ್ರೇಯಸಿಯರು

ಗುರುಸಿದ್ಧ ಸ್ವಾಮಿಯ ಶ್ವಾಸ ಪ್ರೇಯಸಿಯರಿಗಾಗಿ ಸದಾ ಮಿಡಿಯುತ್ತಲಿರುತ್ತದೆ. ಅದರಲ್ಲೂ ಪೊಲಿಟಿಕಲ್ ಪ್ರೇಯಸಿಯರೆಂದರೆ ಗುರುಸಿದ್ಧನಿಗೆ ವಿಶೇಷ ಆಸಕ್ತಿ.

ಈ ಗುರುಸಿದ್ಧನ ಕರ್ಮಕಾಂಡದ ಬಗ್ಗೆ ಪತ್ರಿಕೆ ಈ ಹಿಂದೆಯೂ ವರದಿ ಮಾಡಿತ್ತು. ಹಾನಗಲ್ಲಿನ ಮಠದಲ್ಲಿ ಈತನಿಗೆ ಸೇವೆಗೈಯ್ದ ಸಂಗೀತ ಶಿಕ್ಷಕಿಯಲ್ಲದೆ ಈಗಲೂ ಧಾರವಾಡದಲ್ಲಿ ಇಬ್ಬರು ನಿತ್ಯ ಸೇವಕಿಯರಿದ್ದಾರೆ. ಜಿಲ್ಲಾ ಪಂಚಾಯತಿಯಲ್ಲಿ ಸದಸ್ಯನಾಗಿದ್ದ ಗಂಡನ ಸಾವಿನ ನಂತರ ತೆರವಾಗಿದ್ದ ಸ್ಥಾನಕ್ಕೆ ನಿಂತು ಗುರುಸಿದ್ಧ ಹಾಕಿದ ಬಂಡವಾಳದಿಂದ ಆರಿಸಿ ಬಂದ ಮಹಿಳೆಯೊಬ್ಬಳು ಇಂದಿಗೂ ಸ್ವಾಮಿಗಳ ಸೇವೆಯನ್ನ ನಿಷ್ಠೆಯಿಂದ ಮುಂದುವರೆಸಿದ್ದಾಳೆ ಎಂಬ ಮಾತು ಮಠದ ಆವರಣದಿಂದಲೇ ಕೇಳಿಬರುತ್ತಿದೆ.

ಅಡ್ವಾನ್ಸ್ ಕೂಡ ಸ್ವಾಮೀಜಿ ಜೋಳಿಗೆಗೆ ಬಿದ್ದಿತ್ತು. ಈ ವಿಚಾರ ಸಮಿತಿಯ ಕಿವಿಗೆ ಬಿದ್ದದ್ದೇ ತಡ ಸಮಿತಿ ಸ್ವಾಮೀಜಿಯನ್ನು ಹಿಂಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡು ಮುಂಗಡವಾಗಿ ಪಡೆದಿದ್ದ 25 ಲಕ್ಷ ರೂಪಾಯಿಗಳನ್ನು ವಾಪಸ್ ಕೊಡಿಸಿ, ವ್ಯವಹಾರ ಕ್ಯಾನ್ಸಲ್ ಮಾಡಿಸಿದ್ದಾರೆ. ಅಲ್ಲಿಂದ ಹಣ ಕಾಸಿನ ವಿಚಾರಕ್ಕೆ ಸಂಬಂಧಪಟ್ಟಂತೆ ಮಠದ ಸಮಿತಿ ಹಾಗೂ ಸ್ವಾಮೀಜಿ ಮಧ್ಯೆ ಶುರುವಾದ ಮುಸುಕಿನ ಗುದ್ದಾಟವೇ ಇವತ್ತು ಪೀಠತ್ಯಾಗದ ಡ್ರಾಮಾ ಸೃಷ್ಟಿಯಾಗಲು ಕಾರಣ.


ಮಠದ ಉನ್ನತ ಸಮಿತಿಯಲ್ಲಿ ಮಾಜಿ ಸಿ.ಎಂ. ಜಗದೀಶ ಶೆಟ್ಟರ್, ಮಾಜಿ ಮಂತ್ರಿ ಬಸವರಾಜ ಹೊರಟ್ಟಿ, ಉದ್ಯಮಿ ವಿಜಯ ಸಂಕೇಶ್ವರ್, ಮೋಹನ್ ಲಿಂಬಿಕಾಯಿ, ಶಂಕ್ರಣ್ಣ ಮುನವಳ್ಳಿ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರೂ ಇದ್ದಾರೆ. ಆದರೆ, ಇವರುಗಳ ನಡುವೆಯೇ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡಿದ್ದು, ಅದರಲ್ಲಿನ ಒಂದು ಬಣ ಸ್ವಾಮೀಜಿಯ ಹಣಕಾಸು ವ್ಯವಹಾರದ ಮೇಲೆ ಹದ್ದಿನ ಕಣ್ಣಿಟ್ಟಿದೆ. ಈ ಬಣವೇ ಸ್ವಾಮೀಜಿ ಕೈಗೊಳ್ಳುವ ಬಹುತೇಕ ಎಲ್ಲ ನಿರ್ಧಾರಗಳನ್ನು ವಿರೋಧಿಸುತ್ತಾ ಬಂದಿದೆ.

ಆದರೆ ಸಮಿತಿಯಲ್ಲಿರುವ ಪ್ರಮುಖ ಮುಖಂಡರೊಬ್ಬರು ಮಠದ ಒಡೆತನದ ಪ್ರಾಪರ್ಟಿಯೊಂದರ ಮೇಲೆ

ಮಲ್ಲಿಕಾರ್ಜುನ ಸ್ವಾಮೀಜಿಯನ್ನೇ ನೇಮಿಸುವಂತೆ ವಿಲ್ ಬರೆದಿದ್ದು. ಹೀಗಾಗಿ ಅವರನ್ನೇ ಗುರುಸಿದ್ಧ ಸ್ವಾಮೀಜಿ ನಂತರ ಪೀಠಕ್ಕೆ ಕೂರಿಸಬೇಕು" ಎಂದು ನೂರಾರು ಜನ ಮಲ್ಲಿಕಾರ್ಜುನ ಸ್ವಾಮಿ ಪರ ಮೂರು ಸಾವಿರ ಮಠದ ಅಂಗಳದಲ್ಲಿ ಠಿಕಾಣಿ ಹೂಡಿ ಸಮಿತಿಯವರ ವಿರುದ್ಧ ಧಿಕ್ಕಾರ ಕೂಗಿದರು.

ಅಸಲಿಗೆ ಮಲ್ಲಿಕಾರ್ಜುನ ಸ್ವಾಮಿಗೆ ಹವಾ ಹೊಡೆದು ಹೊರತಂದವರು ಹಿಂದೆ ಉತ್ತರಾಧಿಕಾರಿ ಪಟ್ಟಕ್ಕಾಗಿ ಕೋರ್ಟ್ ಮೆಟ್ಟಿಲೇರಿದ್ದ ಹಾಲಿ ತಿಪಟೂರಿನ ಷಡಕ್ಷರ ಮಠದ ರುದ್ರಮುನಿ ಸ್ವಾಮೀಜಿ. 'ನನಗಂತೂ ಅವಕಾಶ ದೊರೆಯಲಿಲ್ಲ, ವಿಲ್‌ನಲ್ಲಿ ನಿನ್ನ ಹೆಸರಿದೆ. ಸದ್ಯ ಕೈಬಿಟ್ಟರೆ ಮಠನೂ ಇಲ್ಲ, ಪಟ್ಟನೂ ಇಲ್ಲ" ಎಂದು ರುದ್ರಮುನಿ ಸ್ವಾಮಿ ಮಲ್ಲಿಕಾರ್ಜುನ ಸ್ವಾಮಿಯನ್ನು ಪುಸಲಾಯಿಸಿ ಪೀಠದ ಜಗಳವನ್ನು ಬೀದಿ ರಂಪಾಟಕ್ಕೆ ತಂದು ಹಚ್ಚಿದ. ರುದ್ರಮುನಿಯ ಹಿಂದಿನ ಪವಾಡಗಳನ್ನು ನೋಡಿರುವ ಹುಬ್ಬಳ್ಳಿಯ ಜನ ಇದೆಲ್ಲ ತಮಗ್ಯಾಕೆ ಬೇಕು ಎಂದು ತಣ್ಣಗಾಗಿಬಿಟ್ಟರು.

ರುದ್ರಮುನಿ ಎಂಟ್ರಿ ಹೊಡೆದ ಸುದ್ದಿ ಕೇಳಿದ ಗುರುಸಿದ್ಧ




[illegible] ಹೊರಟ್ಟಿ



ಜಗದೀಶ್ ಶೆಟ್ಟರ್



ಮೋಹನ್ ಲಿಂಬೆಕಾಯಿ



ಶಂಕರಣ್ಣ ಮನವಳ್ಳಿ



ವಿಜಯ್ ಸಂಕೇಶ್ವರ

...ಸ ಬದಲಾಗಿ ಮಠದ ಆಸ್ತಿ ಮಾರಾಟ ಐಷಾರಾಮಿ ...ತ್ಯಾಗಿ ಕೋಟ್ಯಾಂತರ ರೂಪಾಯಿ ಸಾಲ, ಕಷ್ಟ ...ವಾಗ ಪೀಠ ತ್ಯಾಗದ ಬೆದರಿಕೆ ಹಾಕುತ್ತಾ ಬಂದಿದ್ದಾನೆ.

ಶ್ರೀಮಂತ ಮಠ

...ನಾಡಿನ ಉದ್ದಗಲಕ್ಕೂ ಮಠಗಳಿಗೇನು ಕೊರತೆ ...ಪ್ರತಿಯೊಂದು ಮಠವೂ ತನ್ನದೇ ಆದ ಇತಿಹಾಸ ...ವಾದವಿವಾದಗಳನ್ನು ಹೊಂದಿದೆ. ಹಾಗೆಯೇ ಇತರೆ



ಮಠ ಸಾಕಷ್ಟು ಆಸ್ತಿ ಹೊಂದಿದೆ. ಮಠಕ್ಕೆ ಹೊಂದಿಕೊಂಡಂತೆ ಇರುವ ಕಮರ್ಷಿಯಲ್ ಕಾಂಪ್ಲೆಕ್ಸ್, ಹಳೇ ಬಸ್‌ಸ್ಟ್ಯಾಂಡ್ ಹತ್ತಿರ ಇರುವ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಪಾಳು ಬಿದ್ದ ಮಿಲ್, ರೈಲ್ವೆ ಸ್ಟೇಷನ್ ಎದುರುಗಡೆ ಪ್ರಮುಖ ರಸ್ತೆಗೆ ಹೊಂದಿಕೊಂಡಿರುವ ಹೋಟೇಲ್ ಮತ್ತು ವಾಣಿಜ್ಯ ಮಳಿಗೆಗಳಲ್ಲದೆ ಅನೇಕ ಕಡೆ ನೂರಾರು ಎಕರೆ ಕೃಷಿ ಭೂಮಿಯೂ ಮಠದ ಒಡೆತನದಲ್ಲಿವೆ. ಇದಲ್ಲದೆ, ಮಠದ ವತಿಯಿಂದ ಬ್ಯಾಂಕ್‌ವೊಂದರಲ್ಲಿ ಮೂರುಕೋಟಿ ರೂ. ಠೇವಣಿ ಇಡಲಾಗಿದೆ. ಈ ಹಣದ ಮೇಲಿನ ಬಡ್ಡಿ ಮತ್ತು ಪ್ರತಿ ತಿಂಗಳು ಬಾಡಿಗೆ ರೂಪದಲ್ಲಿ ಅಂದಾಜು ಐದು ಲಕ್ಷಕ್ಕೂ ಹೆಚ್ಚು ಹಣ ಸಿಗುತ್ತದೆ. ಈ ಹಣದಲ್ಲಿ ಮಠದ ಖರ್ಚುವೆಚ್ಚವನ್ನು ಭರಿಸಲಾಗುತ್ತದೆ.

ಆದರೆ, ತನ್ನ ಸ್ವಂತ ಖರ್ಚನ್ನು ನಿಭಾಯಿಸುಲು ಗುರುಸಿದ್ಧನಿಗೆ ಹೆಚ್ಚಿನ ಹಣ ಬೇಕಿತ್ತು. ಅದನ್ನು ಗಳಿಸುವ ನಿಟ್ಟಿನಲ್ಲೇ ಗುರುಸಿದ್ಧ ಸದಾ ಎಡವುತ್ತಾ ಬಂದಿದ್ದಾನೆ. ಮಠಕ್ಕೆ ತಾನೇ ಸುಪ್ರೀಂ ಆಗಿರುವುದರಿಂದ ಸಮಿತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಮನಸ್ಸಿಗೆ ಬಂದಂತೆ ಮಠದ ಆಸ್ತಿಯನ್ನು ಆವರಿವರಿಗೆ ಅಡಾ ಇಡುವುದನ್ನು, ಕೆಲವೊಂದಿಷ್ಟನ್ನು ಮಾರುವುದನ್ನು ಗುರುಸಿದ್ಧ ಮಾಡಿಕೊಂಡು ಬಂದಿದ್ದಾನೆ.

ಇದೇ ಈಗ ಈತನನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಮಠದ ಒಂದು ಆಸ್ತಿಯನ್ನು ಮಾರಲು ಮುಂಗಡ ಹಣ ಪಡೆದಿದ್ದ ಸ್ವಾಮಿಯನ್ನು ಮಠದ ಸಮಿತಿ ತಡೆದದ್ದು, ಮುಂಗಡ ಹಣವನ್ನು ವಾಪಸ್ ಕೊಡುವಂತೆ ಮಾಡಿದ್ದು 'ಪೀಠ ತ್ಯಾಗ'ದ ನಾಟಕಕ್ಕೆ ಮುನ್ನುಡಿಯಾಯಿತು ಎಂಬುದರ ಬಗ್ಗೆ ಯಾವ ಅನುಮಾನಗಳೂ ಇಲ್ಲ.

[illegible] ಗುರುಸಿದ್ಧ

ಅಂದಾಜು ಮೂರು ಕೋಟಿ ಸಾಲದಲ್ಲಿರೋ ಸ್ವಾಮೀಜಿ ಅದರಿಂದ ಪಾರಾಗಲು ಹುಬ್ಬಳ್ಳಿ ರೈಲ್ವೆ ನಿಲ್ದಾಣದ ಎದುರಿಗಿನ ಡಬಲ್ ರೋಡ್‌ಗೆ ಹೊಂದಿಕೊಂಡಂತೆ ಇರುವ ಹೋಟೇಲ್ ಕಟ್ಟಡವನ್ನು ಮಹೇಂದ್ರ ಸಿಂಘಿ ಎನ್ನುವ ಪ್ರಭಾವೀ ವ್ಯಾಪಾರಿಗೆ 2.15 ಕೋಟಿಗೆ ಮಾರಲು ನಿರ್ಧರಿಸಿದ್ದರು ಎನ್ನಲಾಗಿದೆ. ಈ ಕುರಿತು ಮಠದಲ್ಲೇ ರಹಸ್ಯವಾಗಿ ವ್ಯವಹಾರ ನಡೆದು 25 ಲಕ್ಷ ರೂಪಾಯಿಗಳ ಟೋಕನ್

ಕಣ್ಣು ಹಾಕಿ ಅದನ್ನು ಲಪಟಾಯಿಸಬೇಕು ಎನ್ನುವ ಸ್ಕೆಚ್ ಹಾಕಿದ್ದರು ಎಂದೂ, ಅದನ್ನು ಗುರುಸಿದ್ಧ ಸ್ವಾಮಿ ತಡೆದರು ಎಂದೂ, ಆ ಕಾರಣಕ್ಕೇ ಸ್ವಾಮಿ ವಿರುದ್ಧ ಸಮಿತಿಯ ಸದಸ್ಯರು ಕತ್ತಿ ಮಸಿಯುತ್ತಿದ್ದರು ಎಂಬ ಮಾತೂ ಕೇಳಿಬರುತ್ತಿದೆ.

ಡಿಂಗಾಲೇಶ್ವರರ ಎಂಟ್ರಿ

ಅಂತಿಮವಾಗಿ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಪೀಠ ಬಿಡುವ ವಿಚಾರ ಸುಳ್ಳಿನ ಕಂತೆಯಾಯಿತು. ಆದರೂ ಈ ನಾಟಕದ ಮಧ್ಯೆಯೇ ಬಾಳೆಹೊಸೂರಿನ ಡಿಂಗಾಲೇಶ್ವರ ಸ್ವಾಮಿಯನ್ನು ಮೂರು ಸಾವಿರ ಮಠಕ್ಕೆ ತಂದು ಕೂರಿಸಬೇಕು ಎನ್ನುವ ಪ್ರಯತ್ನ ಕೂಡ ತೆರೆಮರೆಯಲ್ಲಿ ನಡೆಯಿತು.

ಕಳೆದ ನಾಲ್ಕು ವರ್ಷಗಳಿಂದ ಮೂರು ಸಾವಿರ ಮಠದ ಮೇಲೆ ಕಣ್ಣಿಟ್ಟಿರುವ ಡಿಂಗಾಲೇಶ್ವರ ಸ್ವಾಮಿ ಒಳಗೊಳಗೇ ಉನ್ನತ ಸಮಿತಿಯ ಸದಸ್ಯರನ್ನು ಬುಕ್ ಮಾಡಿಕೊಂಡಿದ್ದಾರೆ ಅನ್ನೋದು ಹಲವರ ವಾದ. ಹುಬ್ಬಳ್ಳಿ ಧಾರವಾಡ ಭಾಗದಲ್ಲಿ ಅತಿಹೆಚ್ಚು ಪ್ರವಚನ ಕಾರ್ಯಕ್ರಮಗಳನ್ನು ನೀಡಿ ಈ ಭಾಗದಲ್ಲಿ ಪ್ರಚಾರ ಪಡೆಯುತ್ತಿದ್ದಾರೆ. ಆಶ್ಚರ್ಯವೆಂದರೆ, ಧಾರವಾಡದ ಕಾಲೇಜೊಂದರಲ್ಲಿ ನಡೆಯಿತೆನ್ನಲಾದ ಚಲನಚಿತ್ರದ ಚಿತ್ರೀಕರಣದಲ್ಲೂ ಕಾಣಿಸಿಕೊಳ್ಳುವಷ್ಟರ ಮಟ್ಟಿಗೆ ಇಲ್ಲೇ ಬೀಡು ಬಿಟ್ಟಿದ್ದಾರೆ ಡಿಂಗಾಲೇಶ್ವರ ಸ್ವಾಮಿ.

ಮೈಕೊಡವಿದ್ದ ಮಲ್ಲಿಕಾರ್ಜುನ ಸ್ವಾಮಿ

ಪ್ರಸ್ತುತ ಪೀಠಾಧಿಪತಿ ಗುರುಸಿದ್ಧನ ಜಾಗೆಗೆ ಡಿಂಗಾಲೇಶ್ವರ ಸ್ವಾಮಿಯನ್ನು ತಂದು ಕೂಡಿಸ್ತಾರೆ ಎಂಬ ಸುದ್ದಿ ಹೊರಬೀಳುತ್ತಿದ್ದಂತೆ ಮೈಕೊಡವಿ ಎದ್ದು ನಿಂತರು ಮೂರುಸಾವಿರ ಮಠದ ಶಾಖಾ ಮಠ ಬೆಳಗಾವಿ ಜಿಲ್ಲೆ ಘಟಪ್ರಭಾದ ಬೂಬ್ಬಲ್ ಗುಡ್ಡದ ಕೆಂಪಯ್ಯ ಸ್ವಾಮಿ ಮಠದ ಮಲ್ಲಿಕಾರ್ಜುನ ಸ್ವಾಮಿ. "ಅಸಲಿಗೆ ನಾನೇ ಹಕ್ಕುದಾರ. ಉತ್ತರಾಧಿಕಾರಿ ನಾನಿರುವಾಗ ಅದ್ಯೇಗೆ ಡಿಂಗಾಲೇಶ್ವರರನ್ನು ತಂದು ಕೂರಿಸ್ತಾರೆ?" ಎಂದು ಘಟಪ್ರಭಾ ಬಂದ್ ಮಾಡಿ ತನ್ನ ಆಕ್ರೋಶವನ್ನು ಹೊರಹಾಕಿದ್ದರು.

"ಈ ಹಿಂದೆ ಮೂರು ಸಾವಿರ ಮಠದ ಲಿಂಗೈಕ್ಯ ಪೀಠಾಧಿಪತಿ ಮುಜಗಂ ತಮ್ಮ ಉತ್ತರಾಧಿಕಾರಿಯಾಗಿ

ಸ್ವಾಮಿ ಹುಬ್ಬಳ್ಳಿಯಿಂದ ಎಸ್ಕೇಪ್ ಆಗಿ ಹಾನಗಲ್ ಮಠ ಸೇರಿ ತಾನು ಸೇಫು ಎಂದುಕೊಂಡುಬಿಟ್ಟ. ಆದರೆ, ರುದ್ರಮುನಿ ಹಾನಗಲ್‌ನಲ್ಲೂ ತನ್ನ ಕೈಚಳಕ ತೋರಿಸಿದ ಎನ್ನುವುದು ಮಾತ್ರ ರಹಸ್ಯವಾಗೇನೂ ಉಳಿದಿಲ್ಲ.

ಕೋಟಿ ಡೀಲು ಕುದುರಿತಾ...?

ಕೋಟಿಗಾಗಿ ಕಂಗಾಲಾಗಿದ್ದ ಗುರುಸಿದ್ಧ ರುದ್ರಮುನಿಯ ಭಯದಲ್ಲೂ ಕೂಡ ಕಾಲ ಕಳೆಯುವಂತಾಗಿತ್ತು. ಹಾನಗಲ್ಲ ಕುಮಾರೇಶ್ವರ ಮಠದಲ್ಲಿ ಹದಗೆಟ್ಟ ವ್ಯವಹಾರಗಳನ್ನು ಸರಿಮಾಡಿಕೊಳ್ಳಬೇಕೆಂಬ ಕೂತಿದ್ದ ಗುರುಸಿದ್ಧ ಸ್ವಾಮೀಜಿಯನ್ನು ಅದ್ಯಾರೋ ಹಾನಗಲ್ಲಿನಿಂದ ರಾತ್ರೋರಾತ್ರಿ ಕಿಡ್ನಾಪ್ ಮಾಡಿದರು ಎನ್ನುವ ವದಂತಿಯೂ ಕೇಳಿಬಂತು. ಆದರೆ ಅದರ ಮಾರನೆ ದಿನವೇ ಗುರುಸಿದ್ಧ ರಾಜಯೋಗೀಂದ್ರ ತಿಪಟೂರಿನ ಷಡಕ್ಷರಿ ಮಠದಲ್ಲಿ ರುದ್ರಮುನಿ ಸ್ವಾಮೀಜಿಯೊಂದಿಗೆ ಕಾಣಿಸಿಕೊಳ್ಳುವ ಮೂಲಕ ಅಚ್ಚರಿ ಮೂಡಿಸಿದ.

ಅಷ್ಟೇ ಅಲ್ಲ, ತಿಪಟೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ "ನಾವು ಪೀಠ ತ್ಯಾಗ ಮಾಡುವ ಪ್ರಶ್ನೆಯೇ ಇಲ್ಲ, ಮಠದಲ್ಲಿನ ಕೆಲಸದ ಒತ್ತಡ ಕಡಿಮೆ ಮಾಡಿಕೊಳ್ಳಲು ಆಡಳಿತಾತ್ಮಕ ಅನುಕೂಲಕ್ಕಾಗಿ ಉತ್ತರಾಧಿಕಾರಿಯನ್ನು ನೇಮಕ ಮಾಡಿಕೊಳ್ಳುವ ಇರಾದೆ ಹೊಂದಿದ್ದೇನೆ ಹೊರತು ಪೀಠ ಬಿಡಲ್ಲ" ಎಂದು ಹೇಳಿ ಒಂದು ವಾರದಿಂದ ಸೃಷ್ಟಿಯಾಗಿದ್ದ ಸೆಂಟಿಮೆಂಟಲ್ ಡ್ರಾಮಾಕ್ಕೆ ಕ್ಲೈಮಾಕ್ಸ್ ಹೇಳಿದ.

ಇದರ ಅರ್ಥ ಮಠದ ಆಸ್ತಿಯ ಮೇಲೆ ಗುರುಸಿದ್ಧನಿಗೆ ಈಗ ಅಧಿಕಾರವಿದೆಯಾ? ಅಂತಹದ್ದೊಂದು ಒಪ್ಪಂದ ತೆರೆಮರೆಯಲ್ಲಿ ನಡೆದಿದೆಯಾ? ಆ ಒಪ್ಪಂದದ ಮೌಲ್ಯ ಒಂದು ಕೋಟಿಯಾ? ಇಂತಹ ಪ್ರಶ್ನೆಗಳು ಮಠದ ಭಕ್ತರನ್ನು ಕಾಡುತ್ತಿದೆ.

ಆದೇನೇ ಇದ್ದರೂ ಸದ್ಯಕ್ಕೆ ಪೀಠ ತ್ಯಾಗದ ಡ್ರಾಮಾ ಅಂತ್ಯಗೊಂಡಿದೆ. ಆದರೆ ಇದೆಲ್ಲದರಿಂದಾಗಿ ಮೂರು ಸಾವಿರ ಮಠದ ಮರ್ಯಾದೆ ಮಾತ್ರ ಹರಾಜಾಗಿದೆ [illegible]

■ ವಿನಯ್

ವಾಸ್ತುಪಿಶಾಚಿಗಳು-ಜ್ಯೋತಿಷಿಗಳೊಂದಿಗೆ ಶಾಮೀಲಾಗಿ ವೈದ್ಯವಿಜ್ಞಾನವನ್ನೇ ಅವಮಾನಿಸುತ್ತಿರುವ ಚಾನೆಲ್ ಪುರೋಹಿತಶಾಹಿಗಳು


ನಿತ್ಯ ವೈದ್ಯ ವಿಜ್ಞಾನ ಅಸಾಧಾರಣ ರೋಗ ಪರಿಹಾರಗಳನ್ನು ಕಂಡುಹಿಡಿಯುತ್ತಿದೆ. ಇಷ್ಟಾದರೂ ಮಾನವ ದೇಹದ ವರ್ತನೆಗಳ ಪರಿಪೂರ್ಣ ಮಾಹಿತಿ ದೊರಕಿಲ್ಲ. ಆದರೆ ಹೊಸ ಹೊಸ ಸಂಶೋಧನೆಗಳು ಜನಸಾಮಾನ್ಯರ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿವೆ. ಗರ್ಭಧಾರಣೆಯ ಸಮಸ್ಯೆ ಇರುವವರಿಗೆಂದು ಐವಿಎಫ್ ತಂತ್ರಜ್ಞಾನ ಬಂತು. ಗರ್ಭಕೋಶ ಇಲ್ಲದವರಿಗೆ ಇನ್ನೊಬ್ಬರ ಗರ್ಭಕೋಶವನ್ನು ಕಸಿ ಮಾಡಿ ಸಂತಾನ ಭಾಗ್ಯ ಒದಗಿಸುವಲ್ಲೂ ವೈದ್ಯ ವಿಜ್ಞಾನ ಯಶಸ್ವಿಯಾಗಿದೆ.


ವಿಷಯ ಹೀಗಿರುವಾಗ ಹೃದಯ ಕಾಯಿಲೆಗಳಿಗೆ ವಾಸ್ತು ದೋಷ ಕಾರಣ ಎನ್ನುವ ವಾಸ್ತು ಪಿಶಾಚಿಗಳು, ಗರ್ಭದಲ್ಲಿರುವ ಭ್ರೂಣವನ್ನು ಯಾವುದೋ ಆತ್ಮ ಹೊಕ್ಕಿದೆ ಎಂದು, ಆ ಆತ್ಮವನ್ನು ತಾನು ಓಡಿಸುತ್ತೇನೆ ಎಂದು ಚಾನೆಲ್‌ಗಳಲ್ಲಿ ಕುಳಿತು ರೀಲು ಬಿಡುವ ಜನ್ಮಾಂತರ ಪಂಡಿತರ ಹಾವಳಿ ಜಾಸ್ತಿಯಾಗಿದೆ. ಇದು ಜನರನ್ನು ಸುಲಿಯುವ ದಂಧೆಯಾಗಿದ್ದು, ಚಾನೆಲ್‌ಗಳು ಇದರಲ್ಲಿ ಪಾಲು ಪಡೆಯುತ್ತಾ ಅನೈತಿಕ ಹಾದಿ ತುಳಿದಿವೆ.

ಅದ್ಯಾವ ಸುವರ್ಣ ಗಳಿಗೆಯಲ್ಲಿ ಈ ನ್ಯೂಸ್ ಚಾನೆಲ್ ಹುಟ್ಟಿತೋ ಗೊತ್ತಿಲ್ಲ, ಈ ಚಾನೆಲ್ಲಿನಲ್ಲಿ ಪವಾಡಗಳನ್ನು, ಜ್ಯೋತಿಷ್ಯ, ವಾಸ್ತುಗಳನ್ನು ಬಯಲು ಮಾಡುವ ಕಾರ್ಯಕ್ರಮವೂ ಪ್ರಸಾರವಾಗುತ್ತದೆ. ಮುಂಜಾನೆ ಜ್ಯೋತಿಷ್ಯದ ಹೆಸರಲ್ಲಿ ತವಡು ಕುಟ್ಟುವ ಪ್ರೋಗ್ರಾಮೂ ನಿರಂತರವಾಗಿರುತ್ತದೆ. ಇಷ್ಟಲ್ಲದೇ ಪ್ರತಿ ರವಿವಾರ ಚಂದ್ರಶೇಖರ ಗುರೂಜಿಯ ವಾಸ್ತು ಪರಿಹಾರ ಎಂಬ ಲೂಟಿ ಕಾರ್ಯಕ್ರಮವಿರುತ್ತದೆ. ಇಷ್ಟೆಲ್ಲಕ್ಕೆ ಕಿರೀಟ ಎಂಬಂತೆ ಇತ್ತೀಚೆಗೆ ಜನ್ಮ ಜನ್ಮಾಂತರ ಎನ್ನುವ ತಳಬುಡವಿಲ್ಲದ ಮೋಸದ ಕಾರ್ಯಕ್ರಮ ಬೇರೆ ಶುರುವಾಗಿದೆ.

ಈತನ ಹೆಸರು ಡಾ.ಮಂಜುನಾಥ ಶಾಸ್ತ್ರಿ. ಈ ಮಹಾಶಯನಿಗೆ ಅದ್ಯಾವ ವಿವಿ ಡಾಕ್ಟ'ರೇಟು' ನೀಡಿತೋ? ಕಳೆದ ವಾರ ಈತ ಸಿದ್ದು ಎಂಬ ಯುವಕನನ್ನು ಚಾನೆಲ್ಲಿಗೆ ಹಿಡಿದುಕೊಂಡು ಬಂದು, ಸಿದ್ದುನ ದೇಹದೊಳಗಿದ್ದ ಮೋಹಿನಿಯನ್ನು ಓಡಿಸಿಬಿಟ್ಟ! ಸಿದ್ದು ಎನ್ನುವಾತನೂ 'ಪೇಯ್ಡ್' ಕಸ್ಟಮರ್! ಪೂರ್ವಜನ್ಮದ ಪಾಪಗಳಿಂದಾಗಿ ಹೀಗೆಲ್ಲ ಮೋಹಿನಿಗಳು, ಆತ್ಮಗಳು ದೇಹವನ್ನು ಪ್ರವೇಶಿಸುತ್ತವಂತೆ, ಈ ಮಂಜುನಾಥ ಅವನ್ನು ಓಡಿಸುತ್ತಾನಂತೆ! ಈ ಲೈವ್ ಕಾರ್ಯಕ್ರಮಕ್ಕೆ ಜನ ಕಾಲ್ ಮಾಡುತ್ತಾರೆ ಇಲ್ಲವೇ ಪತ್ರ ಬರೆಯುತ್ತಾರೆ ಅಥವಾ ಈ ವಂಚಕರೇ ಬರೆದುಕೊಳ್ಳುತ್ತಾರೆ. ಹುಬ್ಬಳ್ಳಿಯ ಪವಿತ್ರಾ ಎನ್ನುವ ಮೂರು ತಿಂಗಳ ಗರ್ಭಿಣಿ ಪತ್ರ ಬರೆದು, ತನಗೆ ಉಸಿರಾಟದ ಸಮಸ್ಯೆ ಇದೆ, ಊಟ ಸೇರ್ತಾ ಇಲ್ಲ, ಕೈ ಕಾಲು ಸೋಲುತ್ತವೆ ಎಂದು ತನ್ನ ಸಮಸ್ಯೆ ಹೇಳಿಕೊಳ್ಳುತ್ತಾರೆ. ಈ ಸಮಸ್ಯೆಗೆ ಪರಿಹಾರ ಕೊಡಲು ವೈದ್ಯರೂ ಬೇಕಾಗಿಲ್ಲ, ಇದಕ್ಕೆಂದೇ ತರಬೇತಿ ಪಡೆದಿರುವ ಆಶಾ ಕಾರ್ಯಕರ್ತೆಯರೇ ಇದನ್ನು ಪರಿಹರಿಸುತ್ತಾರೆ. ಆದರೆ ವಂಚಕ ಮಂಜುನಾಥನ ಪ್ರಕಾರ, ಬೇರೊಂದು ಆತ್ಮ ಪವಿತ್ರಾರ ಗರ್ಭ ಹೊಕ್ಕು ಭ್ರೂಣದೊಳಗೆ ಸೇರಿಕೊಂಡಿದೆಯಂತೆ! ಈ ಆತ್ಮವನ್ನು ಬೇರೆಡೆಗೆ ವರ್ಗಾಯಿಸಿ ಈತ ಗುಣಪಡಿಸುತ್ತಾನಂತೆ. ಅದಕ್ಕೆ ಬೆಂಗಳೂರಿನಲ್ಲಿರುವ ಈತನ ಆಶ್ರಮಕ್ಕೆ 15 ದಿನಕ್ಕೊಮ್ಮೆ ಬರಬೇಕಂತೆ.

ಹೀಗೆ ಭಯಂಕರ ಮೋಸದಾಟವನ್ನು ಬಹಿರಂಗವಾಗಿಯೇ ಆಡುವ ಈ ದುಷ್ಟ ಆತ್ಮ ಮಂಜುನಾಥನ ನೆರವಿಗೆ ಬರುವ ಆ ಚಾನೆಲ್ಲಿನ ನಿರೂಪಕಿ "ಕೇವಲ ಕಲ್ಪನೆಯಲ್ಲ, ಸಾಕ್ಷಿಗಳು ಬೇಕಾದಷ್ಟಿವೆ.







ಪಾಪ-ಪುಣ್ಯಗಳು ಹುಟ್ಟು-ಸಾವಿನ ಸುತ್ತ ಇದ್ದೇ ಇವೆ" ಎಂದು ಬೋಧನೆ ಮಾಡುತ್ತಾಳೆ.

ಸುಮ್ಮನೆ ಈ ಮಂಜುನಾಥನ ಜನ್ಮಾಂತರ ಕಚೇರಿಯ ನಂಬರಿಗೆ (ಮೊಬೈಲ್) ಕಾಲ್ ಮಾಡಿದ ಮಿತ್ರನೊಬ್ಬ ಗರ್ಭಿಣಿಯ ಸಮಸ್ಯೆ ಹೇಳಿದ. ಫೋನ್ ಸ್ವೀಕರಿಸಿದ ಸ್ವಾಗತಕಾರಿಣಿ ಬೆಂಗಳೂರು ಕಚೇರಿಗೆ ದಂಪತಿಗಳು ಬರಬೇಕೆಂದು, ಎಂಟ್ರಿ ಫೀ ಒಬ್ಬೊಬ್ಬರಿಗೆ 6 ಸಾವಿರ ಎಂದು ಹೇಳಿದಳು. ಇನ್ನು ಚಿಕಿತ್ಸೆಯ ಶುಲ್ಕ 50 ಸಾವಿರದಿಂದ ಲಕ್ಷವೂ ಆಗಬಹುದು!

ಈಗ ಗೊತ್ತಾಯಿತಲ್ಲ ಜನ್ಮಜನ್ಮಾಂತರದ ರೊಕ್ಕದ ರಹಸ್ಯ. ಇದರಲ್ಲಿ ಚಾನೆಲ್‌ನವರ ಪಾಲು ಎಷ್ಟೋ ಗೊತ್ತಿಲ್ಲ.

* * *



ಈತ ಈ ರಾಜ್ಯದ ಟಾಪ್ ಒನ್ ವಾಸ್ತು ಪಂಡಿತನಂತೆ. ಅದೇ ಚಾನೆಲ್ಲಿನಲ್ಲಿ ಈತ ರವಿವಾರ ಒಂದು ತಾಸಿನ ಕಾರ್ಯಕ್ರಮ ನಡೆಸಿ ಗಿರಾಕಿಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಈ ಮಹಾಶಯನ ಹೆಸರು ಚಂದ್ರಶೇಖರ ಗುರೂಜಿ. ವಾಸ್ತು ಹೆಸರಲ್ಲಿ ಮನೆ ಒಡೆಯುವುದೇ ಈತನ ದಂಧೆ. ಕೋರ್ಟುಗಳಲ್ಲಿ ವ್ಯಾಜ್ಯ ಗೆಲ್ಲಲು ವಾಸ್ತು ಮಾರ್ಗಗಳನ್ನು ಈತ ಹೇಳಿಕೊಡುತ್ತಾನೆ! ಈಗ ಈತ ಹೃದಯರೋಗ ತಜ್ಞನೂ ಆಗಿದ್ದಾನೆ. ಕಳೆದ ರವಿವಾರ ಈತ ಹೃದಯದ ಕಾಯಿಲೆಗಳಿಗೆ ವಾಸ್ತುದೋಷ ಕಾರಣವೆಂದ, ಅದಕ್ಕೆ ತನ್ನಲ್ಲಿ ಪರಿಹಾರಗಳೂ ಇವೆ ಎಂದುಬಿಟ್ಟ. ದೇಹದ ಅನಾರೋಗ್ಯಕ್ಕೆ ಸಪ್ತಚಕ್ರಗಳು ಕಾರಣವಂತೆ. 'ಅನಹತ' ಚಕ್ರವು ಹೃದಯವನ್ನು ನಿಯಂತ್ರಿಸುತ್ತದಂತೆ! ವಾಸ್ತು ದೋಷದಿಂದ ಈ ಚಕ್ರ ದಾರಿ ತಪ್ಪಿದಾಗ ಹೃದಯ ಕಾಯಿಲೆ ಬರುತ್ತಂತೆ. ಹೇಗಿದೆ ಈ ಸಿವಿಲ್ ಇಂಜಿನಿಯರನ ವೈದ್ಯಜ್ಞಾನ?

ಈ ಮಹಾಶಯನ ನಂಬರಿಗೂ ಕಾಲ್ ಮಾಡಿದೆವು. ಸ್ವಾಗತಕಾರಿಣಿ ಒಂದು ತಾರೀಖು ಫಿಕ್ಸ್ ಮಾಡಿ, 'ಅವತ್ತು ನಮ್ಮ ವಾಸ್ತು ತಜ್ಞರ ತಂಡ ನಿಮ್ಮ ಮನೆಗೆ ಬಂದು ಮನೆಯ ವಾಸ್ತು ಪರೀಕ್ಷಿಸಿ ಪರಿಹಾರದ ನಕ್ಷೆ ನೀಡುತ್ತದೆ. ಬಂದ ತಕ್ಷಣ 501 ರೂ. ನೀಡಬೇಕು. ಪರಿಹಾರದ ನಕ್ಷೆಗೆ ಕನಿಷ್ಠ ಹತ್ತು ಸಾವಿರವಾಗುತ್ತದೆ. ಅದು 50 ಸಾವಿರವೂ ಆಗಬಹುದು. ರೆಡಿಯಾಗಿ, ನಿಮ್ಮ ಸಮಸ್ಯೆಗಳಿಗೆ ಸದ್ಯದಲ್ಲೇ ಪರಿಹಾರ ಸಿಗುತ್ತೆ' ಎಂದುಬಿಟ್ಟಳು. ಇದೇ ಹದಿಮೂರಕ್ಕೆ ವಾಸ್ತು ಪಿಶಾಚಿಗಳು ನಮ್ಮ ಮನೆಗೆ ವಕ್ಕರಿಸಲು ರೆಡಿಯಾಗಿವೆ. ಈಗ ಮತ್ತೆ ಫೋನ್ ಮಾಡಿ ಉಗಿದು, ಬರಬೇಡಿ ವಂಚಕರೇ ಎಂದು ಹೇಳಬೇಕಿದೆ. ಆಕಸ್ಮಾತ್ ಅವರೇನಾದರೂ ಬಂದರೆ, ನಾಲ್ಕನೇ ಕ್ಲಾಸಷ್ಟೇ ಓದಿದ್ದರೂ ವೈಜ್ಞಾನಿಕ ಮನೋಭಾವ ರೂಢಿಸಿಕೊಂಡಿರುವ ನನ್ನವ್ವನೇ ಉಗಿದು ಉಪ್ಪಿನಕಾಯಿ ಹಾಕಿ ಅವರ ಜನ್ಮವನ್ನೇ ಜಾಲಾಡಿ ಬಿಡುತ್ತಾಳೆ. ಸುಮ್ಮನೇ ಇಂಥದ್ದೆಲ್ಲ ಮಾಡಿದ್ದಕ್ಕೆ, ನನಗೂ ಕ್ಲಾಸು ತೆಗೆದುಕೊಳ್ಳುತ್ತಾಳೆ. ಆ ವಾಸ್ತು ಪಿಶಾಚಿಗಳು ಬರದಂತೆ ಮಾಡಬೇಕಿದೆ ಈಗ.

ಮೇಲಿನ ಎರಡೂ 'ಸ್ಟೋರಿ'ಗಳು ಒಂದೇ ಚಾನೆಲ್ಲಿಗೆ ಸಂಬಂಧಿಸಿವೆ. ಇಂತಹ ಚಾನೆಲ್ಲಿನಲ್ಲೇ ಹುಲಿಕಲ್ ನಟರಾಜರ 'ಎಲ್ಲಾ ಮಾಯವೋ' ಎಂಬ ಪವಾಡ ಬಯಲು ಕಾರ್ಯಕ್ರಮ ಬರುತ್ತಿದೆ. ಮೂಢನಂಬಿಕೆಗಳ ವಿರುದ್ಧ ಸಾಕಷ್ಟು ಹೋರಾಟ ಮಾಡಿರುವ ಹುಲಿಕಲ್‌ರವರು, ಅದೇ ಚಾನೆಲ್ಲಿನ ಆತ್ಮದಲ್ಲಿ ಅಂತರ್ಗತವಾಗಿರೋ ವಾಸ್ತು, ಜನ್ಮಾಂತರದ ಪೀಡೆಗಳನ್ನು ಮೊದಲು ಹೊಡೆದೋಡಿಸಲಿ.

* * *

ಕನ್ನಡದ ನಂಬರ್ ಒನ್ ಚಾನೆಲ್ ಎಂಬ ಟ್ಯಾ ಹೊಂದಿರುವ ನ್ಯೂಸ್ ಚಾನೆಲ್ಲಿನಲ್ಲೂ ಇಂತಹ ಕಾರ್ಯಕ್ರ ಗಳು (ಕಾರ್ಯ'ಕರ್ಮ'ಗಳು) ಅವ್ಯಾಹತವಾಗಿ ಪ್ರಸಾರವಾ ಗುತ್ತಿವೆ. ದಶಕದಿಂದ ಪ್ರಸಾರವಾಗುತ್ತಿರುವ 'ಹೀಗು ಉಂಟೇ?' ಎಂಬ ಕಾರ್ಯಕ್ರಮವಂತೂ ಪರಮ ಮೌಢ್ಯದ ಸರಕು. ಇನ್ನು ಆ ಚಾನೆಲ್ಲಿನ ಭಾಗವ ಆಗಿರುವ ಸಚ್ಚಿದಾನಂದ ಬಾಬು ಎಂಬ ಜ್ಯೋತಿ ಕಮ್ ವಾಸ್ತು ಪಂಡಿತನೂ ಈಗ ಆರೋಗ್ಯದ ಸಮಸ್ಯೆಗಳ ಪರಿಹಾರ ನೀಡಲಾರಂಭಿಸಿದ್ದಾನೆ. ಈತನ ಸ್ಪೆಷಾಲಿ ಏನೆಂದರೆ, ಎಲ್ಲವನ್ನೂ ಮಂತ್ರ ಜಪ ಮಾಡಿಸು ಮೂಲಕವೇ ಪರಿಹಾರ ನೀಡುತ್ತಾನೆ. ಒಂದೊಂದ ಕಾಯಿಲೆಗೆ ಒಂದೊಂದು ಮಂತ್ರ... ಶತ್ರು ದೋ ನಿವಾರಣೆಗೂ ಒಂದು ಮಂತ್ರ! ಗಂಡು ಶಿ ಹಡೆಯಲೂ ಒಂದು ಮಂತ್ರ!!

* * *


ತೆನೆ ಹೊತ್ತ ಮಹಿಳೆಯೊಬ್ಬರ ಮನರಂಜ ಚಾನಲ್ಲೊಂದು ಮುಂಜಾನೆ ಜುಗಲ್‌ಬಂದಿ ಕಾರ್ಯಕ್ರ ವೊಂದನ್ನು ನಡೆಸುತ್ತದೆ. ಇದು ಸಂತಾನಭಾಗ್ಯದ ಸಮಸ್ ಪರಿಹಾರ ಕೊಡುವ ಕಾರ್ಯಕ್ರಮ. ಈ ಜುಗಲ್‌ಬಂದಿಯ ಡಾಕ್ಟರೇ ಅಲ್ಲದ ಸ್ವಯಂಘೋಷಿತ ಐವಿಎಫ್ ಎಕ್ಸ್‌ಪರ್ ಗುರುಮೂರ್ತಿ, ತನ್ನ ಕುಚೇಷ್ಟೆಗಳಿಂದ ಮಾನಗೇಡಿಯಾ ರುವ ಚಾನೆಲ್ ಡಾರ್ಲಿಂಗ್ ಕಾಳಿಸ್ವಾಮಿ ಸಂತಾನ ಭಾಗ ಬಗ್ಗೆ ಸಲಹೆ ಕೊಡುತ್ತಾರೆ. ಇದು ಪರಸ್ಪರ ಒಬ್ಬರಿಗೊಬ್ಬ ಪ್ರಚಾರ ಕೊಟ್ಟುಕೊಂಡು ದುಡ್ಡು ಹಿರಿಯುವ ದಂಧೆ ಆಗಿದೆ.

ಒಟ್ಟಿನಲ್ಲಿ ಆರೋಗ್ಯ ವೈದ್ಯ ವಿಜ್ಞಾನದ ಬಗ್ಗೆ ಅರಿವಿಲ್ ವಂಚಕರೆಲ್ಲ ಚಾನೆಲ್‌ಗಳೊಂದಿಗೆ ಶಾಮೀಲಾ ಅಮಾಯಕರನ್ನು ವಂಚಿಸುತ್ತಿದ್ದಾರೆ. ಇದನ್ನೆಲ್ಲ ಪ್ರಶ್ನಿಸಬೇಕಾ ಮುದ್ರಣ ಮಾಧ್ಯಮದ 'ದೈತ್ಯ'ರು ಜಾಣ ಮರೆ ಪ್ರದರ್ಶಿಸುತ್ತಿದ್ದಾರೋ? ಅಥವಾ ಅವರಿಗೂ ಇಂಥದ್ದರ ಅಪಾರ ನಂಬಿಕೆಯಿದೆಯೋ?

ನಮ್ಮ ಪೊಲೀಸ್ ಇಲಾಖೆ, ಕಾನೂನು ಇಲಾ ಆರೋಗ್ಯ ಇಲಾಖೆ, ಮೆಡಿಕಲ್ ಕೌನ್ಸಿಲ್ ಮತ್ತು ರಾ ವಿಜ್ಞಾನ ಪರಿಷತ್ತಿನವರೆಲ್ಲ ಸೇರಿ ಸಮಾಲೋಚಿಸಿ ಕ್ರಮ ಮುಂದಾದರೆ ಮಾತ್ರ ಈ ನಕಲಿ ವಾಸ್ತು-ಜ್ಯೋತಿಷ್ಯ ವೈದ್ಯ ಅವರನ್ನು ಪೋಷಿಸುತ್ತಿರುವ ಚಾನೆಲ್‌ಗಳಿಗೆ ಕಡಿವಾ ಹಾಕಬಹುದೇನೋ?

■ ಪಿ.ಕೆ .ಮಲ್ಲನಗೌಡ

ಸರ್ವಾಧಿಕಾರಿಯ ಶ್ರದ್ಧಾಂಜಲಿ




ದೇಶದಲ್ಲಿ
ನರಮೇಧದ ನಾಯಕನಾಗಿದ್ದ
ಸರ್ವಾಧಿಕಾರಿಯೊಬ್ಬ
ಪರದೇಶದ ಶೂನ್ಯ ನೆಲದಲ್ಲಿ
ಹೂ ಇಟ್ಟು ತಲೆಬಾಗಿದ.

ಆ ಕೆಂಪು ಗುಲಾಬಿಗೆ
ಅಂಟಿಕೊಂಡಿದ್ದ
ಕೌಸರ್ ಬಾನೊಳ
ಹೊಟ್ಟೆ ಸೀಳಿ ಬಂದ
ಪಿಂಡದ ನೆತ್ತರ ನಾತ
ಮೂಗಿಗೆ ಬಡಿಯಿತು.

ತಲೆ ಎತ್ತಿ ನೋಡಿದರೆ
ಅವಳಿ ಗೋಪುರಗಳು
ಮತ್ತೆ ಎದ್ದು ನಿಂತಂತೆ
ಭಾಸವಾಯಿತು.


ಎಲ್ಲ ಕಿಟಕಿಗಳಿಂದ
ಗುಜರಾತ್‌ನ ಹೆಣಗಳು
ಕೈ ಬೀಸುತ್ತಿದ್ದುದು ಕಂಡಿತು.
ತಾನು ಸರ್ವಾಧಿಕಾರಿ
ಎಂಬುದು ಮತ್ತೆ ನೆನಪಾಗಿ
ಸಾವರಿಸಿಕೊಂಡು.
ಐವತ್ತಾರಿಂಚಿನ ಎದೆ ಉಬ್ಬಿಸಿ
'ಹಮ್ ಸರ್ ನಹಿ ಜುಕಾಯೇಂಗೆ'
ಎಂದು ಮತ್ತೆ ಬೊಬ್ಬೆ ಹೊಡೆಯುತ್ತಾ
ರಕ್ತ ಮೆತ್ತಿದ ಕೈಗಳನ್ನು
ಶ್ವೇತ ಭವನದ ನೀರಿನಲ್ಲೇ
ತೊಳೆಯಬೇಕೆಂದು
ಅತ್ತ ಕಡೆ ಧಾವಿಸಿದ.



● ಶಶಿಧರ ಹೆಮ್ಮಾಡಿ

ಶೂನ್ಯ ನೆಲ=ಗ್ರೌಂಡ್ ಝೀರೊ
ಹಮ್ ಸರ್ ನಹಿ ಜುಕಾಯೇಂಗೆ = ನಾವು ತಲೆ ಬಾಗುವುದಿಲ್ಲ

ರೈತರು ಸಾಯುತ್ತಿರುವಾಗ ರೈತ ನಾಯಕನ ನಿರ್ಗಮನ



ಗಾಂಧೀಜಿ ಯುಗದ ಹೋರಾಟದ ಜೀವವೊಂದು ...ರೀತಿಯ ವಿಷಾದದಿಂದಲೇ ಕಣ್ಮರೆಯಾಗಿದೆ. ...ಯಪ್ಪನವರ ವಿಷಾದಕ್ಕೆ ಕಾರಣ ಎಲ್ಲಾ ಚಳವಳಿಗಳ ...ಉಣ್ಣುತ್ತಿರುವ ಈಚಿನ ತಲೆಮಾರಿಗೆ ಯಾವ ಜವಾಬ್ದಾರಿಯಾಗಲಿ, ಹಿಂದಿನವರ ತ್ಯಾಗ ...ನದ ಬಗ್ಗೆ ಗೌರವವಾಗಲಿ ಇಲ್ಲದಿರುವುದು. ...ೂ ರೈತ ಸಾಯುತ್ತಿದ್ದಾನೆ ಎಂಬುದೇ ಅವರ ...ಾಗಿತ್ತು.

...ಣಪತಿಯಪ್ಪನವರು ದೆಹಲಿಯಲ್ಲಿ ಮಹಾತ್ಮ ಗಾಂಧಿ ... ಕೆಲಸವನ್ನು ಇಲ್ಲಿ ಮಾಡುವವರಾಗಿದ್ದರು. ...ಗಾಂಧಿಯನ್ನು ನೋಡಿ ಸಲಹೆ ಪಡೆಯುವ ...ರಲಿಲ್ಲ. ಆ ತಲೆಮಾರಿನವರೆ ಹಾಗೆ. ದೂರದಲ್ಲಿದ್ದ ...ಹೇಳಿದ್ದನ್ನೆಲ್ಲಾ ಕಾರ್ಯಗತ ಸಾಧಿಸುವವರಾಗಿದ್ದರು. ...ಣಪತಿಯಪ್ಪನವರ ಎದುರು ಬರೀ ಸ್ವಾತಂತ್ರ್ಯ ...ಾಟವಷ್ಟೇ ಇರಲಿಲ್ಲ; ಶೋಷಣೆ, ದಬ್ಬಾಳಿಕೆ, ...ತೆ, ಜೊತೆಗೆ ಭೂ ಹೋರಾಟಗಳೂ ...ಂಡಿದ್ದವು. ಇದಕ್ಕೆಲ್ಲಾ ದಿಟ್ಟತನ ಬೇಕಿತ್ತು.

...ಣಪತಿಯಪ್ಪನವರು ಕಾಗೋಡು ಚಳವಳಿ ...ಸರಾಗಿ ಹೋರಾಡುತ್ತಿದ್ದ ಸಮಯದಲ್ಲಿ, ...ಾದರೂ ಪೊಲೀಸ್ ಬರುತ್ತಿದ್ದಾನೆ ಎಂದರೆ ಯಾವ ... ಮಾಡದಿದ್ದರೂ ರೈತರು ಊರು ಬಿಟ್ಟು ...ದ್ದರಂತೆ. ಅಂತಹ ರೈತರನ್ನು ಸಂಘಟಿಸಿ "ನೀವು ...ಉಳುತ್ತಿರುವುದರಿಂದ ನೀವೇ ಒಡೆಯರು. ...ಗೇಣಿ ಕೊಟ್ಟವನು ಒಡೆಯನಲ್ಲ" ಎಂಬ ...ತಿಯನ್ನು ತಿಳಿಸಿ, ರೈತರಲ್ಲಿ ಕಿಂಚಿತ್ ಧೈರ್ಯ ...ದ್ದು ಸಾಮಾನ್ಯ ಸಂಗತಿಯಲ್ಲ. ಆದರೆ ಈ ...ವಾಗಿ ಅವರೆಂದೂ ರೈತರನ್ನ ಹಿಂಸಾಮಾರ್ಗಕ್ಕೆ ...ವರಲ್ಲ, ಏಕೆಂದರೆ ಅವರ ಲೀಡರ್ ಗಾಂಧೀಜಿ ...ಮಾರ್ಗಕ್ಕೆ ಇಳಿದವರನ್ನು ಕೈಬಿಡುತ್ತಿದ್ದರು. ಇದನ್ನ ...ನೋಡಿದ್ದ ಗಣಪತಿಯಪ್ಪ ಅಹಿಂಸಾತ್ಮಕವಾಗಿಯೇ ...ಚಳವಳಿ ಕಟ್ಟಿದರು. ಸದರಿ ಚಳವಳಿಯತ್ತ ...ೂ ಗಮನ ಹರಿಸಿದ್ದಷ್ಟೇ ಅಲ್ಲ, ಅವರು ...ಡಿಗೂ ಬಂದಿದ್ದು ಮತ್ತು ಅರೆಸ್ಟಾದದ್ದು ಒಂದು ...ರೋಚನಕಾರಿ ಸಂಗತಿಯಾಗಿತ್ತು.

...ಯುವ ಸಮಾಜವಾದಿಗಳೂ ಸಕ್ರಿಯವಾಗಿ ...ಡರು. ಗೋಪಾಲಗೌಡರಂತೂ ಸ್ವಾತಂತ್ರ ಚಳವಳಿ ... ವೀರಾವೇಶದಿಂದ ಹೋರಾಡುತ್ತ ಪೊಲೀಸರಿ...ಸದಂತೆ ಭೂಗತರಾಗಿ ಕೆಲಸ ಮಾಡುತ್ತಿದ್ದರು. ...ಣಾಮ ಭೂಸುಧಾರಣೆ ಕಾಯ್ದೆ ಜಾರಿಯಾಗಿ ...ಗೇಣಿದಾರರು ಭೂಮಿಗೆ ಒಡೆಯರಾದರು. ಆ ...ಣಪತಿಯಪ್ಪ ಬದಿಗೆ ಸರಿದು ಸಮಾಜವಾದಿಗಳನ್ನ ...ವಕ್ತವಾಗಿ ನಗುತ್ತಿದ್ದ ಬಂಗಾರಪ್ಪನವರು ಆ ... ಲೀಡರಾಗಿ ಮೆರೆದದ್ದು ಈಗ ಇತಿಹಾಸ.

...ಣಪತಿಯಪ್ಪನವರ ಜೊತೆ ಇನ್ನೊಂದು ಹೆಸರು ...ಇದೆ. ಅದು ಕಾಗೋಡು ತಿಮ್ಮಪ್ಪನವರ ...ಗಣಪತಿಯಪ್ಪ ಭೂಮಿ ಕೊಡಿಸುವವರಾಗಿದ್ದರೆ ...ು ತಿಮ್ಮಪ್ಪನವರು ಸರಕಾರಿ ಸವಲತ್ತುಗಳನ್ನು ...ಾಯಕರಾದರು. ಆ ಕೆಲಸದಲ್ಲವರು ಇಂದೂ ...ಶರಾಗಿದ್ದಾರೆ. ರಾಜಕೀಯವಾಗಿ ದಿಕ್ಕು ತಪ್ಪಿದ ...ಪ್ಪನವರು ಹಿನ್ನಡೆ ಅನುಭವಿಸಿದರು.

...ನ್ನ ಬಹಳ ಸಿಟ್ಟಿನಿಂದ ತಮ್ಮ ಪುಸ್ತಕದಲ್ಲಿ ...ರುವ ನಮ್ಮ ಕೊಣಂದೂರು ವೆಂಕಪ್ಪಗೌಡ ...ವನ್ನ, ತೆಗಳಿ, ಗಣಪತಿಯಪ್ಪನವರನ್ನ ಎತ್ತಿ ...ನೋಡಿದರೆ ಈ ಪುಸ್ತಕವೇ ಒಂದು ಅಚ್ಚರಿಯಂತೆ ... ಈ ಪುಸ್ತಕವನ್ನೋದಿದ ನಾನು ಪತ್ರಿಕೆಯಲ್ಲಿ ...ಮಾಡಿದ್ದರಿಂದ ಗಣಪತಿಯಪ್ಪನವರಿಗೆ ...ು ಮುಳ್ಳಿರುವುದನ್ನು ಆದಿಕೊಂಡಿದ್ದೆ, ಭೂ... ...ಯ ಸಂಪಾದಿಸಿ, ಸಂಸಾರವನ್ನ ಸರಿಗೆಸಿದ ...ನೋಡುವ ಮತ್ತೊಂದು ನಾನು ಬರೆದು...

ಗಣಪತಿಯಪ್ಪನವರನ್ನು ಕೆರಳಿಸಿತ್ತು, ಕೂಡಲೇ ನನ್ನನ್ನು ಹುಡುಕಿಕೊಂಡು ಬಂದಿದ್ದರು. ಸುದೈವಕ್ಕೆ ನಾನು ಇರಲಿಲ್ಲ, ಆದ್ದರಿಂದ ಬಚಾವಾದೆ. ಆದರೆ ಈಚೆಗೆ ಗಣಪತಿಯಪ್ಪನವರನ್ನು ನೋಡಿ ಮಾತನಾಡಿಸಲು ಬಂದ ನಟರಾಜ್ ಹುಳಿಯಾರ್ ಜೊತೆ ವಡ್ನಾಲ್ ಗ್ರಾಮಕ್ಕೆ ಹೋದಾಗ ನನ್ನ ಹೆಸರು ಕೇಳಿ ಪ್ರೀತಿಯಿಂದ ಭುಜ ಸವರಿ ಮಗುವಿನಂತೆ ನಕ್ಕರು.

ತೊಂಬತ್ತೊಂದು ವರ್ಷವಾಗಿದ್ದೂ ಮುಖದಲ್ಲಿ ಮುಪ್ಪಿನ ಸುಕ್ಕಿರಲಿಲ್ಲ. ಒಂದು ರೀತಿ ವಯಸ್ಸಾದ ಮಗುವಿನಂತೆ ಕಾಣುತ್ತಿದ್ದರು. ನಟರಾಜ್ ಹುಳಿಯಾರ್, ಕಾಗೋಡು ಹೋರಾಟ ಮತ್ತು ಗೋಪಾಲಗೌಡರ ಬಗ್ಗೆ ಕೇಳಿದರು. ಗಣಪತಿಯಪ್ಪನವರ ಮುಖ ಕಳೆಗಟ್ಟಿ ಕಣ್ಣು ಮಿನುಗಿದವು. ಆ ಕಾಲಕ್ಕೆ ಮಗುಚಿಕೊಂಡ ಅವರ ಮನಸ್ಸು ಏನೋ ಹೇಳಲು ತವಕಿಸುತ್ತಿದ್ದಂತೆ ಕಾಣುತ್ತಿತ್ತು. ಮರೆಯಲ್ಲಿ ನಿಂತ ಅವರ ಪತ್ನಿ ರಾಜಕೀಯದ ಪ್ರಶ್ನೆ ಕೇಳಬೇಡಿ, ಜಾಸ್ತಿ ಮಾತನಾಡಿಸಬೇಡಿ ಎಂದು ವಿನಂತಿಸಿಕೊಳ್ಳತೊಡಗಿದರು. ಅನಿವಾರ್ಯವಾಗಿ ನಾವು ಎದ್ದು ಹೊರಟಾಗ ಗೇಟಿನವರೆಗೂ ಬಂದು ಬೀಳ್ಕೊಟ್ಟರು. ಅದೊಂದು ಕಡೆಯ ಭೇಟಿ ಎಂದು ನಮಗಾಗಲೇ ಅರಿವಾಗಿತ್ತು.


ಗಣಪತಿಯಪ್ಪನವರು ಪ್ರಖರ ವಿಚಾರವಂತರು. ಜಾತಿಯತೆಯ ವಿರೋಧಿಗಳು. ಅಸ್ಪೃಶ್ಯತೆ ಕಂಡರೆ ಕೆಂಡವಾಗುತ್ತಿದ್ದರು. ಆದರೂ ಅವರ ಪ್ರತಿಭಟನೆಗಳು ಸಾತ್ವಿಕವಾಗಿರುತ್ತಿದ್ದವು. ಮನಪರಿವರ್ತನೆ ಕ್ರಮದಲ್ಲಿರುತ್ತಿದ್ದವು. ಅವರ ಹೋರಾಟಗಳಿಗೆಲ್ಲಾ ಇತ್ತೀಚೆಗೆ ಸಾಥ್ ಕೊಡುತ್ತಿದ್ದವರು ಗೋಪಾಲಗೌಡ ವೇದಿಕೆಯ ಅಧ್ಯಕ್ಷರಾದ ಕೊಲ್ಲೂರು ಮೇಘರಾಜರು.

ಗಣಪತಿಯಪ್ಪನವರು ಸ್ವಾತಂತ್ರ್ಯ ಹೋರಾಟಗಾರರೇ ಅಲ್ಲ, ಅವರೆಂದೂ ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋದವರಲ್ಲ ಎಂದು ಪುರೋಹಿತಶಾಹಿ ಪತ್ರಿಕೆಯೊಂದು ಬರೆದುಬಿಟ್ಟಿತು. ಗಣಪತಿಯಪ್ಪ ತಮ್ಮ ಸ್ವಾತಂತ್ರ ಹೋರಾಟದ ದಾಖಲೆಗಳನ್ನು ತೆಗೆದುಕೊಂಡು ಆ ಪತ್ರಿಕಾಲಯಕ್ಕೆ ಹೋಗಿ ಸಂಪಾದಕನ ಮುಸುಡಿಗೆ ಹಿಡಿದರು. ಬೆವೆತುಹೋದ ಸಂಪಾದಕ ಕಾಫಿ ತರಿಸಿದ. ಕಾಫಿ ಲೋಟವನ್ನೇ ಎಸೆದ ಗಣಪತಿಯಪ್ಪ "ಇನ್ನಾದ್ರು ಈ ತರ ಪೂರ್ವಗ್ರಹ ಬಿಟ್ಟು ಬರೀರಿ" ಎಂದು ಉಗಿದು ಬಂದರು.

ಆದರೆ ಉಗಿಸಿಕೊಂಡವರ ಚೇಷ್ಟೆಯೇ ವಿಜೃಂಭಿಸತೊಡಗಿದೆ. ಗಣಪತಿಯಪ್ಪನವರು ಭೂರಹಿತರಿಗೆಲ್ಲಾ ಭೂಮಿ ಸಿಗಬೇಕೆಂದು ಹೋರಾಡಿದವರು. ಆದರೇನು, ಭೂಮಿ ಇದ್ದವರೇ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸನ್ನಿವೇಶದಲ್ಲಿ ಅವರು ನಿರ್ಗಮಿಸಿದ್ದಾರೆ. ಇದೊಂದು ವಿಪರ್ಯಾಸ.

● ಬಿ. ಚಂದ್ರೇಗೌಡ

ನಮಾಜು ಮಾಡಲು ಹೋಗಿ ಮಸೀದಿ ಕೆಡವಿಕೊಂಡ ಯೇಸುದಾಸ್



ಕೆ.ಜೆ.ಯೇಸುದಾಸ್ ಎಂದಾಕ್ಷಣ ಧರ್ಮ-ಪಂಥಗಳನ್ನು ಮೀರಿ ಎಲ್ಲರಲ್ಲೂ ಗೌರವ ಭಾವನೆ ಮೂಡುವ ಒಂದು ಕಾಲವಿತ್ತು, ಅದು ಅವರ ಹಾಡಿನ ಮಾಧುರ್ಯ ಅಥವಾ ಅವರ ನಿಷ್ಕಲ್ಮಶ ದೈವ ಭಕ್ತಿಗೆ ಬೆರಗಾಗಿ ಜನ ಪ್ರೀತಿಸುತ್ತಿದ್ದ ರೀತಿಯಾಗಿತ್ತು, ಆದರೀಗ ಹಿಂದೂ ಧರ್ಮದ ಅತಿಯಾದ ಸೆಳೆತವೋ ಇಲ್ಲಾ ತಾನೇ ದೈವ ಪುರುಷನಾದೆನೆಂಬ ಭ್ರಮೆಗೆ ಬಿದ್ದೋ (ಕೊಲ್ಲೂರಿಗೆ ಯೇಸುದಾಸರು ಬರುವ ದಿನ ಕಾದು ಮಕ್ಕಳಿಗೆ ಅವರಿಂದ ಅಕ್ಷರಾರಂಭ ಕಾರ್ಯ ಮಾಡಿಸುವವರಿದ್ದಾರೆ. ಅವರ ಆಶೀರ್ವಾದಕ್ಕೆ ಹಿರಿಕಿರಿಯರೆನ್ನದೇ ಮುಗಿಬೀಳುವವರಿದ್ದಾರೆ) ಭಕ್ತಿಗಿಂತ ಜಿಗುಟು ಸಂಪ್ರದಾಯದ ಸೆಳೆತಕ್ಕೊಳಗಾದವರಂತೆ ಇತ್ತೀಚೆಗೆ ವರ್ತಿಸುತ್ತಿರುವುದು ಮಾತ್ರ ತುಂಬಾ ನೋವಿನ ಸಂಗತಿಯಾಗಿದೆ.

ಹೇಳಿಕೇಳಿ ಸ್ವಯಂ ಯೇಸುದಾಸರೇ ಹಿಂದು ಧರ್ಮದ ಕರಾಳ ಸಂಪ್ರದಾಯಗಳ ಬಲಿಪಶುವೆಂದೇ ಖ್ಯಾತಿಪಡೆದಂತವರು. ಅವರು ಭಕ್ತಿಯಿಂದ ಆರಾಧಿಸುವ ಗುರುವಾಯೂರಪ್ಪನ ದರುಶನಕ್ಕೆ ಕೇವಲ ಜಾತಿಯ ನೆಪವೊಡ್ಡಿ ಅವರನ್ನು ತಡೆದು ಅವಮಾನಿಸಲಾಗಿತ್ತಲ್ಲದೇ ಇಂದಿಗೂ ಅವರಿಗೆ ಪ್ರವೇಶ ಭಾಗ್ಯ ಸಿಕ್ಕಿಲ್ಲ. ಇಂತಹ ಯೇಸುದಾಸ್ ಇದೇ ದೇಗುಲ ಪ್ರವೇಶದ ವಿಷಯಕ್ಕೆ ಸಂಬಂಧಿಸಿಯೇ ಮಹಿಳೆಯರ ಡ್ರೆಸ್ ಕೋಡ್ ಬಗ್ಗೆ ವಿಪರೀತ ತಲೆಕೆಡಿಸಿಕೊಂಡಿದ್ದು ಮಾತ್ರ ತಮಾಷೆಯಾಗಿದೆ.

ಮಹಿಳೆಯರು ಜೀನ್ಸ್ ತೊಟ್ಟು ದೇಗುಲಕ್ಕೆ ಬರಬಾರದು, ಇದು ಭಾರತೀಯ ಸಂಸ್ಕೃತಿಯಲ್ಲ, ಯಾವುದನ್ನು ಮುಚ್ಚಿಟ್ಟುಕೊಳ್ಳಬೇಕೋ ಅದನ್ನು ಮುಚ್ಚಿಟ್ಟುಕೊಳ್ಳಬೇಕೇ ವಿನಃ ಪರೋಕ್ಷ ಯಾ ಅಪರೋಕ್ಷ ಪ್ರದರ್ಶನ ಮಾಡಬಾರದು ಇದು ಇತ್ತೀಚೆಗಿನ ಯೇಸುದಾಸ್ ಉವಾಚ. ಈ ಸಹ್ಯ-ಅಸಹ್ಯ ಅಥವಾ ಪ್ರಚೋದಕ ಎನ್ನುವುದೆಲ್ಲ ನೋಡುವವರ ಕಣ್ಣಿಗೆ ಸಂಬಂಧಿಸಿದವುಗಳೇ ವಿನಹ ಅದನ್ನೇ ನೆಪವಾಗಿಟ್ಟುಕೊಂಡು ಒಂದು ವಸ್ತ್ರ ಪದ್ಧತಿಯನ್ನೇ ನೇರಾನೇರ ದೂರುವುದು ಸರಿಯಲ್ಲ, ಹಾಗೆ ಹೇಳಬೇಕೆಂದರೆ ಪ್ರತಿ ದಿನ ನೋಡುವ ಸೀರೆಯ ಉಡುಗೆ ನಮಗೆ ಸಾಮಾನ್ಯ ಎನಿಸಿದರೆ ವಿದೇಶಿಗರ ದೃಷ್ಟಿಯಲ್ಲದು ಮಾದಕ (ಸೆಕ್ಸಿ) ಉಡುಗೆಯೆಂದೇ ಪರಿಗಣಿಸಲ್ಪಟ್ಟಿದೆ. ಅದೇ ರೀತಿ ಇದೀಗ ಸರ್ವೇ ಸಾಮಾನ್ಯವಾಗಿರುವ ಚೂಡಿದಾರ್‌ನಂತಹ ಉಡುಗೆಗಳು ಭಾರತೀಯ ಮೂಲದ್ದಲ್ಲವೇ ಅಲ್ಲ, ಇಲ್ಲಿ ವಿಶಿಷ್ಟ ರೀತಿಯಲ್ಲಿ ಪರಿವರ್ತನೆಗೊಂಡ ಸೀರೆಯೆಂಬ ಉಡುಗೆಯ ಮೂಲವೂ ಗ್ರೀಸ್‌ನದ್ದು ಎನ್ನುವ ವಾದವಿದೆ. ಇದೆಲ್ಲಾ ನೋಡುವಾಗ ಅಮೆರಿಕಾದಲ್ಲೇ ಸೆಟಲ್ ಆಗಿರುವ ಈ ಯೇಸುದಾಸರು ದೇಶ ಹಾಗು ಧರ್ಮಗಳನ್ನು ದಾಟಿ ಯೋಚಿಸುವುದನ್ನು ಬಿಟ್ಟು ಚಿಲ್ಲರೆ ಆಸಾರಾಮ್‌ನಂತೆ ಡೈಲಾಗ್ ಹೊಡೆಯುತ್ತಿರುವುದು ಬೇಸರದ ಸಂಗತಿ.

2-3 ವರ್ಷಗಳ ಹಿಂದೆ ಪುತ್ತೂರಿನ ಈಶ್ವರಮಂಗಲ ಎನ್ನುವಲ್ಲಿ ರಾಮನ ಪಾರ್ಟ್ ಟೈಮ್ ಅವತಾರವಾದ ಶ್ರೀ ಶ್ರೀ ರಾಘವೇಶ್ವರ ಸ್ವಾಮೀಜಿಯವರು ತಮ್ಮ ಕೈಯಾರೆ ಇದೇ ಯೇಸುದಾಸ್ ಅವರಿಗೆ ಹಿಂದೂ ಧರ್ಮ ಪ್ರತಿಷ್ಠಾನದ 'ಧರ್ಮಶ್ರೀ ಪ್ರಶಸ್ತಿ'ಯನ್ನು ಪ್ರದಾನ ಮಾಡಿದ್ದರು. ಕಳೆದ ವರ್ಷ ಈ ಪ್ರಶಸ್ತಿಯನ್ನು ಜ್ಯೋತಿಷ್ಯ-ಕವಡೆಶಾಸ್ತ್ರ ಪಠ್ಯಕ್ರಮವಾಗಬೇಕೆಂದಿದ್ದ ಮುರಳಿ ಮನೋಹರ ಜೋಷಿಯವರಿಗೆ ನೀಡಲಾಗಿತ್ತು, ಇದಕ್ಕೂ ಮೊದಲು ಅಶೋಕ್ ಸಿಂಘಾಲ್, ಭೈರಪ್ಪರಂತವರು ಈ ಪ್ರಶಸ್ತಿಗೆ ಭಾಜನರಾಗಿದ್ದರು. ಇವರೆಲ್ಲ ಹಿಂದೂ ಧರ್ಮದ ಕಟ್ಟು ಕಟ್ಟಳೆಗಳನ್ನು ಎತ್ತಿ ಹಿಡಿಯುವರು. ಅವತ್ತು 'ಈ ಮಜ್ಜಿಗೆಯೊಳಗೆ ಯೇಸುದಾಸರಂತಹ ಮಾವಿನಮಿಡಿ (ಹೊಂದದ ವಿಚಾರ) ಹೇಗೆ ಬಂತಪ್ಪಾ?' ಎಂದು ತಲೆಕೆಡಿಸಿಕೊಂಡವರಿಗೆ ಅಪ್ಪಟ ಹಿಂದೂ ಧರ್ಮದ ವಕ್ತಾರರಂತೆ ಮಾತಾಡುತ್ತಿರುವ ಯೇಸುದಾಸರ ಮೇಲಿನ ಮಾತಿನಿಂದ ಉತ್ತರ ಖಂಡಿತಾ ಸಿಕ್ಕೇ ಸಿಕ್ಕಿರುತ್ತದಲ್ಲವೇ?

- ಶಶಿ ಪುತ್ತೂರು, ದ.ಕ

ಜನಪ್ರತಿನಿಧಿಗಳು ಜವಾಬ್ದಾರಿ ಅರಿಯಲಿ

ಭಾರತದ ಪ್ರಜಾಪ್ರಭುತ್ವದ ವ್ಯವಸ್ಥೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಕಾನೂನಿನ ನಂಬುಗೆಯ ಆಧಾರದ ಮೇಲೆ ರಚಿತಗೊಂಡಿತು. ಆದರೆ ನಮ್ಮನ್ನಾಳುವ ಯಾವ ಸರ್ಕಾರಗಳೂ ಆ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲಿಲ್ಲ, ದಕ್ಷ ಮತ್ತು ಪ್ರಾಮಾಣಿಕ ಆಡಳಿತವನ್ನು ನೀಡುವಲ್ಲಿ ಅವು ವಿಫಲಗೊಂಡವು. ಉದ್ಯೋಗ ಕೂಲಿ-ಖಾತ್ರಿ ಯೋಜನೆಯಿಂದ ಹಿಡಿದು ಕೋಟ್ಯಾಂತರ ರೂಪಾಯಿ ಕಾಮಗಾರಿ ಯೋಜನೆಗಳಲ್ಲಿ ವ್ಯಾಪಕವಾದ ಭ್ರಷ್ಟಾಚಾರ, ಗುಣಮಟ್ಟರಹಿತ ಕಳಪೆ ಕಾಮಗಾರಿ ನಡೆಯುತ್ತಿದೆ.


ಜನಪ್ರತಿನಿಧಿಗಳಿಗೆ ತಮ್ಮ ಕ್ಷೇತ್ರದ ಬಗ್ಗೆ ಕಾಳಜಿ ಇಲ್ಲ, ತಮ್ಮ ಹಿಂಬಾಲಕರಿಗೆ ಗುತ್ತಿಗೆ ಕಾಮಗಾರಿಗಳನ್ನು ನೀಡಿ ಚುನಾವಣೆಯಲ್ಲಿ ಗೆಲುವಿಗೆ ಸಹಕರಿಸಿದವರ ಋಣವನ್ನು ತೀರಿಸುವಲ್ಲಿ ಅವರೆಲ್ಲ ನಿರತರಾಗಿದ್ದಾರೆ. ಈ ಗುತ್ತಿಗೆದಾರರು ಜನಪ್ರತಿನಿಧಿಗಳಿಗೂ ಮತ್ತು ಉನ್ನತ ಅಧಿಕಾರಿಗಳಿಗೂ ಕಮಿಷನ್ ಪರ್ಸೆಂಟೇಜ್ ನೀಡಿ ಕಳಪೆ ಕೆಲಸಗೈಯುವಲ್ಲಿ ನಿರತರಾಗಿದ್ದಾರೆ. ಜನರಲ್ಲಿ ಕೂಡಾ ಪ್ರಜ್ಞಾವಂತಿಕೆಯ ಕೊರತೆಯಿದೆ. ಸರಿಪಡಿಸಬೇಕಾಗಿದ್ದ ಕೆಲವರು ಸಂಘಟನೆಗಳ ಹೆಸರಿನಲ್ಲಿ ಹಣವನ್ನು ಲಪಟಾಯಿಸುತ್ತಿದ್ದಾರೆ. ಕೆಲ ಮಾಹಿತಿ ಹಕ್ಕು ಹೋರಾಟಗಾರರು ಪ್ರಶ್ನಿಸಿದಾಗ ಅವರನ್ನೇ ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ. ಮಾಹಿತಿ ಹಕ್ಕು ಆಯೋಗ ಕೂಡ ಕ್ರಿಯಾಶೀಲವಾಗಿ ತ್ವರಿತಗತಿಯಲ್ಲಿ ನ್ಯಾಯವನ್ನು ದೊರಕಿಸಿ ಕೊಡುವಲ್ಲಿ ವಿಳಂಬ ಮಾಡುತ್ತಿವೆ. ಪಾರದರ್ಶಕ ಆಲೋಚನೆ, ಜನರಲ್ಲಿ ಸರಿಯಾದ ಪ್ರಜ್ಞಾವಂತಿಕೆ ಮೂಡಿದಾಗ ಒಂದಿಷ್ಟು ಯಶಸ್ಸು ಕಾಣಬಹುದು.

ಸಿಂಧನೂರು ತಾಲ್ಲೂಕಿನಲ್ಲಿ ಬಹುತೇಕ ಹಳ್ಳಿಗಳಿಗೆ ಇವತ್ತಿಗೂ ಸರಿಯಾದ ಸಾರಿಗೆ ಸಂಪರ್ಕ ವ್ಯವಸ್ಥೆ ಇಲ್ಲ, ಪ್ರತಿ ವರ್ಷವೂ ನಗರ ರಸ್ತೆ, ವಾರ್ಡ್‌ಗಳಲ್ಲಿ ಸುಧಾರಣೆ ಹೆಸರಲ್ಲಿ ಲಕ್ಷಾಂತರ ರೂಪಾಯಿ ಖರ್ಚಾಗಿರುತ್ತದೆ. ಆದರೆ ಆ ರಸ್ತೆಗಳು ಇವತ್ತಿಗೂ ತಗ್ಗು, ದಿನ್ನೆಗಳಿಂದ ತುಂಬಿವೆ. ಕೋಟ್ಯಾಂತರ ರೂಪಾಯಿಯ ಜಲನಿರ್ಮಲ ಯೋಜನೆಗಳು ಕಳಪೆ ಗುಣಮಟ್ಟಕ್ಕೆ ಪ್ರಸಿದ್ಧಿಯಾಗಿವೆ. ಇತ್ತೀಚೆಗೆ ಗೊರೇಬಾಳ ಗ್ರಾಮ ಪಂಚಾಯತಿ ವತಿಯಿಂದ ಗೊರೇಬಾಳದಲ್ಲಿ 'ಶೌಚಾಲಯಕ್ಕಾಗಿ ಸಮರ' ಎಂಬ ಯೋಜನೆಯ ಕುರಿತು ಶಾಲಾಮಕ್ಕಳು ಮತ್ತು ಪಂಚಾಯತಿಯವರು ಜಾಥಾ ಹೊರಟಾಗ ಊರ ಗ್ರಾಮಸ್ಥರು ಇವರನ್ನು ತಡೆದು ನಿಲ್ಲಿಸಿ 'ಒಂದು ವರ್ಷ ಆಯಿತು, ಮೊದಲು ನಾವು ಕಟ್ಟಿಸಿಕೊಂಡ ಶೌಚಾಲಯದ ಹಣ ನೀಡಿರಿ, ಆಮೇಲೆ ಜಾಥಾ ನಡೆಸಿರಿ' ಎಂದು ಹೇಳಿ ಛೀಮಾರಿ ಹಾಕಿದ್ದು ಪತ್ರಿಕೆಗಳಲ್ಲಿ ವರದಿಯಾಯಿತು. ಗೊರೆಬಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಂಚಿನಾಳ ಕ್ಯಾಂಪಿನ ಗ್ರಾಮಸ್ಥರು ಶೌಚಾಲಯ ಕಟ್ಟಿಸಿಕೊಂಡು ಅನೇಕ ತಿಂಗಳುಗಳು ಕಳೆದರೂ ಪಂಚಾಯತಿಯವರು ಹಣ ನೀಡಿಲ್ಲ, ಜಿಲ್ಲಾಧಿಕಾರಿಗಳಿಗೂ, ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಹಾಗೂ ತಾಲೂಕ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಪತ್ರ ಬರೆದು ಅನೇಕ ದಿವಸ ಕಳೆದರೂ ಇದುವರೆಗೂ ಕ್ರಮ ಕೈಗೊಂಡಿಲ್ಲ. ಇಂತಹ ಅನೇಕ ಘಟನೆಗಳು ಹೇರಳವಾಗಿ ಸಿಗುತ್ತವೆ. ಜನಪ್ರತಿನಿಧಿಗಳಾದವರಿಗೆ ಜನರು ಏನನ್ನುತ್ತಾರೋ ಎಂಬ ಭಯವಿಲ್ಲ. ನಾಚಿಕೆ, ಮಾನ, ಮರ್ಯಾದೆ ಯಂತೂ ಅವರ ಅಂತರಾಳದಿಂದ ದೂರವಾದಂತಿದೆ. ಸಂಘಟನೆಗಳು ಮತ್ತು ಒಕ್ಕೂಟಗಳು ಪುನರ್ ನಿರ್ಮಾಣವಾಗಬೇಕಿದೆ. ಜನಾಂದೋಲನವನ್ನು ಇವತ್ತಿನ ಸಂದರ್ಭ ದಲ್ಲಿ ಸಶಕ್ತವಾಗಿ ಕಟ್ಟಬೇಕಾದ ಅನಿವಾ ರ್ಯತೆ ಇದೆ. ತಪ್ಪಿತಸ್ಥ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ಆ ಶಿಕ್ಷೆ ಅಧಿಕಾರಿಗಳನ್ನು, ಜನಪ್ರತಿನಿಧಿಗಳನ್ನು ಬೆಚ್ಚಿ ಬೀಳಿಸಬೇಕು. ಹಾಗಾದಾಗ ಒಂದಿಷ್ಟು ಸುಧಾರಣೆಯಾದೀತು.

- ಡಾ.ಬಸವರಾಜ ಬಳಿಗಾರ, ಸಿಂಧನೂರು



ಎಲ್ಲೂ ಕಾಣಸಿಗದ ಇಂತಹ ಕುತಂತ್ರಿ



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್
nvasanth1@hotmail.com

ಎಲ್ಲಾ ಉಷ್ಣವಲಯದ ಕಾಡುಗಳಲ್ಲಿ ಚಿರತೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಹುಲಿಗಳು ಉತ್ತರದ ಶೀತಪ್ರದೇಶದಿಂದ ಇಲ್ಲಿಗೆ ವಲಸೆ ಬಂದಿದ್ದರೆ, ಈ ಚಿರತೆಗಳು ಮಾತ್ರ ಭಾರತ ಪರ್ಯಾಯ ದ್ವೀಪದಲ್ಲಿ ಬಹಳ ಪುರಾತನಕಾಲದಿಂದಲೇ ವಾಸಿಸುತ್ತಿವೆ.

ಚಿರತೆಗಳು ಗಾತ್ರದಲ್ಲಿ ಮತ್ತು ಶಕ್ತಿಯಲ್ಲಿ ಹುಲಿಗಳಿಗಿಂತ ಕಡಿಮೆ ಇದ್ದು ಮನುಷ್ಯರನ್ನು ಕಂಡರೆ ಭಯಪಡುತ್ತವೆ. ಹಾಗಾಗಿ ಸಾಕಷ್ಟು ಎಚ್ಚರ ವಹಿಸದೆ ಇವುಗಳನ್ನು ಕಡೆಗಣಿಸಲಾಗುತ್ತದೆ. ಇದರಿಂದಾಗಿ ನುರಿತ ಹುಲಿ ಬೇಟೆಗಾರರು ಕೂಡ ಎಷ್ಟೋ ಬಾರಿ ಚಿರತೆಯಿಂದ ಗಾಯಗೊಂಡಿದ್ದಾರೆ ಅಥವಾ ಸಾವನ್ನಪ್ಪಿದ್ದಾರೆ. ಮನುಷ್ಯರ ಮೇಲೆ ಆಕ್ರಮಣ ಮಾಡಿದಾಗ ಕೂಡ ಚಿರತೆಗಳು ನೇರವಾಗಿ ಅವರನ್ನು ಕೊಲ್ಲದೆ, ಹಲ್ಲುಗಳಿಂದ ಕಚ್ಚುತ್ತದೆ ಮತ್ತು ತಮ್ಮ ಚಿಕ್ಕದಾದರೂ ಚೂಪಾಗಿರುವ ಉಗುರುಗಳಿಂದ ಪರಚುತ್ತದೆ. ಆದ್ದರಿಂದ ಆ ವ್ಯಕ್ತಿ ಬದುಕಿ ಉಳಿಯುವ ಸಾಧ್ಯತೆಗಳಿರುತ್ತವೆ. ಆದರೆ ಹುಲಿಯ ಆಕ್ರಮಣಕ್ಕೊಳಗಾದ ಮನುಷ್ಯರು ತಮ್ಮ ಕಥೆ ಹೇಳಲು ಬದುಕಿ ಉಳಿದಿರುವುದು ತೀರಾ ಅಪರೂಪ..

ಈಗ ನಾನು ಹೇಳಲಿರುವ ಕಥೆಯ ನಾಯಕನಾದ ಚಿರತೆ ಮೇಲಿನ ಸಾಮಾನ್ಯ ನಿಯಮಕ್ಕೆ ಅಪವಾದವಾದ ನರಭಕ್ಷಕನಾಗಿತ್ತು, ಇಂತಹ ಚಿರತೆಗಳ ಉದಾಹರಣೆಗಳು ಬಹಳ ಕಡಿಮೆ ಇದ್ದರೂ ಹುಲಿಯ ಕಿರಿಯ ಸೋದರ ಸಂಬಂಧಿಗಳಾದ ಇವು ಮನುಷ್ಯರಿಗೆ ಹುಲಿಗಳಷ್ಟೇ ಅಪಾಯಕಾರಿಯಾಗಬಲ್ಲದು ಎಂಬುದು ನಿಶ್ಚಿತ. ಆಕಾರದಲ್ಲಿ ಚಿಕ್ಕದಾಗಿರುವ ಇವು ಹುಲಿಗಳು ಹೋಗಲು ಸಾಧ್ಯವಾಗದ ಸಣ್ಣ ಜಾಗಗಳಲ್ಲಿ ಅಡಗಿಕೊಳ್ಳಬಲ್ಲವು. ಜೊತೆಗೆ ಚಿರತೆಗಳ ನೀರಿನ ಅಗತ್ಯ ಕಡಿಮೆ ಮತ್ತು ಇವು ಹುಲಿಗಿಂತ ಹೆಚ್ಚು ಕುತಂತ್ರಿಗಳು. ಅಪಾಯ ಎದುರಾದಾಗ ತಮ್ಮನ್ನು ರಕ್ಷಿಸಿಕೊಳ್ಳಲು ಆ ಸ್ಥಳದಿಂದ ಕದ್ದು ಮಾಯವಾಗುವ ಯುಕ್ತಿಯಲ್ಲಿ ಚಿರತೆಗಳಿಗೆ ಮಿಗಿಲಿಲ್ಲ.

ಇಂತಹ ಒಂದು ಚಿರತೆ ಗುಮ್ಮಲಾಪುರದಲ್ಲಿ ನರಭಕ್ಷಕನಾಗಿ ದಾಂಧಲೆ ಎಬ್ಬಿಸಿತ್ತು, ಸುಮಾರು 42 ಜನರನ್ನು ಬಲಿತೆಗೆದುಕೊಂಡು ದಾಖಲೆ ನಿರ್ಮಿಸಿದ್ದ ಈ ಚಿರತೆ ಮನುಷ್ಯನ ಬುದ್ಧಿಗೆ ಮೀರಿದ ತಂತ್ರಗಳನ್ನು ರೂಪಿಸುವುದಕ್ಕೆ ಹೆಸರಾಗಿತ್ತು. ಈ ಚಿರತೆಯ ಬಗೆಗೆ ಕೆಲವು ನಂಬಲಸಾಧ್ಯವಾದ ವಿಚಿತ್ರ ಭಯಾನಕ ಕಥೆಗಳು ಪ್ರಚಲಿತವಿದ್ದು ಇದರ ಕಾರ್ಯಕ್ಷೇತ್ರವಾಗಿದ್ದ ಸುಮಾರು 250 ಚದುರ ಕಿಲೋಮೀಟರ್ ವಿಸ್ತೀರ್ಣದ ಪ್ರದೇಶದ ಜನರ ಮೇಲೆ ಇದು ಭಯಾಶ್ಚರ್ಯಗಳ ಪ್ರಶ್ನಾತೀತ ಹಿಡಿತವನ್ನು ಸಾಧಿಸಿತ್ತು.

ಈ ಪ್ರದೇಶದ ಜನಗಳೆಲ್ಲಾ ಕತ್ತಲಾಗುವುದರೊಳಗೆ ತಮ್ಮ ಮನೆಬಾಗಿಲುಗಳನ್ನು ಮುಚ್ಚಿ, ಅದಕ್ಕೆ ಕಲ್ಲುಪೆಟ್ಟಿಗೆ ಮುಂತಾದವುಗಳ ತಡೆಯನ್ನು ಇಟ್ಟು, ಭದ್ರಪಡಿಸುತ್ತಿದ್ದರು. ಈ ಭಯಭೀತ ಜನಗಳು ಮರುದಿನ ಬೆಳಗ್ಗೆ ಸೂರ್ಯ ಮೇಲೇರುವವರೆಗೆ ಮನೆಯಿಂದ ಹೊರಬರುತ್ತಿರಲಿಲ್ಲ, ಇದರಿಂದಾಗಿ ಶೌಚಾಲಯಗಳೇ ಇಲ್ಲದಿದ್ದ ಈ ಮನೆಗಳ ಸುತ್ತಮುತ್ತ ಗಬ್ಬು ನಾರತೊಡಗಿತು.

ಹೀಗೆ ತನ್ನ ಆಹಾರವಾದ ನರಮಾಂಸ ಸಿಗುವುದು ಹೆಚ್ಚು ಕಷ್ಟವಾಗುತ್ತಿದ್ದಂತೆ ಈ ಚಿರತೆಯ ಧೈರ್ಯವೂ ಹೆಚ್ಚತೊಡಗಿತು. ಎರಡು ಕಡೆಗಳಲ್ಲಂತೂ ಈ ಚಿರತೆ ದಬ್ಬೆ ಸೋಗೆಗಳಿಂದ ನಿರ್ಮಿಸಲಾಗಿದ್ದ ಚಿಕ್ಕ ಗುಡಿಸಲುಗಳ ಗೋಡೆಯನ್ನೇ ಮುರಿದು ಒಳಗೆ ನುಗ್ಗಿ ಚೀರಾಡುತ್ತಿದ್ದ ತನ್ನ ಬಲಿಯನ್ನು ಎಳೆದುಕೊಂಡು ಹೋಗಿತ್ತು, ಇವರ ನರಳಾಟವನ್ನು ಮುಚ್ಚಿದ ಬಾಗಿಲುಗಳ ಹಿಂದಿನಿಂದ ನಡುಗುತ್ತಾ ಕೇಳುತ್ತಿದ್ದ ಹಳ್ಳಿಯ ಜನ ಎಚ್ಚರವಿದ್ದರೂ ಏನೂ ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿ ಇರುತ್ತಿದ್ದರು. ಒಮ್ಮೆಯಂತೂ ಗೋಡೆಯ ಹಿಂದೆ ದಪ್ಪವಾದ ಮರದ ದಿಮ್ಮಿಗಳನ್ನಿಟ್ಟಿದ್ದರಿಂದ ಚಿರತೆ ಹುಲ್ಲಿನ ಮಾಡಿನ ಮೂಲಕವೇ ಆಕ್ರಮಣ ಮಾಡಿತ್ತು, ಆದರೆ ತನ್ನ ಬಲಿಯನ್ನು ಮತ್ತೆ ಮಾಡಿನ ಮೂಲಕ ಹೊತ್ತೊಯ್ಯಲಾಗದೆ ಕೋಪದಲ್ಲಿ ಗಂಡಹೆಂಡತಿ ಮತ್ತು ಇಬ್ಬರು ಮಕ್ಕಳಿದ್ದ ಆ ಕುಟುಂಬದ ಎಲ್ಲಾ ನಾಲ್ಕು ಜನರನ್ನೂ ಕೊಂದು ಹೊರಹೋಗಿತ್ತು, ಹಗಲಿನಲ್ಲಿ ಗ್ರಾಮಸ್ಥರು ಸ್ವಲ್ಪ ಭಯಮುಕ್ತರಾಗಿದ್ದರೂ ದೊಡ್ಡ ಗುಂಪುಗಳಲ್ಲಿ ಆಯುಧಗಳನ್ನಿಟ್ಟುಕೊಂಡು ಓಡಾಡುತ್ತಿದ್ದರು. ಚಿರತೆ ಗ್ರಾಮದ ಸುತ್ತಮುತ್ತ ಹಗಲಿನಲ್ಲಿ ಕಾಣಿಸಿಕೊಂಡಿದ್ದರೂ ಮನುಷ್ಯರ ಮೇಲೆ ಆಕ್ರಮಣ ಮಾಡಿದ ಘಟನೆಗಳು ಇಲ್ಲಿಯವರೆಗೆ ವರದಿಯಾಗಿರಲಿಲ್ಲ.

ಇಲ್ಲಿನ ಜಿಲ್ಲಾಧಿಕಾರಿಯಾಗಿದ್ದ ಜೋಸೆಫ್ ಎನ್ನುವವರ ಆಹ್ವಾನದ ಮೇರೆಗೆ ನಾನು ಗುಮ್ಮಲಾಪುರಕ್ಕೆ ಬಂದ ಸಂದರ್ಭದಲ್ಲಿ ಪರಿಸ್ಥಿತಿ ಮೇಲಿನಂತೆ ಇತ್ತು, ಇಲ್ಲಿನ ಜನರ ಜೊತೆ ಮಾತನಾಡಿದಾಗ ಅವರು ಈ ಸೈತಾನನಿಂದ ಬಿಡುಗಡೆ ಹೊಂದುವ ಎಲ್ಲಾ ಆಸೆಯನ್ನೂ ಕಳೆದುಕೊಂಡು ತೀವ್ರ ನಿರಾಶೆಯಲ್ಲಿದ್ದರು. ಇಲ್ಲಿಂದ ದೂರ ಓಡಿಹೋಗದಿದ್ದರೆ ಈ ಚಿರತೆಗೆ ಬಲಿಯಾಗುವುದು ತಮ್ಮ ಹಣೆಬರಹದಲ್ಲಿದೆ ಎಂದು ನಂಬಿಕೊಂಡಿದ್ದರು.

ಇಲ್ಲಿನ ಜನರಿಂದ ಯಾವುದೇ ಸಹಕಾರ ಸಿಗುವುದು ಸಾಧ್ಯವಿಲ್ಲ ಎನ್ನುವುದು ನನಗೆ ಕೂಡಲೇ ಅರಿವಾಯಿತು. ನನಗೆ ಸಹಾಯ ಮಾಡಿದರೆ ಈ ಸೈತಾನನಿಗೆ ಆ ವಿಚಾರ ತಿಳಿದು ಅದು ತಮ್ಮನ್ನು ಕೊಲ್ಲುತ್ತದೆ ಎಂದು ಅವರು ನಂಬಿದ್ದರು.

ಚಿರತೆಯ ಕಿವಿಗೆ ತಮ್ಮ ಮಾತುಗಳು ಬಿದ್ದರೆ ತಮಗೆ ಅಪಾಯ ಕಟ್ಟಿಟ್ಟಬುತ್ತಿ ಎನ್ನುವ ಭಯದಲ್ಲಿ ಅವರು ಅದರ ಬಗೆಗೆ ಜೋರಾಗಿ ಮಾತನಾಡಲೂ ಹೆದರುತ್ತಿದ್ದರು.


ಹುಚ್ಚನಂತೆ ರಾತ್ರಿಯ ಅಲೆತ

ಆ ಊರಿನಲ್ಲಿ ಹನ್ನೆರಡು ಅಡಿ ಎತ್ತರದ ಗೋಡೆಯಿದ್ದ ಒಂದೇ ಮನೆಯ ಹೊರಗೆ ನಾನು ಆ ರಾತ್ರಿ ಗೋಡೆಗೆ ಬೆನ್ನುಮಾಡಿ ಕುರ್ಚಿಯನ್ನು ಹಾಕಿಕೊಂಡು ಕುಳಿತೆ. ಚಿರತೆ ಹಿಂದಿನಿಂದ ಬಂದು ಮಾಡಿನ ಮೂಲಕ ನನ್ನ ಮೇಲೆ ಆಕ್ರಮಣ ಮಾಡಲಾಗದಂತೆ ಮಾಡಿಗೆ ದಪ್ಪವಾದ ಮುಳ್ಳುಗಳ ಹೊದಿಕೆ ಹಾಸುವ ವ್ಯವಸ್ಥೆ ಮಾಡಿದ್ದೆ. ಅದು ಚಂದ್ರನಿಲ್ಲದ ರಾತ್ರಿಯಾಗಿದ್ದರೂ, ಶುಭ್ರವಾದ ಆಕಾಶದಿಂದ ಬರುತ್ತಿದ್ದ ನಕ್ಷತ್ರಗಳ ಬೆಳಕು ಚಿರತೆಯ ಆಗಮನವನ್ನು ನನಗೆ ತೋರಿಸಲು ಸಾಕಾಗುವಷ್ಟಿತ್ತು.

ಸಂಜೆ ಆರು ಗಂಟೆಯಾಗುವಷ್ಟರಲ್ಲಿ ಊರಿನ ಜನರೆಲ್ಲಾ ಮನೆಯೊಳಗೆ ಸೇರಿಕೊಂಡು ಬಾಗಿಲನ್ನು ಭದ್ರಪಡಿಸಿಕೊಂಡರು. ನಾನೊಬ್ಬನೇ ಏಕಾಂಗಿಯಾಗಿ ಕುರ್ಚಿಯಲ್ಲಿ ಲೋಡ್ ಮಾಡಿದ ಬಂದೂಕನ್ನು ತೊಡೆಯ ಮೇಲಿಟ್ಟುಕೊಂಡು ಕುಳಿತುಕೊಂಡೆ. ಜೊತೆಗೆ ಬಿಸಿಯಾದ ಚಹಾ, ನೀರು, ಬಿಸ್ಕಿಟ್‌ಗಳು, ಟಾರ್ಚ್ ಮತ್ತು ಒಂದು ಕಂಬಳಿಯನ್ನೂ ಇಟ್ಟುಕೊಂಡಿದ್ದೆ. ಮರುದಿನ ಬೆಳಗಾಗುವವರೆಗೆ ನನ್ನನ್ನು ಎಚ್ಚರವಾಗಿಡಲು ಅಗತ್ಯವಾಗಿದ್ದ ನನ್ನ ಹೊಗೆಸೊಪ್ಪಿನ ಪೈಪ್ ಮತ್ತು ಬೆಂಕಿಪೊಟ್ಟಣವನ್ನೂ ಇಟ್ಟುಕೊಂಡಿದ್ದೆ.

ಸೂರ್ಯ ಮುಳುಗುತ್ತಿದ್ದಂತೆ ನನಗೆ ಒಂದು ರೀತಿಯ ಆತಂಕದ ಕ್ಷಣಗಳು ಶುರುವಾದವು. ಏಕೆಂದರೆ ನಕ್ಷತ್ರಗಳು ಸುತ್ತಲೂ ಪ್ರಕಾಶ ಚೆಲ್ಲುವಷ್ಟು ಪ್ರಖರವಾಗಿ ಇನ್ನೂ ಬೆಳಗುತ್ತಿರಲಿಲ್ಲ. ಪಶ್ಚಿಮ ದಿಕ್ಕಿನಲ್ಲಿದ್ದ ಬೆಟ್ಟಗಳು ಆಗಷ್ಟೇ ಮುಳುಗಿದ ಸೂರ್ಯನ ಕಿರಣಗಳಿಂದ ಬರಬಹುದಾದ ಪ್ರತಿಫಲಿತ ಬೆಳಕಿಗೆ ತಡೆಹಾಕಿದ್ದವು.

ಬಂದೂಕನ್ನು ಗಟ್ಟಿಯಾಗಿ ಹಿಡಿದು ನಾನು ರಸ್ತೆಯ ಎರಡು ತುದಿಗಳವರೆಗೆ



ಮತ್ತು ಸುತ್ತಮುತ್ತಲೂ ನೋಡುತ್ತಲೇ ಇದ್ದೆ. ಇಂತಹ ಸಂದರ್ಭದಲ್ಲಿ ಕಾಡಿನಲ್ಲಿರುವುದು ಹೆಚ್ಚು ಸುರಕ್ಷಿತವಾಗಿತ್ತು ಏಕೆಂದರೆ ಅಲ್ಲಿನ ಪ್ರಾಣಿಪಕ್ಷಿಗಳು ಚಿರತೆಯ ಆಗಮನದ ಮುನ್ಸೂಚನೆ ನೀಡುತ್ತಿದ್ದವು. ಆದರೆ ಇಲ್ಲಿ ಮಾತ್ರ ಎಲ್ಲವೂ ಮೌನವಾಗಿತ್ತು, ಊರಿನ ಜನಗಳೂ ತಮ್ಮ ಮನೆಯ ಮುಚ್ಚಿದ ಬಾಗಿಲುಗಳ ಹಿಂದಿನಿಂದ ಚಿರತೆಗೆ ಇನ್ನೊಂದು ಬಲಿಯಾಗುವಾಗಿನ ನನ್ನ ನೋವಿನ ಕೂಗನ್ನು ನಿರೀಕ್ಷಿಸುತ್ತಾ ಇದ್ದಂತೆ ಅನ್ನಿಸಿತು!

ಸಮಯ ಸರಿಯುತ್ತಾ ಬಂದಂತೆ ನಕ್ಷತ್ರಗಳು ಒಂದೊಂದಾಗಿ ಗೋಚರಿಸುತ್ತಾ ಹಳ್ಳಿಯ ರಸ್ತೆಗಳು ಅಸ್ಪಷ್ಟವಾಗಿ ಕಾಣತೊಡಗಿದವು. ನಾನು ಆಗಾಗ ಕೆಮ್ಮುತ್ತಾ ಚಿರತೆಯ ಗಮನ ಸೆಳೆಯಲು ಯತ್ನಿಸುತ್ತಿದ್ದೆ. ಕೊನೆಗೆ ಅದು ಬೇಗನೆ ಬರುವಂತೆ ಮಾಡಲು ಒಬ್ಬನೇ ದೊಡ್ಡದಾಗಿ ಮಾತನಾಡತೊಡಗಿದೆ!

ನರಭಕ್ಷಕ ಚಿರತೆಯ ಗಮನ ಸೆಳೆಯಲು ಅಥವಾ ಇನ್ನಾವುದಾದರೂ ಕಾರಣಕ್ಕಾಗಿ ನಿಮ್ಮಲ್ಲಿ ಯಾರಾದರೂ ಒಬ್ಬರೇ ದೊಡ್ಡದಾಗಿ ಮಾತನಾಡಿಕೊಳ್ಳಲು ಪ್ರಯತ್ನಿಸಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ, ಆದರೆ ಹಾಗೆ ಮಾಡುವ ವ್ಯಕ್ತಿ ಯಾವ ಹೆಸರಿನಿಂದ ಕರೆಯಲ್ಪಡುತ್ತಾನೆ ಎನ್ನುವುದು ಎಲ್ಲರಿಗೂ ತಿಳಿದಿದೆ. ಆ ದಿನ ಮುಚ್ಚಿದ ಬಾಗಿಲಿನ ಹಿಂದಿನಿಂದ ನನ್ನ ಮಾತುಗಳನ್ನು ಕೇಳಿದ ಹಳ್ಳಿಯ ಜನ ನನಗೆ ಅದೇ ಹೆಸರನ್ನು ಇಟ್ಟಿದ್ದರು ಎಂದು ನನಗೆ ಖಾತ್ರಿಯಾಗಿತ್ತು. ಸದ್ದು ಮಾಡದೆ ಹತ್ತಿರ ಬರುವ ಚಿರತೆಯ ಬಗೆಗೆ ಸಂಪೂರ್ಣ ಗಮನವಿಟ್ಟುಕೊಂಡು ಗಂಟೆಗಟ್ಟಲೆ ಒಬ್ಬನೇ ಗಟ್ಟಿಯಾಗಿ ಮಾತನಾಡಿಕೊಳ್ಳುವುದು ಮಾತ್ರ ಸುಲುಭದ ಕೆಲಸವಾಗಿರಲಿಲ್ಲ!

ಸುಮಾರು ರಾತ್ರಿ ಒಂಭತ್ತು ಗಂಟೆಯ ಹೊತ್ತಿಗೆ ನಾನು ಸುಸ್ತಾಗಿ ಹೋದೆ. ಸ್ವಲ್ಪ ಯೋಚನೆ ಮಾಡಿದ ನಂತರ ನಾನು ಹಳ್ಳಿಯ ರಸ್ತೆಗಳ ಮೇಲೆ ಒಬ್ಬನೇ ಮಾತನಾಡಿಕೊಳ್ಳುತ್ತಾ ನಡೆದುಕೊಂಡು ಹೋಗಲು ನಿರ್ಧರಿಸಿದೆ. ಆಗಾಗ ಹಿಂದೆ ನೋಡುತ್ತಾ ಒಂದೊಂದೇ ರಸ್ತೆಯಲ್ಲಿ ನಡೆಯತೊಡಗಿದೆ. ಚಿರತೆ ಯಾವ ಕಡೆಯಿಂದಲಾದರೂ ಆಕ್ರಮಣ ಮಾಡಬಹುದಾದ್ದರಿಂದ ಹೀಗೆ ರಸ್ತೆಯಲ್ಲಿ ಓಡಾಡುವ ಮೂಲಕ ನನ್ನನ್ನು ತೀವ್ರ ಅಪಾಯಕ್ಕೆ ಒಡ್ಡಿಕೊಳ್ಳುತ್ತಿರುವುದರ ಅರಿವಾಯಿತು. ಹಾಗಾಗಿ ತಕ್ಷಣ ನನ್ನ ಮಾತನ್ನು ನಿಲ್ಲಿಸಿ ಅಲ್ಲಿಯವರೆಗೆ ಸುರಕ್ಷಿತವಾಗಿದ್ದುದಕ್ಕೆ ನನ್ನ ಅದೃಷ್ಟಕ್ಕೆ ವಂದಿಸುತ್ತಾ ನನ್ನ ಕುರ್ಚಿಗೆ ಹಿಂತಿರುಗಿದೆ.

ಸಮಯ ನಿಧಾನವಾಗಿ ಮತ್ತು ಏಕತಾನತೆಯಿಂದ ಸರಿಯುತ್ತಿತ್ತು, ಪಕ್ಕದಲ್ಲಿದ್ದ ಬೆಟ್ಟಗಳ ಆಚೆಯ ಕಾಡಿನಿಂದ ತಣ್ಣನೆಯ ಗಾಳಿ ಬೀಸಲು ಪ್ರಾರಂಭವಾದ್ದರಿಂದ ಮಧ್ಯರಾತ್ರಿಯ ಹೊತ್ತಿಗೆ ಚಳಿಯಾಗತೊಡಗಿತು. ನಾನು ಕಂಬಳಿಯನ್ನು ಹೊ[...] ತಂಬಾಕನ್ನು ಹೆಚ್ಚಾಗಿಯೇ ಸೇವಿಸತೊಡಗಿದೆ. ರಾತ್ರಿ ಎರಡು ಗಂಟೆಯ ಹೊ[...] ನಿದ್ದೆ ಬರತೊಡಗಿತು. ಬಿಸ್ಕಿಟ್ ಮತ್ತು ಬಿಸಿಯಾದ ಚಹಾ ಸೇವಿಸಿ, ಮು[...] ತಣ್ಣೀರೆರಚಿಕೊಂಡು, ಕುರ್ಚಿಯಿಂದ 5-6 ಬಾರಿ ಎದ್ದು ಕುಳಿತು ನಿದ್ದೆಯಿ[...] ಬಿಡುಗಡೆ ಹೊಂದಿದೆ. ಎಚ್ಚರವಾಗಿಯೇ ಇರಲು ಮತ್ತೆ ಒಬ್[...] ಮಾತನಾಡತೊಡಗಿದೆ.

3.30 ಗಂಟೆಗೆ ನಡೆದ ಒಂದು ಘಟನೆ ನನಗೆ ಮುಂದಿನ ಎ[...] ತಾಸುಗಳವರೆಗೆ ವರ್ಣಿಸಲಾಗದ ಹಿಂಸೆಯನ್ನು ನೀಡಿತು. ಜೋರಾಗಿ ಬೀಸು[...] ಗಾಳಿ ಹೊತ್ತು ತಂದ ಮೋಡಗಳು ಆಕಾಶವನ್ನು ಆವರಿಸಿ ನಕ್ಷತ್ರಗ[...] ಮರೆಯಾಗಿಸಿತು. ಕತ್ತಲು ತೀರಾ ಗಾಢವಾಗಿ ಚಿರತೆಯನ್ನು ಒಂದು [...] ಹತ್ತಿರದಿಂದ ಕೂಡ ನೋಡಲು ಸಾಧ್ಯವಿರಲಿಲ್ಲ, ನಾನು ಬಹಳ ಇಕ್ಕಟ್ಟಿ[...] ಸಿಲುಕಿಕೊಂಡಿದ್ದೆ. ಆಗ ಚಿರತೆ ಆಕ್ರಮಣ ಮಾಡಿದ್ದರೆ ಸುಲಭವಾಗಿ ನ[...] ಅದಕ್ಕೆ ಬಲಿಯಾಗುತ್ತಿದ್ದೆ. ಪ್ರತಿಅರ್ಧ ನಿಮಿಷಕ್ಕೊಮ್ಮೆ ನನ್ನ ಟಾರ್ಚ್‌ನ ಬೆಳ[...] ರಸ್ತೆಯ ಎರಡೂ ತುದಿಗಳವರೆಗೂ ಹಾಯಿಸಲು ಶುರಮಾಡಿದೆ. ಇದರ[...] ಹತ್ತಿರದಲ್ಲಿ ಎಲ್ಲಾದರೂ ಇರಬಹುದಾದ ಚಿರತೆಯನ್ನು ಹೆದರಿಸಿ ನನ್ನ [...] ಉಳಿಸಿಕೊಳ್ಳಬಹುದಿತ್ತು, ಆದರೆ ಹೀಗೆ ಮಾಡುವುದರಿಂದ ಅದ[...] ಬೇಟೆಯಾಡುವ ಸಾಧ್ಯತೆಗಳು ಮಾತ್ರ ಸಂಪೂರ್ಣ ನಶಿಸಿಹೋಗುತ್ತಿತ್ತು, ಇ[...] ಮೇಲೂ ಚಿರತೆ ಆಗಮಿಸಿದ್ದರೆ ಅದು ನನ್ನ ಕಣ್ಣಿಗೆ ಬಿದ್ದು ಬಂದೂ[...] ಚಲಾಯಿಸಬಹುದಿತ್ತು. ಆದರೆ ಹಾಗೇನೂ ನಡೆಯದೆ ಬೆಳಗಾಗುವವರ[...] ನಾನು ಟಾರ್ಚ್‌ನಿಂದ ಬೆಳಕನ್ನು ಬಿಡುತ್ತಲೇ ಕಳೆದೆ.

ಒಂದು ರಾತ್ರಿಯ ನಿರರ್ಥಕ ಶ್ರಮದ ನಂತರ ನಾನು ಕೆಲವು ಗಂಟೆ[...] ನಿದ್ದೆ ಮಾಡಿ ಮತ್ತೆ ಹಳ್ಳಿಯವರಲ್ಲಿ ವಿಷಯ ಸಂಗ್ರಹಣೆಗೆ ತೊಡಗಿದೆ. ನ[...] ರಾತ್ರಿಯೆಲ್ಲಾ ಒಬ್ಬನೇ ಮಾತನಾಡುತ್ತಾ ಊರೆಲ್ಲಾ ಅಲೆದಾಡುತ್ತಿದ್ದುದರ[...] ಅವರೆಲ್ಲಾ ಭೂತಪ್ರೇತಗಳ ಜೊತೆ ಮಾತನಾಡುವ ವಿಶೇಷ ಶಕ್ತಿ ನನ[...] ಅಂದುಕೊಂಡಿರಬೇಕು. ಹಾಗಾಗಿ ಹಳ್ಳಿಯ ಜನ ಹೆಚ್ಚು ಮುಕ್ತವಾಗಿ ಚಿರ[...] ಬಗೆಗಿನ ಮಾಹಿತಿಯನ್ನು ಹಂಚಿಕೊಂಡರು. ಚಿರತೆ ತನ್ನ ಕಾರ್ಯ ಕ್ಷೇ[...] ಯಾವುದೇ ಗೊತ್ತು ಗುರಿಯಿಲ್ಲದೆ ತಿರುಗುತ್ತಾ ಸ್ವೇಚ್ಛೆಯಿಂದ ಮನು[...] ಕೊಲ್ಲುತ್ತಿತ್ತು, ಅದು ಒಂದೇ ಸ್ಥಳದಲ್ಲಿ ನಿರಂತರವಾಗಿ ಎರಡು ಬಲಿ[...] ತೆಗೆದುಕೊಂಡಿರಲಿಲ್ಲ. ಕಳೆದ ಮೂರು ವಾರಗಳಲ್ಲಿ ಗುಮ್ಮಲಾಪುರದಲ್ಲಿ ಯಾ[...] ನರಬಲಿಯಾಗಿರಲಿಲ್ಲ. ಹಾಗಾಗಿ ಸುಮ್ಮನೇ ಚಿರತೆಯನ್ನು ಹುಡುಕಾಡುವು[...] ಇಲ್ಲಿಯೇ ನಾನು ಉಳಿಯುವುದು ಹೆಚ್ಚು ಸೂಕ್ತವೆನ್ನಿಸಿತು. ಹುಲಿಗಳಂ[...] ಚಿರತೆ ಹಗಲಿನಲ್ಲಿ ಕಾಣಿಸಿಕೊಳ್ಳುತ್ತಿರಲಿಲ್ಲ, ಹಾಗಾಗಿ ಹಗಲಿನಲ್ಲಿ ಮ[...] ಹುಡುಕಾಟ ಕೂಡ ವ್ಯರ್ಥವಾಗುತ್ತಿತ್ತು. ಈ ಚಿರತೆಯ ಬಲ ಮುಂಗ[...] ಗಾಯವಾಗಿದ್ದರಿಂದ ಅದು ಪಾದಗಳನ್ನು ಸೊಟ್ಟವಾಗಿ ಊರುತ್ತಿತ್ತು [...] ಮಾಹಿತಿ ಕೂಡ ದೊರೆಯಿತು. ಮುಂದೆ ಇದರ ಹೆಜ್ಜೆಗುರುತು[...] ಗುರುತಿಸಿದಾಗ ನನಗೆ ಈ ಅಂಶ ಖಾತ್ರಿಯಾಯಿತು.

ಹೊಸ ಯೋಜನೆ

ಊಟವಾದ ಮೇಲೆ ನಾನು ಹಿಂದಿನ ರಾತ್ರಿಯ ಕಷ್ಟಗ[...] ತಪ್ಪಿಸಿಕೊಳ್ಳಬಹುದಾದ ಹೊಸ ಯೋಜನೆಯೊಂದನ್ನು ರೂಪಿಸಿದೆ. [...] ಗುಡಿಸಲಿನ ಬಾಗಿಲನ್ನು ತೆಗೆದಿರಿಸಿ ಹೊರಗಿನಿಂದ ಕಾಣುವಂತೆ [...] ಮನುಷ್ಯಾಕೃತಿಯನ್ನು ಕೂರಿಸುವುದು. ನಾನು ಆ ಗುಡಿಸಲಿನ ಮೂಲ[...] ಪೆಟ್ಟಿಗೆಗಳ ಹಿಂದೆ ಅವಿತು ಚಿರತೆಗಾಗಿ ಕಾಯುವುದು–ಈ ಯೋಜನೆಯ[...] ಇದರಿಂದ ನಾನು ಸುರಕ್ಷಿತವಾಗಿದ್ದುಕೊಂಡು ಮನುಷ್ಯಾಕೃತಿಯ ಮೇಲೆ[...] ಆಕ್ರಮಣ ಮಾಡಿದಾಗ ಅದನ್ನು ಕೊಲ್ಲಬಹುದಿತ್ತು.

ಗ್ರಾಮಸ್ಥರಿಗೆ ಇದನ್ನು ವಿವರಿಸಿದಾಗ ಅವರು ಉತ್ಸಾಹದಿಂದ ಸಮ್ಮತಿ[...] ಚಿರತೆ ಹಿಂದೆ ಆಕ್ರಮಣ ಮಾಡಿ ನಾಲ್ಕು ಜನರನ್ನು ಕೊಂದಿದ್ದ ಗು[...] ಪಕ್ಕದ ಗುಡಿಸಲನ್ನು ನನಗೆ ಬಿಟ್ಟುಕೊಟ್ಟರು. ಬಿದಿರುಕೋಲುಗಳು [...] ಹಳೆಯ ದಿಂಬಿನಿಂದ ಮಾಡಿದ ಮನುಷ್ಯಾಕೃತಿಗೆ ಸೀರೆ ಉಡಿಸಿ ಗು[...] ಅರ್ಧತೆರೆದ ಬಾಗಿಲಿನಿಂದ ಕಾಣುವಂತೆ ಕೂರಿಸಲಾಯಿತು. ಸುಮಾರು 1[...] ಅಡಿ ಅಳತೆಯಿದ್ದ ಆ ಗುಡಿಸಲಿನ ಮೂಲೆಯಲ್ಲಿ ನಾನು ಪೆಟ್ಟಿಗೆಗಳ [...] ಕುಳಿತುಕೊಳ್ಳಲು ವ್ಯವಸ್ಥೆ ಮಾಡಿಕೊಂಡೆ. ಚಿರತೆ ಬಾಗಿಲಿನಲ್ಲಿ ಕಾಣಿಸಿದ[...] ನನಗೆ ಗುಂಡು ಹಾರಿಸುವುದು ಸುಲುಭವಾಗಿತ್ತು, ಹಾಗೊಮ್ಮೆ ಅದು [...] ಮೂಲಕ ಅಥವಾ ದಬ್ಬೆಯ ಗೋಡೆಗಳ ಮೂಲಕ ಒಳಬಂದಿದ್ದರೂ [...] ಸಾಕಷ್ಟು ಸಮಯಾವಕಾಶವಿರುತ್ತಿತ್ತು, ಹತ್ತಿರದ ಗುಡಿಸಲಿನ ಹೆಣ್ಣು[...]

...ಮನ್ನು ಆಕರ್ಷಿಸಲು ಅನುಕೂಲವಾಗುಂತೆ ರಾತ್ರಿ ಬಹಳ ಹೊತ್ತಿನವರೆಗೆ ...ನಾಡುತ್ತಲೇ ಇರಲು ಹೇಳಿದೆ. ಒಂದು ವೇಳೆ ಚಿರತೆ ಅವರ ಗುಡಿಸಲಿಗೇ ...ರೆ ನನಗೆ ಸೂಚನೆ ನೀಡಿದ ತಕ್ಷಣ ಅವರ ರಕ್ಷಣೆಗೆ ಬರುವುದಾಗಿ ...ಸನೆ ನೀಡಿದೆ.

...ರು ಗಂಟೆಯ ಹೊತ್ತಿಗೆ ಎಲ್ಲವೂ ಸಿದ್ಧವಾಗಿ ನಾನು ನನ್ನ ಸ್ಥಾನದಲ್ಲಿ ...ಕೊಂಡೆ. ನಾನಿದ್ದ ಗುಡಿಸಲು ಹೊರತಾಗಿ ಉಳಿದೆಲ್ಲದರ ಬಾಗಿಲುಗಳು ...ಾಗಿ ಮುಚ್ಚಿಕೊಂಡವು. ಸ್ವಲ್ಪ ಸಮಯದಲ್ಲಿ ಸಂಜೆಗತ್ತಲಿನ ನಂತರ ...ಗಳು ಮಿನುಗುತ್ತಾ ಬೆಳಕನ್ನು ಚೆಲ್ಲತೊಡಗಿದವು. ತೆರೆದ ಬಾಗಿಲಿನಿಂದ ...ಪ್ರಾಕೃತಿ ಸ್ಪಷ್ಟವಾಗಿ ಕಾಣುತ್ತಿತ್ತು. ಆಗಾಗ ಪಕ್ಕದ ಗುಡಿಸಲುಗಳಿಂದ ...ನ್ನನಿಯ ಮಾತುಗಳು ಕೇಳುತ್ತಿದ್ದವು.

...ಕತಾನತೆಯಿಂದ ಗಂಟೆಗಳೇ ಕಳೆದವು. ಆಗೊಮ್ಮೆ ಸೋಗೆಯ ಮಾಡಿನಿಂದ ... ಸರಸರ ಶಬ್ದ ಮೌನವನ್ನು ಕಲಕಿ ನನ್ನನ್ನು ಎಚ್ಚರಿಸಿತು. ಮಾಡಿನಲ್ಲಿ ...ತ್ತಾ ದೊಪ್ಪನೆ ಬಿದ್ದು ನನ್ನೆದುರೇ ಪೆಟ್ಟಿಗೆಗಳನ್ನು ಹಾದು ಬಾಗಿಲಿನಿಂದ ...ಹೋದ ಇದು ಒಂದು ಇಲಿಯಾಗಿತ್ತು! ಬೆಳಗಿನ ಜಾವವಾಗುತ್ತಾ ...ತೆ ಪಕ್ಕದ ಗುಡಿಸಲಿನಿಂದ ಮಾತುಗಳು ಕಡಿಮೆಯಾಗುತ್ತಾ ಬಂದು ... ನಿಂತೇ ಹೋಯಿತು. ನರಭಕ್ಷಕ ಚಿರತೆಯ ಭಯವನ್ನು ಮೀರಿ ...ಲ್ಲಾ ನಿದ್ದೆ ಹೋಗಿದ್ದರು.

...ನು ಮಾತ್ರ ಆಗಾಗ ಚಹಾ ಕುಡಿಯುತ್ತಾ ಮತ್ತು ಪೈಪ್ ಸೇದುತ್ತಾ ...ವಾಗಿಯೇ ಇದ್ದೆ. ಎಲ್ಲಾ ಕಡೆ ಓಡಾಡುತ್ತಿದ್ದ-ಕೆಲವೊಮ್ಮೆ ನನ್ನ ಮೈಮೇಲೆ ...ಇಲಿಗಳ ಸದ್ದಿನ ಹೊರತಾಗಿ ಬೆಳಗಾಗುವವರೆಗೆ ಯಾವ ಸದ್ದುಗಳೂ ...ಲ್ಲ. ಮತ್ತೊಂದು ರಾತ್ರಿ ನಿದ್ದೆಗೆಟ್ಟು ಸುಸ್ತಾದ ನಾನು ಮಲಗಿಕೊಂಡೆ.

...ಹಳೆಯ ಯೋಜನೆಯಲ್ಲಿ ಹೊಸ ಅನುಭವ

...ದ್ದೂ ಉತ್ತಮವಾದ ಯೋಜನೆ ಹೊಳೆಯದೆ ಇದ್ದುದರಿಂದ ಮರುದಿನ ...ಅದೇ ಹಳೆಯ ಯೋಜನೆಯನ್ನೇ ಮುಂದುವರೆಸಲು ನಿರ್ಧರಿಸಿದೆ. ಚಿರತೆ ...ಬದುಕಿದ್ದರೆ ಇಂದಾದರೂ ಬರಲೇಬೇಕು ಎನ್ನುವ ಆಶಾಭಾವನೆ ನನಗಿತ್ತು. ... ನನಗೆ ಆದ ಅನುಭವ ಸಾಯುವವರೆಗೂ ನೆನಪಿನಲ್ಲಿ ಉಳಿವಂತಾದ್ದಾಗಿತ್ತು.

...ತ್ರಿಯ ಮೊದಲರ್ಧ ಹಿಂದಿನ ರಾತ್ರಿಯಂತೆಯೇ ಕಳೆಯಿತು. ಮಧ್ಯರಾತ್ರಿ ... ಗಂಟೆಯ ನಂತರ ಜೋರಾಗಿ ಗಾಳಿ ಬೀಸತೊಡಗಿತು. ನಿಧಾನವಾಗಿ ...ಸುಗಾಳಿಗೆ ತಿರುಗಿ ಆಕಾಶ ಮೋಡದಿಂದ ಕವಿಯಿತು. ಆಗ ಗುಡಿಸಲಿನ ... ನನ್ನ ಕಣ್ಣಿಗೆ ಬೀಳುತ್ತಿರಲಿಲ್ಲ. ನಿಧಾನವಾಗಿ ಬೀಳಲು ಶುರುವಾದ ...ಬರುಬರುತ್ತಾ ದೊಡ್ಡ ಮಳೆಯಾಗಿ ಮಾರ್ಪಟ್ಟಿತು. ನೀರಿನ ಬಗೆಗೆ ...ಆಕರ್ಷಣೆ ಇಲ್ಲದ ಚಿರತೆಯಂತಹ ಪ್ರಾಣಿ ಇಂತಹ ಬಿರುಗಾಳಿ ...ಲ್ಲಿ ಹೊರಬರುವುದಿಲ್ಲ, ಹಾಗಾಗಿ ನನ್ನ ಇನ್ನೊಂದು ರಾತ್ರಿಯ ಶ್ರಮ ...ದಂತೆಯೇ-ಎಂದುಕೊಂಡೆ.

...ಸುತ್ತಲಿನ ಗುಡಿಸಲುಗಳಿಂದಲೂ ಜನರ ಮಾತುಗಳು ಕೇಳುತ್ತಿರಲಿಲ್ಲ. ...ತೆರೆದಾಗಿಸಿಕೊಂಡು ಬಾಗಿಲ ಕಡೆ ನೋಡುತ್ತಲೇ ಇದ್ದ ನಾನು ಹಿಂದಿನ ... ರಾತ್ರಿಯಿಡೀ ಎಚ್ಚರವಾಗಿಯೇ ಕಳೆದದ್ದರಿಂದ ನನಗೆ ಗೊತ್ತಿಲ್ಲದೆ ...ಗಿರಬೇಕು.

...ಷ್ಟು ಹೊತ್ತು ಮಲಗಿದ್ದೆ ಎಂದು ಗೊತ್ತಿಲ್ಲ. ಆದರೆ ಎಚ್ಚರವಾದಾಗ ... ಸಾಮಾನ್ಯವಾಗಿಲ್ಲ ಎಂದು ನನಗೆ ಅನ್ನಿಸತೊಡಗಿತು. ನಿದ್ದೆಯಿಂದ ...ಮಾನ್ಯ ಮನುಷ್ಯನೊಬ್ಬ ಸುತ್ತಲಿನ ಪರಿಸರದ ಅರಿವನ್ನು ಮೂಡಿಸಿಕೊಳ್ಳಲು ...ಕ್ಷಣಗಳನ್ನು ತೆಗೆದುಕೊಳ್ಳಬಹುದು. ಆದರೆ ವರ್ಷಾನುಗಟ್ಟಲೆ ಕಾಡಿನ ...ಕಾರಿ ಸ್ಥಳಗಳಲ್ಲಿ ಕಳೆದಿದ್ದ ನನಗೆ ಎಚ್ಚರವಾದ ಕೂಡಲೇ ನಾನಿದ್ದ ...ದ ಅರಿವು ಮೂಡಿತು.

... ಕಡಿಮೆಯಾಗಿ ಆಕಾಶ ಸ್ವಚ್ಛವಾಗಿದ್ದರಿಂದ ನಕ್ಷತ್ರಗಳ ಬೆಳಕಿನಲ್ಲಿ ...ಕೃತಿ ಕಾಣುತ್ತಿತ್ತು. ಆಗ ಒಂದು ವಿಚಿತ್ರ ಘಟನೆ ನಡೆಯಿತು. ನಿಧಾನವಾಗಿ ...ತೆ ಕಂಡ ಆ ಆಕೃತಿ ತಕ್ಷಣ ಬಾಗಿಲಿನಿಂದ ಕಣ್ಮರೆಯಾಯಿತು. ಆದರ ... ಪ್ರಾಣಿಯೊಂದು ಗುಟುರು ಹಾಕಿದ ಶಬ್ದ ಕೇಳಿತು. ಆಗ ಚಿರತೆ ...ವುದು ನನಗೆ ಖಾತ್ರಿಯಾಯಿತು. ನೆಲಕ್ಕೆ ಆತುಕೊಂಡು ಕುಳಿತು ...ಕೃತಿಯನ್ನು ಎಳೆದ್ದರಿಂದ ಅದು ಬಾಗಿಲಿನಲ್ಲಿ ನನ್ನ ಕಣ್ಣಿಗೆ ಬಿದ್ದಿರಲಿಲ್ಲ. ...ಕ್ರಮಣ ಮಾಡಿರುವುದು ಜೀವಂತ ಮಾನವನಲ್ಲ ಎಂದು ಅರಿವಾದ ... ಚಿರತೆ ಸಿಟ್ಟಿನಿಂದ ಗುಟುರು ಹಾಕಿತ್ತು.

... ಟಾರ್ಚ್‌ಅನ್ನು ಬೆಳಗಿಸುತ್ತಾ, ಪೆಟ್ಟಿಗೆಗಳನ್ನು ಹಾರಿಕೊಂಡು ...ಕೃತಿಯನ್ನು ಎಡವುತ್ತಾ ನಾನು ಬಾಗಿಲ ಕಡೆ ಓಡಿದೆ. ಗುಡಿಸಲಿನಿಂದ ...ದು ಬೆಳಕನ್ನು ಎರಡೂ ದಿಕ್ಕುಗಳಲ್ಲಿ ಹಾಯಿಸಿದರೂ ಏನೂ ಕಣ್ಣಿಗೆ ... ಚಿರತೆ ಹತ್ತಿರ ಎಲ್ಲಾದರೂ ಅಡಗಿಕೊಂಡಿರಬಹುದೆಂದು ನಾನು ... ಎಲ್ಲಾ ಕಡೆ ತಿರುಗಿಸುತ್ತಾ ಹಳ್ಳಿಯ ರಸ್ತೆಗಳಲ್ಲಿ ನಡೆಯತೊಡಗಿದೆ. ...ಕು ಉದ್ವೇಗದಿಂದ ನಡುಗುತ್ತಿದ್ದ ನಾನು ಪ್ರತಿಯೊಂದು ಮೂಲೆ, ...ಮತ್ತು ಅಡಗುತಾಣಗಳನ್ನು ಹುಡುಕಿದೆ. ಆದರೆ ಚಿರತೆ ನನ್ನ ದೃಷ್ಟಿಗೆ ...ಲ್ಲ, ಈ ಚಿರತೆ ಭಾರೀ ಕುತಂತ್ರಿ ಎಂದು ಪ್ರಸಿದ್ಧವಾಗಿರುವುದು ಏಕೆ ...ನನಗೆ ಆಗ ಅರಿವಾಯಿತು. ಅಪಾಯದ ಕ್ಷಣದಲ್ಲಿ ನನ್ನನ್ನು ನಿದ್ದೆಯಿಂದ ... ಆರನೇ ಇಂದ್ರಿಯವೇ ಚಿರತೆಯನ್ನೂ ಕೂಡ ಇಲ್ಲಿರುವ ವ್ಯಕ್ತಿ ...ಕಾರಿ ಎಂದು ಎಚ್ಚರಿಸಿರಬೇಕು. ಪ್ರಖರವಾದ ಟಾರ್ಚ್ ಬೆಳಕಿಗೆ ... ಅಥವಾ ಇನ್ಯಾವುದೋ ಕಾರಣಕ್ಕೋ ನನ್ನೆಲ್ಲಾ ಹುಡುಕಾಟವನ್ನು ... ಚಿರತೆ ಬಂದಷ್ಟೇ ನಿಶಬ್ದವಾಗಿ ಕಣ್ಮರೆಯಾಗಿತ್ತು, ನಿದ್ದೆ ಮಾಡಿದ್ದಕ್ಕೆ ...ಮತ್ತು ಬೇಸರವಾಗಿದ್ದರೂ ಹೇಗಾದರೂ ಈ ದುಷ್ಟ ಪ್ರಾಣಿಯನ್ನು ...ಬೇಕು ಎಂದು ನಿರ್ಧರಿಸಿಕೊಂಡೆ.

...ಮರುದಿನ ಬೆಳಗ್ಗೆ ಚಿರತೆ ಹಳ್ಳಿಗೆ ಬಂದ ಮಾರ್ಗದಲ್ಲಿ ಅದರ ...ಗುರುತುಗಳು ಸ್ಪಷ್ಟವಾಗಿ ಕಂಡುಬಂದವು. ಅದರ ಬಲಮುಂಗಾಲು ...ದ ದುರ್ಬಲವಾಗಿರುವುದನ್ನು ಗುರುತಿಸಬಹುದಾಗಿತ್ತು, ಇದೇ ... ಚಿರತೆ ನರಭಕ್ಷಕನಾಗಿರಬೇಕು ಅನ್ನಿಸಿತು. ಮುಂದೆ ಚಿರತೆಯನ್ನು ...ದ ಮೇಲೆ ಅದರ ಗಾಯಗೊಂಡು ಕಾಲನ್ನು ನಾನು ಪರೀಕ್ಷಿ... ಆದರೆ ಅದು ನರಭಕ್ಷಕನಾಗಿ ಪರಿವರ್ತನೆಯಾಗಿರುವುದು ಇದೇ ... ನನ್ನ ಊಹೆ ತಪ್ಪಾಗಿತ್ತು, ಹಿಂದಿನ ವರ್ಷ ಬಂದ ಕಾಲರಾದಿಂದ ...ಗಳನ್ನು ಜನ ಕಾಡಿನಲ್ಲಿ ಹದ್ದಿಗೆ ಆಹಾರವಾಗಿ ಇಡುತ್ತಿದ್ದರು. ಆಗ ...ದ ರುಚಿ ಹತ್ತಿಸಿಕೊಂಡ ಚಿರತೆ ಅದನ್ನೇ ಮುಂದುವರೆಸಿತ್ತು, ಕಾಲಿನ ಗಾಯ ಇತರ ಕಾಡು ಪ್ರಾಣಿಗಳನ್ನು ಬೇಟೆಯಾಡಲು ಅಡ್ಡಬರುತ್ತಿದ್ದುದರಿಂದ ನಿಧಾನವಾಗಿ ಅದು ಪೂರ್ಣ ಪ್ರಮಾಣದ ನರಹಂತಕನಾಗಿ ಮಾರ್ಪಟ್ಟಿತ್ತು.

ಹೊಸ ಊರಿನಲ್ಲಿ ಮತ್ತದೇ ಪ್ರಯತ್ನ

ನನಗೆ ಮನವರಿಕೆಯಾದ ಇನ್ನೊಂದು ಅಂಶವೆಂದರೆ ಈ ಚಿರತೆ ಮಾನವನ ತರ್ಕ ಬುದ್ಧಿಯನ್ನು ಹೊಂದಿದೆ. ಹಾಗಾಗಿ ಹಿಂದಿನ ರಾತ್ರಿ ನಾನು ಅದರಲ್ಲಿ ಹುಟ್ಟಿಸಿದ ಭಯದಿಂದ ಅದು ಗುಮ್ಮಲಾಪುರದ ಕಡೆ ಸದ್ಯಕ್ಕೆ ಸುಳಿಯುವುದಿಲ್ಲ-ಎನ್ನುವುದು. ಆದ್ದರಿಂದ ನಾನು ಅದನ್ನು ಬೇಟೆಯಾಡಲು ಸ್ಥಳವನ್ನು ಬದಲಾಯಿಸಿಕೊಳ್ಳಬೇಕಿತ್ತು, ಆಗ ಇಲ್ಲಿಂದ 18 ಮೈಲು ದೂರದಲ್ಲಿದ್ದ ದೇವರಬೆಟ್ಟ ಎನ್ನುವ ಹಳ್ಳಿಗೆ ಹೋಗಲು ನಿರ್ಧರಿಸಿದೆ. ಈ ಹಳ್ಳಿಯಲ್ಲಿ ಚಿರತೆ ಈಗಾಗಲೇ ಐದು ನರಬಲಿಗಳನ್ನು ತೆಗೆದುಕೊಂಡಿದ್ದು ಕಳೆದ ಒಂದು ತಿಂಗಳಿಂದ ಅದು ಇಲ್ಲಿಗೆ ಭೇಟಿ ನೀಡಿರಲಿಲ್ಲ. ನಾನು ಅವತ್ತೇ ದೇವರಬೆಟ್ಟಕ್ಕೆ ಹೊರಟೆ. ಎರಡು ಬೆಟ್ಟಗಳನ್ನು ಹಾದು ಅಲ್ಲಿಗೆ ಹೋಗುವ ದಾರಿ ದುರ್ಗಮವಾಗಿತ್ತು. ಬೆಟ್ಟಗಳ ಮಧ್ಯೆ ಹರಿಯುವ ಚಿಕ್ಕ ಕಾಡಿನ ತೊರೆಯ ದಡದಲ್ಲಿ ಪ್ರೌಢ ಗಂಡುಹುಲಿಯ ಹೆಜ್ಜೆಗುರುತುಗಳನ್ನು ನೋಡಿದೆ. ಹೆಜ್ಜೆ ಗುರುತುಗಳಲ್ಲಿ ಮರಳಿನಿಂದ ಒಸರಿದ ನೀರು ಇನ್ನೂ ಆರಿರದಿದ್ದನ್ನು ನೋಡಿದರೆ ಹುಲಿ ಅವತ್ತು ಬೆಳಗ್ಗೆಯಷ್ಟೇ ಅಲ್ಲಿ ಹಾದುಹೋಗಿರುವುದು ಸ್ಪಷ್ಟವಾಗಿತ್ತು. ಚಿರತೆಯನ್ನು ಬೇಟೆಯಾಡುವ ಗುರಿಹೊಂದಿದ್ದ ನಾನು ಹುಲಿಯನ್ನು ಅರಸುವ ಪ್ರಯತ್ನ ಮಾಡದೆ ಮುಂದುವರೆದೆ. ಸುಮಾರು ಸಂಜೆ ಐದು ಗಂಟೆಯ ಹೊತ್ತಿಗೆ ದೇವರಬೆಟ್ಟವನ್ನು ತಲುಪಿದೆ.

ಅಷ್ಟು ಹೊತ್ತಿಗಾಗಲೆ ಅಲ್ಲಿನ ಜನಗಳು ತಮ್ಮ ಮನೆಯನ್ನು ಸೇರಿ ಬಾಗಿಲನ್ನು ಭದ್ರಪಡಿಸಿಕೊಳ್ಳುವ ಅವಸರದಲ್ಲಿದ್ದುದರಿಂದ ನನ್ನೊಡನೆ ಮಾತನಾಡುವ


ನಿಪ್ಪರ್ ಜೊತೆ ಕೆನೆತ್ ಆಂಡರ್ಸನ್

ಮನಸ್ಥಿತಿ ಮತ್ತು ಸಮಯವನ್ನು ಹೊಂದಿರಲಿಲ್ಲ. ದೇವರಬೆಟ್ಟಕ್ಕೆ ಚಿರತೆ ಇತ್ತೀಚೆಗೆ ಬಂದಿರಲಿಲ್ಲವಾದ್ದರಿಂದ ಅದರ ಮತ್ತೊಂದು ಭೇಟಿಗೆ ಆಗಲೇ ಸಮಯವಾಗಿದೆ ಎಂದು ಅವರೂ ಒಪ್ಪಿದರು..

ರಾತ್ರಿಯಾಗಲು ಸಮಯ ಬಹಳ ಕಡಿಮೆ ಇತ್ತು. ನಾನು ಆ ಹಳ್ಳಿಯ ಎತ್ತರದ ಗೋಡೆಯೊಂದನ್ನು ಹುಡುಕಿ ಅದರ ಮಾಡಿಗೆ ಮುಳ್ಳಿನ ಹೊದಿಕೆಯನ್ನು ಹಾಸುವ ವ್ಯವಸ್ಥೆ ಮಾಡಿದೆ. ಗೋಡೆಯ ಮುಂದೆ ಕುಳಿತು ಗುಮ್ಮಲಾಪುರದಲ್ಲಿ ಮೊದಲ ರಾತ್ರಿಯನ್ನು ಕಳೆದಂತೆ ಕಳೆಯಲು ನಿರ್ಧರಿಸಿದೆ.

ದೇವರಬೆಟ್ಟ ಗುಮ್ಮಲಾಪುರಕ್ಕಿಂತ ಚಿಕ್ಕಹಳ್ಳಿಯಾಗಿದ್ದು ಕಾಡಿಗೆ ಹೆಚ್ಚು ಹತ್ತಿರವಾಗಿತ್ತು, ಹಾಗಾಗಿ ಕಾಡಿನ ಪ್ರಾಣಿಪಕ್ಷಿಗಳು ದುಷ್ಟಮೃಗಗಳನ್ನು ನೋಡಿ ಮಾಡುವ ಎಚ್ಚರಿಕೆಯ ಕೂಗುಗಳನ್ನು ಕೇಳಲು ಸಾಧ್ಯವಿತ್ತು. ಇದು ನನಗೆ ಅನುಕೂಲಕರವಾಗಿತ್ತು.

ಬಹಳ ಬೇಗ ಕತ್ತಲು ಆವರಿಸಿಕೊಂಡರೂ ಶುಕ್ಲಪಕ್ಷದ ಚಂದ್ರ ತೆಳುವಾದ ಬೆಳಕನ್ನು ಹರಡಿದ್ದ. ದೇವರಬೆಟ್ಟದ ಕೊಳಕಾದ ಮತ್ತು ಓರೆಕೋರೆಯಾದ ಮುಖ್ಯರಸ್ತೆ ಕನಸಿನಲ್ಲೋ ಎಂಬಂತೆ ಮಸುಕಾಗಿ ಕಾಣುತ್ತಿತ್ತು. ಸುಮಾರು 8.30ರ ಹೊತ್ತಿಗೆ ಸಾಂಬಾರ್ ಜಿಂಕೆಗಳ ನಿರಂತರ ಎಚ್ಚರಿಕೆಯ ಕೂಗು ಕೇಳಿಸಿತು. ಯಾವುದೋ ದುಷ್ಟಪ್ರಾಣಿಯನ್ನು ನೋಡಿದ ಸಾಂಬಾರ್ ಜಿಂಕೆ ಕಾಡಿನ ಇತರ ಪ್ರಾಣಿಗಳಿಗೆ ತಮ್ಮ ಜೀವವುಳಿಸಿಕೊಳ್ಳಲು ನೀಡುತ್ತಿರುವ ಎಚ್ಚರಿಕೆಯ ಕೂಗು ಇದು ಎಂಬುದರಲ್ಲಿ ಸಂದೇಹವೇ ಇರಲಿಲ್ಲ. ಇದು ಚಿರತೆಯೇ ಅಥವಾ ಅದಕ್ಕಿಂತ ದೊಡ್ಡ ಮಾಂಸಾಹಾರಿಯೇ ಎನ್ನುವುದನ್ನು ಸಮಯವೇ ಹೇಳಬಲ್ಲದು.

ಸ್ವಲ್ಪ ಸಮಯಕ್ಕೆ ಜಿಂಕೆಗಳ ಕೂಗು ನಿಂತುಹೋಯಿತು. ಸುಮಾರು ಹದಿನೈದು ನಿಮಿಷಗಳ ನಂತರ ಅದೇ ದಿಕ್ಕಿನಿಂದ ಮೆಲುವಾದ ಹುಲಿಯ ಕೂಗು ಕೇಳಿಸಿತು. ಇದು ಸಂಗಾತಿಗಾಗಿ ನೀಡಿದ ಕರೆಯಾಗಿರದೆ ಕಾಡಿನ ರಾಜ ಬೇಟೆಯನ್ನು ಅರಸಿ ಹೊರಟಿದ್ದಾನೆ, ಅದರ ಹಸಿವನ್ನು ನೀಗಿಸಲು ಯಾವುದಾದರೂ ಪ್ರಾಣಿ ಬಲಿಯಾಗಲೇಬೇಕು-ಎಂದು ಇತರ ಪ್ರಾಣಿಗಳಿಗೆ ನೀಡುವ ಸೂಚನೆಯಂತಿತ್ತು.

ಪ್ರಾಣ ಉಳಿಸಿದ ನಿಪ್ಪರ್

ಸಮಯ ಸರಿಯುತ್ತಿತ್ತು, ಆಗೊಮ್ಮೆ ರಸ್ತೆಯ ತುದಿಯಲ್ಲಿ ಏನೋ ಚಲಿಸಿದಂತೆ ಕಂಡಿತು. ನನ್ನ ಬಂದೂಕನ್ನು ಎತ್ತಿ ಗುರಿಹಿಡಿದು ಗಮನಿಸುತ್ತಿದ್ದೆ, ಆ ಪ್ರಾಣಿ ರಸ್ತೆಯ ಮಧ್ಯದಲ್ಲಿ ನನ್ನ ಕಡೆಯೇ ನಿಧಾನವಾಗಿ ನಡೆದು ಬರುತ್ತಿತ್ತು, ಇದು ಚಿರತೆಯೇ ಆಗಿದ್ದರೆ ಅದೇಕೆ ಹೀಗೆ ಮುಚ್ಚುಮರೆಯಿಲ್ಲದೆ ರಸ್ತೆಯ ಮಧ್ಯದಲ್ಲಿ ನಡೆದು ಬರುತ್ತಿದೆ? ಸುಮಾರು ನನ್ನಿಂದ ಮೂವತ್ತು ಗಜ ದೂರದಲ್ಲಿದ್ದಾಗಲೂ ಈ ಪ್ರಾಣಿ ಹಾಗೆಯೇ ಮುಂದೆ ಬರುತ್ತಿತ್ತು, ಆಗ ಇದಾವುದೋ ಬಡಕಲು ಪ್ರಾಣಿಯಂತೆ ಕಾಣುತ್ತಿತ್ತು, ಅದು ಇನ್ನೂ ಹತ್ತಿರ ಬಂದಂತೆ ನಾನು ಬಂದೂಕಿನ ನಳಿಕೆಗೆ ಕಟ್ಟಿದ್ದ ಟಾರ್ಚ್‌ನಿಂದ ಅದರತ್ತ ಬೆಳಕನ್ನು ಹಾಯಿಸಿದೆ.

ರಸ್ತೆಯ ಮೇಲೆ ಪ್ರಖರವಾದ ಬೆಳಕು ಬಿದ್ದ ತಕ್ಷಣ ನನಗೆ ಕಂಡಿದ್ದು ಒಂದು ಬಡಕಲು ಊರಿನ ನಾಯಿ. ಹಸಿವು ಮತ್ತು ಏಕಾಕಿತನದಿಂದ ಬಳಲುತ್ತಿದ್ದ ಅದು ಮನುಷ್ಯರ ಸಹವಾಸವನ್ನು ಹುಡುಕಿ ಹೊರಟಿತ್ತು, ತೆಳುವಾದ ತನ್ನ ಬಾಲವನ್ನು ಅಲ್ಲಾಡಿಸುತ್ತಾ ಅದು ಬೆಳಕು ಬಂದತ್ತ ನೋಡುತ್ತಿತ್ತು.

ಒಂಟಿಯಾಗಿದ್ದ ನಾನು ಸಿಕ್ಕ ಯಾವುದೋ ಒಂದು ಸ್ನೇಹಿತನನ್ನು ಸ್ವಾಗತಿಸುತ್ತಾ ಟಾರ್ಚ್‌ನ್ನು ಆರಿಸಿ, ಚಿಟಿಕೆ ಹೊಡೆದು ನಾಯಿಯನ್ನು ಹತ್ತಿರ ಕರೆದೆ. ಬಾಲವನ್ನು ಅಲ್ಲಾಡಿಸುತ್ತಾ ಬಂದ ಅದಕ್ಕೆ ಕೆಲವು ಬಿಸ್ಕಿಟ್ ಮತ್ತು ಸ್ಯಾಂಡ್‌ವಿಚ್ ತಿನ್ನಲು ಕೊಟ್ಟೆ. ಬಹುಶಃ ಎರಡು ದಿನಗಳ ನಂತರ ಸಿಕ್ಕ ಆಹಾರಕ್ಕಾಗಿ ಅದು ನನಗೆ ಕೃತಜ್ಞತೆ ಸೂಚಿಸುತ್ತಾ ನನ್ನ ಕಾಲ ಬಳಿ ಮಲಗಿ ನಿದ್ದೆ ಮಾಡಿತು.

ರಾತ್ರಿ ಏಕತಾನತೆಯಿಂದ ಸರಿಯುತ್ತಾ ಮೂರುಗಂಟೆಯಾಯಿತು. ನಾನು ಬಳಲಿದ್ದ ಮತ್ತು ನೋಯುತ್ತಿದ್ದ ನನ್ನ ಕಣ್ಣು ಕಿವಿಗಳಿಂದ ಯಾವುದಾದರೂ ಸದ್ದು ಅಥವಾ ಚಲನೆಗಾಗಿ ಗಮನಿಸುತ್ತಲೇ ಇದ್ದೆ, ಅದೃಷ್ಟವಶಾತ್ ಅವತ್ತು ಮೋಡಗಳಿಲ್ಲದಿದ್ದರಿಂದ ಎಲ್ಲವೂ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ಆಗ ಟಿಟಿಕಾಕ ಹಕ್ಕಿಯೊಂದು ಏನನ್ನೋ ಕಂಡಂತೆ ಉದ್ರೇಕದಿಂದ ಮತ್ತೆಮತ್ತೆ ಕೂಗಿತು. ನನ್ನ ಕಾಲ ಬಳಿ ಇದ್ದ ನಾಯಿ ಒಮ್ಮೆ ತಲೆಯೆತ್ತಿ ಮತ್ತೆ ಏನೂ ನಡೆದೇ ಇಲ್ಲವೆಂಬಂತೆ ಬಿದ್ದುಕೊಂಡಿತು.

ಕೆಲವು ನಿಮಿಷಗಳ ನಂತರ ನಾಯಿ ಪೂರ್ಣ ಎಚ್ಚರಗೊಂಡಿತು. ನನ್ನ ಕಾಲುಗಳಿಗೆ ಆತುಕೊಂಡು ನಡುಗುತ್ತಾ ಕಿವಿಯನ್ನು ನಿಮಿರಿಸಿ, ಅದು ಮೆಲುವಾದ ಆದರೆ ದೀರ್ಘವಾದ ಗುಟುರನ್ನು ಹಾಕಿತು. ಹಳ್ಳಿಯ ಕಡೆ ಹೋಗುತ್ತಿದ್ದ ರಸ್ತೆಯ ಕಡೆ ಅದು ನೋಡುತ್ತಿದ್ದುದು ನನ್ನ ಗಮನಕ್ಕೆ ಬಂತು.

ನಾನೂ ಕೂಡ ಅತ್ತ ಕಡೆಯೇ ಗಮನವಿಟ್ಟು ನೋಡತೊಡಗಿದೆ. ಸುಮಾರು ಹೊತ್ತಿನ ನಂತರ ರಸ್ತೆಯ ನಾನಿದ್ದ ಕಡೆಯೇ ಕಟ್ಟಡವೊಂದರ ಪಕ್ಕದಲ್ಲಿ ನೆರಳೊಂದು ಚಲಿಸಿದಂತೆ ಕಂಡಿತು. ಕೆಲವು ಸೆಕೆಂಡ್‌ಗಳ ನಂತರ ಇನ್ನೂ ಹತ್ತಿರದಲ್ಲಿ ಕಳ್ಳ ಚಲನೆ ನನ್ನ ಗಮನಕ್ಕೆ ಬಂದಿತು.

ಟಾರ್ಚ್‌ನ ಸ್ವಿಚ್‌ನ ಮೇಲೆ ಬೆರಳನ್ನು ಇಟ್ಟು ನಾನು ಉಸಿರು ಬಿಗಿ ಹಿಡಿದು ಕಾಯತೊಡಗಿದೆ. ಹತ್ತು ನಿಮಿಷಗಳ ನಂತರ ಸುಮಾರು ಇಪ್ಪತ್ತು ಗಜ ದೂರದಲ್ಲಿದ್ದ ಗುಡಿಸಲಿನ ಮಾಡಿನ ಮೇಲೆ ಒಂದು ಉದ್ದವಾದ ದೇಹ ಚುರುಕಾಗಿ ಸದ್ದಿಲ್ಲದೆ ಚಲಿಸುತ್ತಿರುವುದು ಗೋಚರಿಸಿತು. ಗುಡಿಸಲುಗಳು ಒಂದಕ್ಕೊಂದು ಬಹಳ ಹತ್ತಿರವಾಗಿದ್ದುದರಿಂದ ಚಿರತೆ ಅವುಗಳ ಮೇಲೆಯೇ ಚಲಿಸುತ್ತಾ ಹಿಂದಿನಿಂದ ಬಂದು ನನ್ನ ಮೇಲೆ ಆಕ್ರಮಣ ಮಾಡಲು ಯೋಚಿಸಿದಂತೆ ಅನ್ನಿಸಿತು.

ನಾನು ತಕ್ಷಣ ಎದ್ದು ಗೋಡೆಗೆ ಬೆನ್ನು ಒರಗಿಸಿ ನಿಂತುಕೊಂಡೆ. ನನ್ನ ತಲೆಯ ಮೇಲಿದ್ದ ಮಾಡು ನನ್ನಿಂದ ಸುಮಾರು ಒಂದೂವರೆ ಅಡಿಯಷ್ಟು ದೂರದವರೆಗೆ ಮರೆಮಾಡಿತ್ತು. ಬಂದೂಕನ್ನು ಮೇಲ್ಮುಖವಾಗಿ ಗುರಿಹಿಡಿದು ನಾನು ಸಿದ್ಧನಾದೆ.

ಕೆಲವು ಸೆಕೆಂಡುಗಳ ನಂತರ ಚಿರತೆ ಮಾಡಿಗೆ ಹೊದಿಸಿದ್ದ ಮುಳ್ಳಿನ ಪೊದೆಯನ್ನು ಸರಿಸುವ ಸರಸರ ಸದ್ದು ಕೇಳಿಸಿತು. ಆದರೆ ಅದು ಸಾಧ್ಯವಾಗದಿದ್ದಾಗ ಚಿರತೆ ಸುಮ್ಮನಾಯಿತು. ಮುಂದೆ ಮೌನ ಆವರಿಸಿಕೊಂಡಿದ್ದರಿಂದ ಚಿರತೆ ಎಲ್ಲಿರಬಹುದು ಎಂದು ತಿಳಿಯುವುದು ನನಗೆ ಸಾಧ್ಯವಿರಲಿಲ್ಲ.

ಮುಂದಿನ 15 ನಿಮಿಷಗಳನ್ನು ನಾನು ತೀವ್ರ ಆತಂಕದಲ್ಲಿ ಕಳೆದೆ. ಚಿರತೆ ನನ್ನ ಮೇಲೆ ಹಾರುವುದನ್ನು ನಿರೀಕ್ಷಿಸುತ್ತಾ ಸುತ್ತಲೂ ಗಮನಿಸುತ್ತಲೇ ಇದ್ದೆ. ಆಗ ಅಲ್ಲಿಯವರೆಗೆ ನನ್ನ ಕಾಲ ಬಳಿ ಚಡಪಡಿಸುತ್ತಾ, ಗುರುಗುಟ್ಟುತ್ತಾ ಇದ್ದ ನಾಯಿ ತಕ್ಷಣ ರಸ್ತೆಯ ಮಧ್ಯಕ್ಕೆ ಓಡಿ ಹೋಗಿ ನಾನು ನಿಂತಿದ್ದ ಗುಡಿಸಲಿನ ಮೂಲೆಯ ಕಡೆ ಮುಖಮಾಡಿ ಜೋರಾಗಿ ಬೊಗಳತೊಡಗಿತು.

ಈ ಎಚ್ಚರಿಕೆಯ ಕೂಗು ನನ್ನ ಜೀವ ಉಳಿಸಿತು. ಮುಂದಿನ ಐದು ಸೆಕೆಂಡುಗಳಲ್ಲಿ ಚಿರತೆ ಗುಡಿಸಲನ್ನು ಬಳಸಿಕೊಂಡು ಬಂದು ನನ್ನ ಮೇಲೆ ಆಕ್ರಮಣ ಮಾಡಿತು. ಡೊಗ್ಗಾಲಿನಲ್ಲಿ ಕುಳಿತು ಟಾರ್ಚ್‌ಅನ್ನು ಹೊತ್ತಿಸಿ, ಗುಂಡನ್ನು ಸಿಡಿಸುವುದಕ್ಕಷ್ಟೇ ನನಗೆ ಸಮಯ ಸಿಕ್ಕಿತ್ತು. ಅಗಲವಾಗಿ ತೆರೆದಿದ್ದ ಬಾಯಿಯ ಮೇಲ್ಭಾಗದಲ್ಲಿ ಹೊಳೆಯುತ್ತಿದ್ದ ಕಣ್ಣುಗಳ ಮಧ್ಯೆ ನಾನು ಗುರಿ ಇಟ್ಟಿದ್ದೆ. ನನ್ನ ಗುಂಡು ನೇರವಾಗಿ ಗುರಿಯನ್ನು ತಲುಪಿದ್ದರೂ ಚಿರತೆಯ ಜಿಗಿತದ ವೇಗ ಅದನ್ನು ನನ್ನ ಕಡೆ ತಂದಿತ್ತು.


ನಾನು ತ್ವರಿತವಾಗಿ ಪಕ್ಕಕ್ಕೆ ಸರಿದೊಡನೆ ಚಿರತೆ ಗುಡಿಸಲಿನ ಗೋಡೆಗೆ ಡಿಕ್ಕಿ ಹೊಡೆಯಿತು. ತಕ್ಷಣ ಇನ್ನೆರಡು ಗುಂಡುಗಳನ್ನು ಆ ದುರುಳನ ಮೇಲೆ ಹಾರಿಸಿದೆ.

ತೆರೆದ ಬಾಯಿಯಿಂದ ದವಡೆಗಳು ಮತ್ತು ಉದ್ದವಾದ ಬಾಲ ಸ್ವಲ್ಪ ಚಲಿಸುತ್ತಿದ್ದರೂ ಚಿರತೆ ಕುಸಿದು ಬಿದ್ದು ಕೊನೆಯ ಉಸಿರೆಳೆಯುತ್ತಿತ್ತು, ಆಗ ನನ್ನ ಹೊಸ ಸ್ನೇಹಿತನಾದ ನಾಯಿ ತನ್ನ ಹೊಸ ಯಜಮಾನನಿಗೆ ನಿಷ್ಠೆ ತೋರಿಸಲು ಓಡಿಹೋಗಿ ಆಗಲೇ ಸತ್ತಿದ್ದ ಚಿರತೆಯ ಕುತ್ತಿಗೆಯಲ್ಲಿ ತನ್ನ ಹಲ್ಲುಗಳನ್ನು ನೆಟ್ಟಿತು.

ಹೀಗೆ ಅತ್ಯಂತ ಚಾಣಾಕ್ಷನಾಗಿದ್ದ ಗುಮ್ಮಲಾಪುರದ ದುಷ್ಟ ಚಿರತೆಯ ಅಂತ್ಯವಾಯಿತು. ಚಿರತೆಯ ಕಾಲಿನ ಗಾಯ ನಾನಂದುಕೊಂಡಂತೆ ಬೇಟೆಗಾರನ ಗುಂಡಿನಿಂದ ಆಗಿದ್ದಲ್ಲ ಎಂದು ಮರುದಿನ ಅದರ ಚರ್ಮವನ್ನು ತೆಗೆಯುವಾಗ ನನಗೆ ತಿಳಿಯಿತು. ಮುಳ್ಳುಹಂದಿಯ ಎರಡು ಮುಳ್ಳುಗಳು ಒಂದು ಇಂಚು ಅಂತರದಲ್ಲಿ ಚಿರತೆಯ ಪಾದವನ್ನು ಹೊಕ್ಕು ಅಲ್ಲೇ ಸಿಕ್ಕಿಹಾಕಿಕೊಂಡಿದ್ದವು. ಮುಳ್ಳುಗಳ ಸುತ್ತ ಆಗಲೇ ಮಾಂಸ ಹರಡಿಕೊಂಡಿದ್ದರಿಂದ ಇದು ಬಹಳ ಹಿಂದೆಯೇ ಚುಚ್ಚಿಕೊಂಡಿರಬೇಕು. ಪಾದವನ್ನು ಊರಿದಾಗ ಮುಳ್ಳುಗಳು ಒಳಗಿನಿಂದ ಒತ್ತಿ ಚಿರತೆಗೆ ಬಹಳ ನೋವುಂಟುಮಾಡುತ್ತಿದುದರಿಂದ ಅದು ಪಾದದ ಅಂಚನ್ನು ಊರಿಕೊಂಡು ನಡೆಯುತ್ತಿತ್ತು.

ಆ ನಾಯಿಯನ್ನು ಮನೆಗೆ ತೆಗೆದುಕೊಂಡು ಹೋಗಿ ಸ್ನಾನ ಮಾಡಿಸಿ ಚೆನ್ನಾಗಿ ತಿನ್ನಲು ಕೊಟ್ಟೆ. ಅದಕ್ಕೆ "ನಿಪ್ಪರ್"ಎಂದು ಹೆಸರನ್ನಿಟ್ಟಿದ್ದೆ. ನಿಪ್ಪರ್ ನನ್ನ ಜೊತೆ ಬಹಳ ವರ್ಷ ಜೀವಿಸಿತ್ತು, ನಾನು ಕೇವಲ ಕೆಲವು ಬಿಸ್ಕಿಟ್ ಮತ್ತು ಸ್ಯಾಂಡ್‌ವಿಚ್ ಕೊಟ್ಟಿದ್ದಕ್ಕಾಗಿ ಎರಡೇ ಗಂಟೆಗಳ ನಂತರ ನನ್ನ ಜೀವ ಉಳಿಸಿದ ನಿಪ್ಪರ್‌ಗೆ ನಾನು ಸದಾ ಕೃತಜ್ಞನಾಗಿದ್ದೆ.

ಅಕ್ಟೋಬರ್ ಕ್ರಾಂತಿಯ ಮೂಲ ಕಾರ್ಲ್‌ಮಾರ್ಕ್ಸ್



1917ರ ಅಕ್ಟೋಬರ್‌ನಲ್ಲಿ ರಷ್ಯಾದಲ್ಲಿ ನಡೆದ ಮಹಾನ್ ಕ್ರಾಂತಿ 'ಗ್ರೇಟ್ ಅಕ್ಟೋಬರ್ ರೆವಲ್ಯೂಷನ್' ಎಂದೇ ಪ್ರಸಿದ್ಧವಾಯಿತು. ಭಾರತ ಸೇರಿದಂತೆ ವಿಶ್ವದ ನೂರಾರು ದೇಶಗಳು ವಸಾಹತುಶಾಹಿ ಕಪಿಮುಷ್ಟಿಯಿಂದ ಹೊರಬರಲು ಪ್ರೇರಣೆ ನೀಡಿತು. ಲೆನಿನ್ ಅವರು ಸಂಗಾತಿಗಳ ಜೊತೆ ಸೇರಿ ಝಾರ್ ದೊರೆ ವಿರುದ್ಧ ಮಾಡಿದ ಕ್ರಾಂತಿ ಯಶಸ್ಸು ಸಾಧಿಸಿ, ಸೋವಿಯತ್ ದೇಶವನ್ನು ಸ್ಥಾಪಿಸಿದ ಸಂದರ್ಭದಲ್ಲಿ ಕಾರ್ಲ್‌ಮಾರ್ಕ್ಸ್ ನಿಧನರಾಗಿದ್ದರು. ಆದರೆ ಅವರ ವೈಜ್ಞಾನಿಕ ಮನೋಭಾವದಿಂದ ಕೂಡಿದ ಕ್ರಾಂತಿಕಾರಿ ತತ್ವಗಳಿಂದ ಹೊಸ ಜಗತ್ತೊಂದರ ಸೃಷ್ಟಿಯಾಯಿತು. ಜಗತ್ತಿನ ದುಡಿಯುವ ವರ್ಗದ ಶಕ್ತಿಯ ನಿಜಸ್ವರೂಪವನ್ನು ತೋರಿಸುತ್ತ ಅಮೆರಿಕಕ್ಕೆ ಭಾರಿ ಸವಾಲು ಒಡ್ಡಿತು. ಆದರೆ ವ್ಯವಸ್ಥೆಯ ಒಳಗೇ ರಾಜದ್ರೋಹಿಗಳು ಹುಟ್ಟಿಕೊಂಡು ಸಾಮ್ರಾಜ್ಯಶಾಹಿಗಳ ಜೊತೆ ಕೈ ಜೋಡಿಸಿದ್ದರಿಂದ ಛಿದ್ರಛಿದ್ರವಾಯಿತು. ಇಂದು ಮತ್ತೆ ತುಳಿತಕ್ಕೊಳಗಾದ ಜಗತ್ತು ಕಾರ್ಲ್‌ಮಾರ್ಕ್ಸ್ ಅವರ ಕ್ರಾಂತಿಕಾರಿ ತತ್ತ್ವಗಳ ಕಡೆಗೆ ವಾಲುತ್ತಿದೆ.

'ಸ್ವತಂತ್ರ ಮಾನವನ ಪರವಾಗಿ ಎಲ್ಲ ಕೈಗಳು ಏಳುವುದಕ್ಕೆ ಮತ್ತು ಎಲ್ಲ ಹೃದಯಗಳು ಪರಿವರ್ತನೆಯಾಗುವುದಕ್ಕೆ ನಾನು ಕ್ರಾಂತಿ ಎನ್ನುತ್ತೇನೆ' ಎಂದು 19ನೇ ಶತಮಾನದ ಅದ್ವಿತೀಯ ತತ್ವಜ್ಞಾನಿ, ಸಮಾಜಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ ಮತ್ತು ಇತಿಹಾಸ ತಜ್ಞ ಕಾರ್ಲ್‌ಮಾರ್ಕ್ಸ್ ಅವರು ಹೇಳಿದ್ದಾರೆ.

ಕಾರ್ಲ್ ಮಾರ್ಕ್ಸ್ ಅವರು 1818ನೇ ಮೇ 15ರಂದು ಜರ್ಮನಿಯ ಟ್ರಾಯ್ ಪಟ್ಟಣದಲ್ಲಿ ಜನಿಸಿದರು. 1883ನೇ ಮಾರ್ಚ್ 14ರಂದು ಲಂಡನ್‌ನಲ್ಲಿ ನಿಧನರಾದರು.

ಕಾರ್ಲ್‌ಮಾರ್ಕ್ಸ್ ಅವರು ಬದುಕಿದ 19ನೇ ಶತಮಾನ ಮಹತ್ವದ ಶತಮಾನವಾಗಿದೆ. 20ನೇ ಶತಮಾನದ ವಿಜ್ಞಾನ ಮತ್ತು ತಂತ್ರಜ್ಞಾನದ ಬೇರುಗಳೆಲ್ಲ 19ನೇ ಶತಮಾನದಲ್ಲಿವೆ. ಅಲ್ಲದೆ ಯುರೋಪಿನಲ್ಲಿ ನಡೆದ ಔದ್ಯೋಗಿಕ ಕ್ರಾಂತಿ ಆ ವೇಳೆಗಾಗಲೆ ಭಾರಿ ಬೆಳವಣಿಗೆ ಸಾಧಿಸಿತ್ತು. ಬಂಡವಾಳಶಾಹಿಗಳು ಔದ್ಯೋಗಿಕ ಕ್ರಾಂತಿಯ ಎಲ್ಲ ಲಾಭಗಳನ್ನು ತಮ್ಮದಾಗಿಸಿಕೊಂಡಿದ್ದರು. ಕಾರ್ಮಿಕರನ್ನು ಪ್ರತಿದಿನ 18 ಗಂಟೆಗಳಷ್ಟು ಕಾಲ ದುಡಿಸಿಕೊಳ್ಳುತ್ತಿದ್ದರು. ಮಕ್ಕಳು ಮತ್ತು ಹೆಣ್ಣುಮಕ್ಕಳನ್ನು ಕೂಡ ಕ್ರೂರವಾಗಿ ದುಡಿಸಿಕೊಳ್ಳುತ್ತಿದ್ದರು. ಕಾರ್ಮಿಕರ ಕಾಲಿಗೆ ಸರಪಳಿ ಕಟ್ಟಿ ದುಡಿಸಿಕೊಳ್ಳಲಾಗುತ್ತಿತ್ತು, ಕಾರ್ಮಿಕ ವರ್ಗಕ್ಕೆ ಯಾವುದೇ ಸೌಲಭ್ಯಗಳನ್ನು ಕಲ್ಪಿಸಿರಲಿಲ್ಲ. ಅವರು ದುಡಿಯುವುದಕ್ಕಾಗಿಯೇ ಜನಿಸಿದಂತಿತ್ತು.

ಮಹಾ ಮಾನವತಾವಾದಿ ಕಾರ್ಲ್‌ಮಾರ್ಕ್ಸ್ ಅವರಿಗೆ ಹದಿಹರೆಯದಲ್ಲೇ ಈ ಕ್ರೌರ್ಯದ ಅರಿವಾಯಿತು. ಮಾನವನನ್ನು ಎಲ್ಲ ರೀತಿಯ ಶೋಷಣೆಯಿಂದ ಮುಕ್ತಗೊಳಿಸಲು ಗಾಢವಾದ ಚಿಂತನೆಯಲ್ಲಿ ತೊಡಗಿದರು. ಬಂಡವಾಳಶಾಹಿಗಳು ತಮ್ಮ ವೈರಿಗಳನ್ನು ತಾವೇ ಸೃಷ್ಟಿಸುತ್ತಿದ್ದಾರೆ ಎಂಬುದನ್ನು ಅವರು ಬಹುಬೇಗ ಅರಿತುಕೊಂಡರು. ಬಂಡವಾಳಶಾಹಿ ವ್ಯವಸ್ಥೆಯನ್ನು ಅಳಿಸಿ ಮಾನವೀಯವಾದ ಸರ್ವ ಸಮಾನತೆಯ ಸಮಾಜವನ್ನು ನಿರ್ಮಿಸುವಲ್ಲಿ ಕಾರ್ಮಿಕ ವರ್ಗದ ಪಾತ್ರ ಬಹುಮುಖ್ಯವಾಗಿದೆ ಎಂದು ಜಗತ್ತಿಗೆ ತಿಳಿಸುವಲ್ಲಿ ತಲ್ಲೀನರಾದರು. 'ಜಗತ್ತಿನ ಕಾರ್ಮಿಕರೇ ಒಂದಾಗಿರಿ. ಒಂದಾಗುವುದರಿಂದ ನಿಮ್ಮ ಸಂಕೋಲೆಗಳನ್ನಲ್ಲದೆ ನೀವು ಮತ್ತೇನನ್ನೂ ಕಳೆದುಕೊಳ್ಳುವುದಿಲ್ಲ' ಎಂದು ಸಾರಿದರು. ಅವರ ಈ ಕ್ರಾಂತಿಕಾರಿ ವಿಚಾರಧಾರೆ ... ಬೆಳೆಸುವಲ್ಲಿ ಅವರ ಆತ್ಮೀಯ ಮಿತ್ರ ಮತ್ತು ಸಹ ಲೇಖಕ ಫ್ರೆಡ್ರಿಕ್ ಎಂಗೆಲ್ಸ್ ಅವರು ಮಹತ್ವದ ಪಾತ್ರವನ್ನು ವಹಿಸಿದ್ದಾರೆ.

ಕಾರ್ಮಿಕ ವರ್ಗದ ಐತಿಹಾಸಿಕ ಪಾತ್ರವನ್ನು ಗ್ರಹಿಸಿದ ಅವರು ಅದಕ್ಕೆ ಅಗತ್ಯವಾದ ಸೈದ್ಧಾಂತಿಕ ತಳಹದಿಯನ್ನು ಒದಗಿಸಿದರು. ಯುದ್ಧಕ್ಕೆ ವಿರೋಧವಾದ ವರ್ಗ ಹೋರಾಟ, ಸಮತಾವಾದಿ ಕ್ರಾಂತಿ, ಸಮತಾವಾದದ ಗುರಿಯುಳ್ಳ ಸಮಾಜವಾದಿ ವ್ಯವಸ್ಥೆ ಪ್ರಕೃತಿ, ಇತಿಹಾಸದ ಗತಿ, ಸಮಾಜದ ಸ್ವರೂಪ, ವಿಜ್ಞಾನ ಮತ್ತು ತತ್ತ್ವಜ್ಞಾನದ ಹಿನ್ನೆಲೆಯಲ್ಲಿ ಮಾನವನ ಪ್ರಜ್ಞೆಯ ವಿಕಾಸದ ಕುರಿತು ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗೆಲ್ಸ್ ಅವರ ವಿಚಾರಗಳು ಆಚಂದ್ರಾರ್ಕವಾಗಿ ಉಳಿಯುವಂತಹವು. ಮಾರ್ಕ್ಸ್ ಅವರು ಎಂಗೆಲ್ಸ್ ಅವರ ಜೊತೆ ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಹೋರಾಟಕ್ಕೆ ನಾಂದಿ ಹಾಡಿದರು.

ಕಾರ್ಲ್ ಮಾರ್ಕ್ಸ್ ಅವರ ತಂದೆ ಹೆನ್ರಿಕ್ ಮಾರ್ಕ್ಸ್ ಪ್ರಸಿದ್ಧ ವಕೀಲರಾಗಿದ್ದರು. ಅವರು ನ್ಯಾಯಶಾಸ್ತ್ರಜ್ಞರೂ, ಪ್ರಾಮಾಣಿಕರೂ ಮತ್ತು ಶುದ್ಧ ಸ್ವಭಾವದ ಮಾನವೀಯ ವ್ಯಕ್ತಿಯಾಗಿದ್ದರು. ಅವರು ತೀರಿಕೊಂಡಾಗ ಕಾರ್ಲ್‌ಮಾರ್ಕ್ಸ್ ಅವರು 20 ವರ್ಷದ ತರುಣರಾಗಿದ್ದರು. ಅವರ ತಾಯಿ ಹೆನ್ರಿಯೆಟ್ ಒಂಬತ್ತು ಮಕ್ಕಳನ್ನು ಕಟ್ಟಿಕೊಂಡು ಕುಟುಂಬ ನಿರ್ವಹಣೆ ಮಾಡಿದಳು. ತಂದೆಯ ಮಾನವೀಯ ಮೌಲ್ಯಗಳು ಮತ್ತು ತಾಯಿಯ ತ್ಯಾಗ ಅವರ ಮೇಲೆ ಗಾಢವಾದ ಪರಿಣಾಮ ಬೀರಿದವು.

ಅವರು ತಮ್ಮ 22ನೇ ವಯಸ್ಸಿಗೆ ತತ್ವಶಾಸ್ತ್ರದಲ್ಲಿ ಪಿಎಚ್.ಡಿ ಪಡೆದರು. ಅಂದಿನ ಜರ್ಮನ್ ಸರ್ಕಾರ ಸ್ವತಂತ್ರ ವಿಚಾರವಾದಿಗಳ ಮೇಲೆ ನಿರ್ಬಂಧ ಹೇರಿದ್ದರಿಂದ ಮಾರ್ಕ್ಸ್ ಅವರು ಶಿಕ್ಷಕ ವೃತ್ತಿಯನ್ನು ಕೈಗೊಳ್ಳುವ ಆಸೆ ಬಿಟ್ಟರು.




ಜನತೆಯ ಸ್ವಾತಂತ್ರ್ಯ ಮತ್ತು ಸುಖ ಸಂತೋಷಗಳಿಗಾಗಿ ಭಯಂಕರ ಯಾತನೆಗಳನ್ನೂ ಅನುಭವಿಸಿದ ಪೌರಾಣಿಕ ವೀರಪುರುಷ ಪ್ರೊಮೀತಿಯೂಸನ ಬಗ್ಗೆ ತರುಣ ಮಾರ್ಕ್ಸ್ ತಮ್ಮ ಪ್ರೌಢ ಪ್ರಬಂಧದ ಮುನ್ನುಡಿಯಲ್ಲಿ ಮೆಚ್ಚುಗೆ ಸೂಚಿಸಿದ್ದಾರೆ. ಪ್ರೊಮೀತಿಯೂಸ್ ಕೊನೆಯವರೆಗೂ ಮಾರ್ಕ್ಸ್ ಪಾಲಿಗೆ ಜನಸೇವೆಯ ಸ್ಫೂರ್ತಿಯ ಸಂಕೇತವಾಗೇ ಉಳಿದಿದ್ದ.

ಈಗ ಜರ್ಮನಿಯ ಭಾಗವಾಗಿರುವ ಅಂದಿನ ಪ್ರಷಿಯಾದಲ್ಲಿ ಕಾರ್ಲ್ ಮಾರ್ಕ್ಸ್ ಅವರು ತಮ್ಮ ಪತ್ರಿಕಾ ಬರವಣಿಗೆ ಪ್ರಾರಂಭಿಸಿದರು. ಅವರು 'ರೈನೀಷ್ ಜೈಟುಂಗ್' ಪತ್ರಿಕೆಯ ಪ್ರಧಾನ ಸಂಪಾದಕರಾದರು. ಪ್ರಷಿಯನ್ ಅಧಿಕಾರಿಗಳು ಪತ್ರಿಕೋದ್ಯಮದ ಮೇಲೆ ಕಟ್ಟುನಿಟ್ಟಿನ ಸೆನ್ಸಾರ್‌ಶಿಪ್ ವಿಧಿಸಿದರು. ಅಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಮಾರ್ಕ್ಸ್ ಅನೇಕ ತಿಂಗಳವರೆಗೆ ಪ್ರಷಿಯನ್ ರಾಜ್ಯದ ದಬ್ಬಾಳಿಕೆ ಕುರಿತ ತಮ್ಮ ಟೀಕೆಯನ್ನು ಮುಂದುವರಿಸಿದರು.

1842ರಲ್ಲಿ ಕಾರ್ಲ್ ಮಾರ್ಕ್ಸ್ ಅವರು ಜೆನ್ನಿವಾನ್ ವೆಸ್ಟ್‌ಫಾಲೆನ್ ಅವರನ್ನು ಮದುವೆಯಾದರು. ಪ್ರಷಿಯನ್ ಸರ್ಕಾರ 1843ನೇ ಮಾರ್ಚ್ 31ರಂದು ಪತ್ರಿಕೆಯನ್ನು ನಿಷೇಧಿಸುವ ನಿರ್ಧಾರ ಕೈಗೊಂಡಿತು. ಆಗ ಪತ್ರಿಕೆಯ ಷೇರುದಾರರು ಸರ್ಕಾರಕ್ಕೆ ಪೂರಕವಾಗಿರುವ ನಿರ್ಧಾರಕ್ಕೆ ಬಂದರು. ಮಾರ್ಕ್ಸ್ ಅವರು ಪತ್ರಿಕೆಗೆ ರಾಜೀನಾಮೆ ನೀಡಿ 1843ನೇ ಅಕ್ಟೋಬರ್‌ನಲ್ಲಿ ಪತ್ನಿ ಜೊತೆ ಪ್ಯಾರಿಸ್‌ಗೆ ಹೋದರು. ಕ್ರಾಂತಿಕಾರಿ ಹೋರಾಟಕ್ಕೆ ಜೀವನವನ್ನು ಸಮರ್ಪಿಸಿದರು.

18ನೇ ಶತಮಾನದ ಕೊನೆಯಲ್ಲಿ ನಡೆದ ಫ್ರೆಂಚ್ ಕ್ರಾಂತಿಯ ಘೋಷಣೆಯಾದ "ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತ್ವ"ದ ಆದರ್ಶಗಳು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆಚರಣೆಗೆ ಬರುವುದು ಅಸಾಧ್ಯ ಎಂಬುದು ಆ ವೇಳೆಗಾಗಲೇ ಸ್ಪಷ್ಟವಾಗಿತ್ತು. ಬಂಡವಾಳಶಾಹಿ ವ್ಯವಸ್ಥೆ ಖಾಸಗಿ 'ಸೊತ್ತಿನ ಮೇಲೆ ನಿಂತಿರುವುದರಿಂದ ಅದು ಬಂಡವಾಳಶಾಹಿಗಳಿಗೆ ಮಾತ್ರ ಸ್ವಾತಂತ್ರ್ಯ ಕೊಟ್ಟಿರುತ್ತದೆ. ಆ ಸ್ವಾತಂತ್ರ್ಯ ಕಾಯಕ ಜೀವಿಗಳನ್ನು ಸುಲಿಗೆ ಮಾಡುವ





ಸ್ವಾತಂತ್ರ್ಯವಾಗಿರುತ್ತದೆ ಎಂಬ ಮಾರ್ಕ್ಸ್ ವಿಚಾರಧಾರೆಗೆ ಪ್ಯಾರಿಸ್‌ನಲ್ಲಿ ಭಾರಿ ಬೆಂಬಲ ಸಿಗತೊಡಗಿತು.

ಕಾಯಕ ಜೀವಿಗಳ ವಿಷಯದಲ್ಲಿ ಕಾರ್ಲ್ ಮಾರ್ಕ್ಸ್ ಅವರಿಗೆ ಬಸವಣ್ಣನವರ ಹಾಗೆ ತುಂಬ ಗೌರವ ಮತ್ತು ಸಹಾನುಭೂತಿ ಇದ್ದವು. "ಕಾಯಕ ಜೀವಿಗಳಿಗೆ ಸಹೋದರತ್ವ ಎಂಬುದು ಕೇವಲ ಪದಪುಂಜವಲ್ಲ, ಬದುಕಿನ ವಾಸ್ತವಾಂಶವಾಗಿದೆ. ಮತ್ತು ಕಾಯಕದಿಂದ ಗಟ್ಟಿಗೊಂಡ ಅವರ ದೇಹಗಳಿಂದ ಮಾನವನ ಘನತೆಯ ಶೋಭೆ ನಮಗೆ ಎದ್ದು ಕಾಣುತ್ತದೆ" ಎಂದು ಮಾರ್ಕ್ಸ್ ಹೇಳಿದ್ದಾರೆ.

ಮಾರ್ಕ್ಸ್ ಅವರ ಕ್ರಾಂತಿಕಾರಿ ಚಟುವಟಿಕೆಗಳ ಮೇಲೆ ಗಮನವಿಟ್ಟಿದ್ದ ಫ್ರೆಂಚ್ ಸರ್ಕಾರಕ್ಕೆ ಪ್ರಷಿಯನ್ ಸರ್ಕಾರದ ಬೆಂಬಲವೂ ಇತ್ತು. ಫ್ರಾನ್ಸ್ ಬಿಟ್ಟು ತೊಲಗಬೇಕು ಎಂದು ಫ್ರಾನ್ಸ್ ಸರ್ಕಾರ ಮಾರ್ಕ್ಸ್ ಅವರಿಗೆ ಆದೇಶಿಸಿತು. ಆಗ ಮಾರ್ಕ್ಸ್ ಅವರು ಬೆಲ್ಜಿಯಂಗೆ ತೆರಳಿದರು. ಈ ಸಂದರ್ಭ ಕುರಿತು ಜೆನ್ನಿ ವಾನ್ ವೆಸ್ಟ್‌ಫಾಲೆನ್ ಈ ರೀತಿ ಬರೆದಿದ್ದಾರೆ: "1845ರ ಆರಂಭದಲ್ಲಿ ಪೊಲೀಸ್ ಕಮೀಷನರ್ ನಮ್ಮ ಮನೆಗೆ ಬಂದು, ಗಡಿಪಾರು ಆಜ್ಞೆಯನ್ನು ನಮಗೆ ತೋರಿಸಿದರು. ಕಾರ್ಲ್ ಮಾರ್ಕ್ಸ್ 24 ಗಂಟೆಗಳೊಳಗಾಗಿ ಪ್ಯಾರಿಸ್ ಬಿಟ್ಟು ತೊಲಗಬೇಕು ಎಂದು ಆದೇಶ ನೀಡಲಾಗಿತ್ತು. ನನಗೆ ಸ್ವಲ್ಪ ಹೆಚ್ಚು ಕಾಲ ನೀಡಿದ್ದರು. ನಾನು ಆ ಸಮಯದಲ್ಲಿ ಕೆಲ ಪೀಠೋಪಕರಣಗಳನ್ನು ಮತ್ತು ಕೆಲ ಬಟ್ಟೆ ಬರೆಗಳನ್ನು ಮಾರಿದೆ. ದೊರೆತ ಹಣ ಬಲು ಕಡಿಮೆ. ಆದರೆ ನಮ್ಮ ಪ್ರಯಾಣಕ್ಕೆ ಹಣ ಕೂಡಿಸಬೇಕಾಗಿತ್ತು. ಅಸ್ವಸ್ಥಳಾಗಿದ್ದರೂ ಭಯಂಕರವಾದ ಚಳಿಯಿಂದ ನಡುಗುತ್ತಿದ್ದರೂ ಮಾರ್ಕ್ಸ್ ಅವರನ್ನು ಹಿಂಬಾಲಿಸುತ್ತ ಫೆಬ್ರುವರಿ ಆರಂಭದಲ್ಲಿ ನಾನು ಬ್ರುಸೆಲ್ಸ್‌ಗೆ ಹೋದೆ." ಜೆನ್ನಿ ಅವರ ಈ ಬರವಣಿಗೆಯಿಂದ ಮಹಾನ್ ಕ್ರಾಂತಿಕಾರಿಯ ಕಷ್ಟದ ಬದುಕಿನ ಪರಿಚಯವಾಗುವುದು.

ಬೆಲ್ಜಿಯಂ ರಾಜಧಾನಿ ಬ್ರುಸೆಲ್ಸ್‌ನಲ್ಲಿ ಮಾರ್ಕ್ಸ್ ದಂಪತಿ ವಾಸಿಸುತ್ತಿದ್ದ ಸಂದರ್ಭದಲ್ಲೂ ಪ್ರಷಿಯಾ ಸರ್ಕಾರ ತೊಂದರೆ ಕೊಡುತ್ತಲೇ ಇತ್ತು. ಪ್ಯಾರಿಸ್‌ನಲ್ಲಿ ಮೊದಲ ಮಗಳು ಜೆನಿ ಮಾರ್ಕ್ಸ್ ಜನಿಸಿದ್ದಳು. ಬ್ರುಸೆಲ್ಸ್‌ನಲ್ಲಿ ಇನ್ನೊಬ್ಬ ಮಗಳು ಲೋರಾ ಮತ್ತು ಮಗ ಎಡ್ಗರ್ ಜನಿಸಿದರು.

ಕಮ್ಯೂನಿಸ್ಟ್ ಲೀಗ್‌ನ ಆದೇಶಗಳಿಗೆ ಅನುಗುಣವಾಗಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರು ಬರೆದ "ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ" 1848ರಲ್ಲಿ ಲಂಡನ್‌ನಲ್ಲಿ ಪ್ರಕಟವಾಯಿತು. ಇಲ್ಲಿಯವರೆಗೆ ಇದರ ಕೋಟ್ಯಂತರ ಪ್ರತಿಗಳು ಪ್ರಕಟವಾಗಿದ್ದು ಜಗತ್ತಿನ ಎಲ್ಲ ಪುಸ್ತಕಗಳ ಪ್ರಕಟಣೆಯನ್ನು ಇದು ಹಿಂದೆ ಹಾಕಿತ್ತು.

ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರು 'ಪ್ರಣಾಳಿಕೆ'ಯ ಇತಿಹಾಸವನ್ನು ಭೌತಿಕವಾದಿ ದೃಷ್ಟಿಕೋನದಿ ವ್ಯಾಖ್ಯಾನಿಸಿದ್ದಾರೆ. ಕಾರ್ಮಿಕರ ಚಳವಳಿಗೆ ಕ್ರಾಂತಿಕ ಸಿದ್ಧಾಂತದ ಬೆಳಕನ್ನು ನೀಡಿದ್ದಾರೆ. "ಇಲ್ಲಿಯವ ಅಸ್ತಿತ್ವದಲ್ಲಿರುವ ಸಮಾಜಗಳ ಇತಿಹಾಸ ವ ಸಂಘರ್ಷದ ಇತಿಹಾಸವೇ ಆಗಿದೆ" ಎಂ ಪ್ರಣಾಳಿಕೆಯಲ್ಲಿ ಹೇಳಲಾಗಿದೆ.

ಬೆಲ್ಜಿಯಂ ಸರ್ಕಾರ 1848ನೇ ಮಾಚ ತಿಂಗಳಲ್ಲಿ ಮಾರ್ಕ್ಸ್ ಅವರನ್ನು ಬಂಧಿಸಿ ಬ್ರುಸೆ ಜೈಲಿನಲ್ಲಿಟ್ಟಿತು. ಪತ್ನಿ ಜೆನ್ನಿ ಅವರನ್ನೂ ಜೈ ಹಾಕಲಾಯಿತು. ಆದರೆ ಸಾರ್ವಜನಿಕರ ಪ್ರಬ ಪ್ರತಿಭಟನೆಯಿಂದಾಗಿ ಬಿಡುಗಡೆ ಮಾಡಲಾಯಿ ನಂತರ ಮಾರ್ಕ್ಸ್ ಅವರು 1848ನೇ ಮಾಚ 5ರಂದು ಬ್ರುಸೆಲ್ಸ್‌ನಿಂದ ಬರಿಗೈಯಲ್ಲಿ ಪ್ಯಾರಿಸ ಬಂದರು. ಅಲ್ಲಿ ಒಂದು ವರ್ಷ ಕಳೆಯುವುದರೊಳಗ ಫ್ರಾನ್ಸ್ ಸರ್ಕಾರ ಮತ್ತೆ ಅವರನ್ನು ಗಡಿಪಾರು ಮಾಡಿ ನಂತರ ಮಾರ್ಕ್ಸ್ ಅವರು ಲಂಡನ್‌ಗೆ ಹೋಗಿ ಜೀವನಪ ಅಲ್ಲೇ ಉಳಿದರು. ಹಣದ ಕೊರತೆಯಿಂದ ಪ್ಯಾರಿಸ್‌ನ ಉಳಿದಿದ್ದ ಅವರ ಪತ್ನಿ ಮತ್ತು ಮಕ್ಕಳು 184 ಅಕ್ಟೋಬರ್‌ನಲ್ಲಿ ಲಂಡನ್‌ಗೆ ಬಂದು ಕಾರ್ಲ್ ಮಾಕ ಅವರನ್ನು ಸೇರಿದರು. ಹಣ ಇಲ್ಲದ ಕಾರಣ ಮಹಾಜ ಕಾರ್ಲ್ ಮಾರ್ಕ್ಸ್ ಮತ್ತು ಅವರು ಕುಟುಂಬ ಆಹ ಮತ್ತು ಆಸರೆಗೂ ಬಹಳ ಕಷ್ಟಪಟ್ಟಿತು. ಆದರೂ ಅವ ತಮ್ಮ ಆದರ್ಶ ಮತ್ತು ಕ್ರಾಂತಿಕಾರಿ ವಿಚಾರಧಾರೆಗೆ ಎಂ ಕುಂದುಂಟಾಗದಂತೆ ಬದುಕಿದರು.

ಅವರಿಗೆ ಅಧ್ಯಾಪಕರಾಗಲೂ, ಪತ್ರಿಕೆಗೆ ಬರೆಯ ಅವಕಾಶ ಸಿಗಲಿಲ್ಲ. ಬಹಳ ಕಷ್ಟಪಟ್ಟು ಬಾಡಿಗೆ ಪಡೆದರು. ಬಾಡಿಗೆ ಕೊಡುವುದಕ್ಕಾಗಿ ಮತ್ತು ದೈನಂ ಬದುಕಿಗೆ ಬೇಕಾದ ವಸ್ತುಗಳಿಗಾಗಿ ಮಾಡಿದ ಸ ತೀರಿಸುವುದಕ್ಕಾಗಿ, ಕೊರೆಯುವ ಚಳಿಯಲ್ಲಿ ಹಾಸಿಗೆಯ ಮಾರುವ ಪರಿಸ್ಥಿತಿ ಉಂಟಾಯಿತು. ಪುಟ್ಟ ಮಗು ಹೆನ್ರಿ ತೊಟ್ಟಿಲು ಮತ್ತು ಆಟಿಕೆ ಸಾಮಾನುಗಳನ್ನೂ ಸ ತೀರಿಸಲು ಕೊಡುವಂಥ ಪರಿಸ್ಥಿತಿ ಬಂದೊದಗಿತು. ಆದ ಮಾರ್ಕ್ಸ್ ದಂಪತಿ ಧೃತಿಗೆಡಲಿಲ್ಲ.

ಮಾರ್ಕ್ಸ್ ಅವರಿಗೆ 40 ವರ್ಷ ಆಗುವುದರೊಳಗ ಅವರ ಕೂದಲು ನೆರೆತಿತ್ತು. 50ನೇ ವರ್ಷ ಮುದುಕನಂತೆ ಕಾಣುತ್ತಿದ್ದರು. 1881ರ ಡಿಸೆಂಬರ್ 2ರ ಪತ್ನಿ ಜೆನ್ನಿ ತೀರಿಕೊಂಡರು. ನಾಲ್ಕೂ ಮಕ್ಕಳು ಅ ಮುಂದೆಯೆ ತೀರಿಕೊಂಡವು. ಎಲ್ಲವನ್ನು ಸಹಿಸಿಕೊ ಮಾನವಕುಲದ ಏಳಿಗೆಗಾಗಿ ಜೀವನವನ್ನೇ ಮುಡಿಪಾಗಿ ಕಾರ್ಲ್ ಮಾರ್ಕ್ಸ್ ಅವರು 1883ನೇ ಮಾರ್ಚ್ 14ರ ನಿಧನರಾದರು.

ಮಾರ್ಕ್ಸ್ ಅವರು ನೀಡಿದ ಸಂದರ್ಶನವೊಂದ ಅವರಿಗೆ ಕೇಳಿದ ಪ್ರಶ್ನೆಗಳಿಗೆ ಹೀಗೆ ಉತ್ತರಗಳನ್ನು ನೀಡಿ

"ನಿಮಗೆ ಪ್ರಿಯವಾಗಿರುವ ನಡತೆ?: ಸರಳತೆ.

ನಿಮ್ಮ ಮುಖ್ಯವಾದ ವಿಶೇಷ ಗುಣ?: ಉ ಸಾಧಿಸುವ ಛಲ.

ಸಂತೋಷ ಯಾವುದರಲ್ಲಿದೆ?: ಹೋರಾಡುವುದ

ದುರವಸ್ಥೆ ಯಾವುದು?: ತಲೆ ಬಾಗುವಿಕೆ.

ಅಸಹ್ಯವಾದ ದುರ್ಗುಣ ಯಾವುದು?: ... ಮನೋಭಾವ.

ನೆಚ್ಚಿನ ಹವ್ಯಾಸ?: ಓದುವುದು."

ಅತ್ಯಂತ ಕಷ್ಟದ ಸ್ಥಿತಿಯಲ್ಲಿಯೂ ಕಾರ್ಲ್ ಮಾ ಎದೆಗುಂದಲಿಲ್ಲ. ಗತಿತಾರ್ಕಿಕ ಭೌತಿಕವಾದ, ಐತಿಹಾ ಭೌತಿಕವಾದ, ದಾಸ್ ಕ್ಯಾಪಿಟಲ್, ಪ್ರಣಾಳಿಕೆ ಮುಂ ಜಗತ್‌ಪ್ರಸಿದ್ಧ ಗ್ರಂಥಗಳನ್ನು ರಚಿಸಿ ಮಾನವ ಕು ವಿಮೋಚನೆಗೆ ಶ್ರಮಿಸಿದರು. ಖಾಸಗಿ ಆಸ್ತಿ ಇರುವವರ ಮಾನವನ ವಿಮೋಚನೆ ಆಗುವುದಿಲ್ಲ ಎಂಬ ಸತ್ಯ ಸಾರಿ ವಿಶ್ವಕ್ಕೇ ಆದರ್ಶಪ್ರಾಯರಾದರು.

"ನಾವು ಮಾನವಕುಲದ ವ್ಯವಹಾರದ ಪಾಲುದಾರ ಎಂದು ಎಂಗೆಲ್ಸ್ ಅವರು ಮಾರ್ಕ್ಸ್ ಅವರಿಗೆ ಬ ಪತ್ರದಲ್ಲಿ ತಿಳಿಸಿದ್ದಾರೆ. ಹೀಗೆ ಬರೆಯಲು ಕಾರಣ ಕಾರ್ಲ್ ಮಾರ್ಕ್ಸ್ ಅವರಿಗೆ ಹಣದ ಕೊರತೆಯಾದಾಗ ಎಂಗೆಲ್ಸ್ ಹಣ ಕಳುಹಿಸುತ್ತಿದ್ದರು. ಒಂದು ಸಲ ಹ ಕೊರತೆ ಬಹಳೇ ಆಯಿತು. ಆಗ ಎಂಗೆಲ್ಸ್‌ಗೆ ಕೇ ಮಾರ್ಕ್ಸ್ ಪತ್ನಿ ಜೆನ್ನಿ ತಿಳಿಸಿದರು. ಆಗ ಎಂಗೆಲ್ಸ್‌ಗೆ ಬ ಪತ್ರದಲ್ಲಿ "ನಿಮಗೆ ಹಣ ಕೇಳುವುದಕ್ಕಿಂತಲೂ ನನ್ನ ಹ ಕತ್ತರಿಸಿಕೊಳ್ಳಬೇಕೆನಿಸುತ್ತದೆ" ಎಂದು ಮಾರ್ಕ್ಸ್ ನೋವು ವ್ಯಕ್ತಪಡಿಸಿದ್ದರು. ಆಗ ಎಂಗೆಲ್ಸ್ ಅವರು ಮಾರ್ಕ್ಸ್ ಅವರಿಗೆ ಪತ್ರ ಮುಖೇನ ಹೇಳಿದ್ದು ನಮಗೂ ಅನ್ವಯಿಸುವುದಿಲ್ಲವೆ?



● ರಂಜಾನ್ ದರ್ಗಾ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಭೀತಿ ಮತ್ತು ಪ್ರೀತಿಗಳ ದೇವರುಗಳು

ದೇವರ ಪರಿಕಲ್ಪನೆ ವಿಶ್ವದ ಬಹುತೇಕ ಸಂಸ್ಕೃತಿಗಳಲ್ಲಿ ...ಬವ ಮೂಲವೇ ಆಗಿದ್ದು, ನಂತರ ಅದನ್ನು ಸುಧಾರಿಸಿ ...ವಹ ಉದಾಹರಣೆಗಳು ಧಾರಾಳವಾಗಿ ಕಾಣುತ್ತದೆ. ...ನೆ ಭಾಷೆಯಲ್ಲಿ ಭಾರತೀಯರು ಎನ್ನುವುದಾದರೂ ...ಸೀಮೆ, ಸಂಸ್ಕೃತಿ, ಭಾಷೆ, ಜನಾಂಗವೇನೂ ಇಲ್ಲದ ...ನೆಲದ ವಿವಿಧ ನೆಲೆಗಳಲ್ಲಿ ದೇವರ ಕಲ್ಪನೆಗಳು ಅನೇಕ ...ಗಳಲ್ಲಿ ಉಂಟಾದವು. ಆದರೆ, ನಂತರ ರಾಜಕೀಯವಾಗಿ ...ಭೌಗೋಳಿಕವಾಗಿ, ಮಾತಾಡುವ ಭಾಷೆಯೂ ...ಮತೆ ಜನಗಣಗಳನ್ನು ಒಂದು ಮಾಡಿರುವ ಕಾರಣಕ್ಕಾಗಿ, ...ಯತೆಯ ಹೆಸರಿನಲ್ಲಿ ಅದಕ್ಕೂ ಮೀರಿ ಜಗತ್ತು ...ಬದ ಪರಿಕಲ್ಪನೆಯಲ್ಲಿ ಈ ವಿವಿಧತೆಗಳಲ್ಲಿ ಏಕತೆಯನ್ನು ...ವ ಪ್ರಯತ್ನವನ್ನು ಹಲವಾರು ದಿಕ್ಕುಗಳಿಂದ ...ಉತ್ತಿದ್ದರೂ ಸಾಧ್ಯವಾಗಿಲ್ಲ. ಬಹುಶಃ ಸಾಧ್ಯವಾಗುವುದೂ ...ನಿರ್ಧರ್ಮೀಯವಾಗಿ, ನಿಷ್ಪಂಪ್ರದಾಯವಾಗಿ ಏಕತೆಯನ್ನು ...ಸಲು ಸಾಧ್ಯವಾಗುವುದು ಜೀವಸೂಕ್ಷ್ಮವಾದ ...ಮೀಯ ನೆಲೆಗಟ್ಟಿನಿಂದ ಮಾತ್ರವೇ ಯೋಚಿಸಲು ...ರ್ಥವಾದಾಗ ಮಾತ್ರ.

...ಧರ್ಮ, ಸಂಪ್ರದಾಯ, ನಂಬಿಕೆ ಇತ್ಯಾದಿಗಳ ...ಲೆಯಲ್ಲಿ ದೇವರನ್ನು ಬಂಧಿಸಿ, ತಾವು ಸೃಷ್ಟಿಸಿದ ...ವನ್ನು ತಮ್ಮ ಸೃಷ್ಟಿಕರ್ತನನ್ನಾಗಿ ಮಾಡಿಕೊಂಡು, ತನ್ನ ...ರೂಪದಂತೆ ದೇವರು ತಮ್ಮನ್ನು ಸೃಷ್ಟಿಸಿದ ಎಂದು ...ಪ್ರತಿರೂಪವನ್ನು ಅವನಿಗೆ ಆರೋಪಿಸಿದ ಹೆಗ್ಗಳಿಕೆ ...ವ ಜನಾಂಗಕ್ಕಿದೆ.

...ಮಾನವನ ಶಕ್ತಿಯ ವಿಕಾಸ ಮತ್ತು ವಿಸ್ತರಣೆಯ ಮತ್ತು ...ರ್ಗದ ಭೀಕರತೆಗಳನ್ನು ಮಾನವನೇ ಅರಿಯುತ್ತಿದ್ದಂತೆ, ...ವನೇ ಇದನ್ನು ಒಂದು ತಹಬಂದಿಗೆ ತರಲು ...ತ್ತೊಂದು ಪರಿಕಲ್ಪನೆಯನ್ನು ಸೃಷ್ಟಿಸಿದ ಅಥವಾ ...ಮಾಗಿದ್ದ ದೇವರ ಪರಿಕಲ್ಪನೆಯನ್ನು ಗಟ್ಟಿಗೊಳಿಸಿದ.

...ಕಾಸವಾದ ಮಾನವನ ಬುದ್ಧಿಮತ್ತೆ

...ಭೌತಿಕವಾಗಿ ಮಾನವನ ಶಕ್ತಿಯ ವಿಕಾಸವಾದದ್ದೇನೂ ...ಕಾಣುವುದಿಲ್ಲ. ಸಹಸ್ರಾರು ವರ್ಷಗಳ ಹಿಂದೆ ...ತಹ ಮನುಷ್ಯನ ದೈಹಿಕ ಸಾಮರ್ಥ್ಯವನ್ನು ಅಥವಾ ...ಶಾರೀರಿಕ ಬಲದ ಉದಾಹರಣೆಗಳನ್ನು ಈಗಲೂ ...ಬಹುದು. ಆದರೆ ಜೀವನ ಪದ್ಧತಿ, ಆಹಾರ ಮತ್ತು ...ತೊಡುಗೆಗಳ ಪದ್ಧತಿಗಳು, ತಂತ್ರಜ್ಞಾನದ ಬಳಕೆಗಳು ...ಬಗೆಯಾಗಿ ಕಾಣುವುದಿಲ್ಲ. ಅದೇ ಹಳೆಯ ಬಗೆಯ ...ಗಳು, ಅವೇ ಕಣ್ಣುಗಳು, ಅವೇ ಕೈಗಳು, ಅವೇ ...ಗಳು, ಯಕೃತ್ತು ಇತ್ಯಾದಿ, ಆದರೆ ಅವುಗಳು ...ತ್ತಿರುವ ವಸ್ತುಗಳು, ಸೇವನೆಗಳು ಮತ್ತು ...ಯುತ್ತಿರುವ ಪೋಷಣೆಗಳಲ್ಲಿ ಧ್ರುವಾಂತರ ಮತ್ತು ...ಅಂತರಗಳ ವ್ಯತ್ಯಾಸಗಳನ್ನು ಕಾಣಬಹುದು. ಆಗಿಲ್ಲದ ...ಜ್ಞಾನ ಈಗಿದೆ. ಆಗಿಲ್ಲದ ಜೀವನಪದ್ಧತಿ ಈಗ ...ಯಲ್ಲಿದೆ. ಈಗ ನಾವು ಉಪಯೋಗಿಸುತ್ತಿರುವ, ...ಯೋಗಿಸುತ್ತಿರುವ ಆವಿಷ್ಕಾರದ ಫಲಗಳು ದೀರ್ಘ ...ಹಲವು ಜನಗಳ ಪ್ರಯತ್ನಗಳ, ತಪ್ಪು ಮತ್ತು ...ಗಳಿಂದ ರೂಪುಗೊಂಡಿರುವವೇ. ಹಾಗೆಯೇ ನಮ್ಮ ...ವಿನ ಪೀಳಿಗೆಗಳ ಬಳಕೆ ಮತ್ತು ಜೀವನ ಪದ್ಧತಿಯಲ್ಲಿ ...ಮುಂದುವರಿದ ಅಥವಾ ವಿಕಸಿತ ಬದಲಾವಣೆಗಳನ್ನು ...ವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

...ರೀತಿಯ ಬದಲಾವಣೆಗೆ ತಮ್ಮ ಬುದ್ಧಿ ಅಥವಾ ...ನ ಸಾಮರ್ಥ್ಯದ ಬಳಕೆಯೇ ಮತ್ತು ಅದರ ವ್ಯಾಪ್ತಿಯ ...ಬಳಕೆಯೇ ಕಾರಣವಲ್ಲದೇ ಬೇರೇನೂ ಅಲ್ಲ. ...ಮೇ ಚಿಂತನಾಕ್ರಮ ಮತ್ತು ವಿಚಾರ ಧಾಟಿಯೂ ...ಗುತ್ತಾ ಬಂದಿತು. ಆಗಿಲ್ಲದ ದೇವರು, ಧರ್ಮ, ...ಗಳು ಈಗೆಲ್ಲಿಂದ ಬಂದವು? ಅವು ಹೇಗೆ ...ಗದಂತಹ ಸತ್ಯವಾಯಿತು?

...ವ ದೇವರೂ, ಧರ್ಮವೂ ಈ ಜಗತ್ತಿನ ...ಅಂದ ಇರಲಿ, ಮನುಷ್ಯನ ಸೃಷ್ಟಿಯಿಂದಲೇ ಇರಲಿಲ್ಲ. ...ವಿಕಾಸದ ಯಾವುದೋ ಒಂದು ಹಂತದಲ್ಲಿ ...ಲೋಚನೆಗಳಿಂದ ಉತ್ಪನ್ನವಾದ ವಿಚಾರಗಳಿಂದ ...ಜಗತ್ತನ್ನು ಸೃಷ್ಟಿಸಿದನೆಂಬುದನ್ನು ಮನುಷ್ಯ ಹೇಗೆ ...ದ? ಕಾಣದ ದೇವರನ್ನು ಹೇಗೆ ಕಂಡ? ...ಬುದು ಗ್ರಹಿಸಿದ, ವಿಚಾರ ಮಾಡಿದ, ಕಲ್ಪಿಸಿಕೊಂಡ, ...ಸತ್ವ, ಸಾರ, ಶಕ್ತಿಗಳಿಗೆ ಆರೋಪಿಸಿದಂತಹ ...ನೆಯೇ ಹೊರತು ಎಂದಿಗೂ ಸಾಕಾರಸ್ಥಿತಿಯದಲ್ಲಿ ...ತಹ ಸತ್ಯವೇನಲ್ಲ. ಆದರೂ ವಿಕಾಸವಾಗಿಸಲು ...ದೇವರ ಮತ್ತು ಧರ್ಮವನ್ನು, ಭಿನ್ನ ಭೇದಗಳನ್ನು ...ಮಾಡುವ ಅವುಗಳ ಪ್ರಭಾವವು ಮನುಕುಲದ ...ಕಂಡೇ ಅದನ್ನು ಸುಧಾರಿಸಲು ಯತ್ನಿಸಿದರು. ...ವಾಗಿರುವ ಆ ನಿರಾಕಾರ ಮತ್ತು ಅಸಂಗತ

ಪರಿಕಲ್ಪನೆಗಳನ್ನು ಸರಳೀಕರಣಗೊಳಿಸಿ ತಮ್ಮ ಸಹಜೀವಿಗಳನ್ನು ಒಂದು ಮಾನವೀಯ ಮತ್ತು ಉದಾರವಾದ ನೆಲೆಗಟ್ಟಿಗೆ ತರಲು ಶ್ರಮಿಸಿದರು. ಆ ದೇವರ ಪರಿಕಲ್ಪನೆಗಳು ಜನಜೀವನದೊಳಗೆ ಅದೆಷ್ಟು ಹಾಸುಹೊಕ್ಕಾಗಿದ್ದವೆಂದರೆ, ಅವನ್ನು ನಿರಾಕರಿಸಿದರೆ, ಸುಧಾರಕರನ್ನೇ ತಿರಸ್ಕರಿಸುವ ಎಲ್ಲಾ ಸಾಧ್ಯತೆಗಳಿದ್ದವು. ಆದ್ದರಿಂದ ಆ ಪರಿಕಲ್ಪನೆಗಳನ್ನು ಸುಧಾರಿಸಲು, ತಮ್ಮ ಮುಂದುವರಿದ ಮತ್ತು ವಿಕಸಿತವಾದ ಚಿಂತನೆಗಳಿಂದ ವಿವರಿಸಲು, ಅರ್ಥ ನೀಡಲು ಪ್ರಯತ್ನಿಸಿದರು. ಜೀವಂತವಿರುವುದರ ಲಕ್ಷಣವೇ ಬೆಳವಣಿಗೆ ಮತ್ತು ವಿಕಾಸ. ಆದರೆ, ತಮ್ಮದೇ ಆದಂತಹ ಕಾರಣಗಳಿಂದ ಈ ವಿಕಾಸವನ್ನಾಗಲಿ, ಬೆಳವಣಿಗೆಯನ್ನಾಗಲಿ ಒಪ್ಪದ ಮೂಲಭೂತವಾದಿಗಳು ಅವರನ್ನೇ ನಾಶಗೊಳಿಸಿದರು ಅಥವಾ ಅವರ ನಂತರ ತಮ್ಮ ತೆಕ್ಕೆಗೇ ಅವರ ಚಿಂತನೆಗಳನ್ನೂ ಎಳೆದುಕೊಂಡು ಬಿಟ್ಟರು.

ದೇವರ ಸುಧಾರಕರು

ಕ್ರೈಸ್ತರ ದೇವರ ಪರಿಕಲ್ಪನೆಯ ಮೂಲ ಬ್ಯಾಬಿಲೋನಿಯನ್ನಿನ ಮಿಥಾಲಜಿಯ ಆಧಾರಿತ ವಿಚಾರಗಳಿಂದ ಮೂಡಿ, ಆದಮ, ಹವ್ವರಂತಹ ಆದಿ ಮಾನವರೂ ಮೊದಲ್ಗೊಂಡು







ಯಹೂದಿಗಳ ಸಾಂಪ್ರದಾಯಿಕ ನಂಬುಗೆಗೆ ಎಡೆ ಮಾಡಿತ್ತು. ಅವುಗಳು ವಿಕಸಿತವಾದ ಹಂತಗಳು ಈಗ ನಮಗೆ ಬೇಡ. ಆದರೆ, ಯೇಸು ಎಂಬ ಸಮಾಜಸುಧಾರಕ ಅವರ ಪರಿಕಲ್ಪನೆಗಳನ್ನು ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ, ತಾತ್ವಿಕವಾಗಿ ಸುಧಾರಿಸುವ ನಿಟ್ಟಿನಲ್ಲಿ ಮಾನವತೆಯ ಮತ್ತು ಔದಾರ್ಯದ ನೆಲೆಗಟ್ಟಿನ ಸಮಾಜದಲ್ಲಿ ಎಲ್ಲರನ್ನೂ ಒಂದುಗೂಡಿಸುವ ಪ್ರಯತ್ನ ಮಾಡಿದ.

ಈಗಲೂ ಬಹಳಷ್ಟು ಕ್ರೈಸ್ತರು ಉಪಯೋಗಿಸುವ ಶಬ್ಧ 'ಗಾಡ್ ಫಿಯರ್'. ದೇವರು ಎಂಬುವುದಕ್ಕೆ ಇಷ್ಟವಾಗದ್ದನ್ನು ಮಾಡದೇ ಹೋದರೆ ಅದರ ಆಗ್ರಹಕ್ಕೆ ಗುರಿಯಾಗುತ್ತೇವೆಂಬ ಪರಿಕಲ್ಪನೆ ಜನರು ನೈತಿಕವಾಗಿ ಬದುಕುವುದಕ್ಕೂ, ದುರ್ಮಾರ್ಗಿಗಳಾಗದೇ ಇರುವುದಕ್ಕೂ ಸಾಧ್ಯವಾಗುವುದಕ್ಕೆ ಸಹಾಯಕವಾದದ್ದು. ಉದ್ದೇಶ ಒಳ್ಳೆಯದೇ ಆದರೂ, ನಕಾರಾತ್ಮಕವಾದ ಅನುಸಂಧಾನದ ಬದಲಾಗಿ ಭೀತಿಯನ್ನು ಪ್ರೀತಿಗೆ ಬದಲಿಸಲು ಯೇಸು ಯತ್ನಿಸಿದ. ಭೀತಿಯನ್ನು ಪ್ರೀತಿಯನ್ನಾಗಿ ಬದಲಿಸುವುದೂ ಅತಿ ಉನ್ನತವಾದ ಕ್ರಾಂತಿಕಾರಕ ನಡೆಯೇ ಆಗಿತ್ತು. ನಿರಾಕಾರವಾಗಿರುವ ದೇವರನ್ನು ತಂದೆಯೆಂಬಂತೆ ಸಾಕಾರಗೊಳಿಸಿ, ಪ್ರೀತಿ ಮತ್ತು ವಾತ್ಸಲ್ಯಪೂರ್ಣವಾದ ತಂದೆಯಂತೆ ಅವನನ್ನು ಬಿಂಬಿಸಿ, ಅವನ ಇಷ್ಟಕ್ಕೆ ನಡೆದುಕೊಂಡು ಪ್ರೇಮಪೂರ್ಣ ಮತ್ತು ಔದಾರ್ಯಪೂರ್ಣವಾದ ಜನರ ಸಮಾಜವನ್ನು ಉಂಟುಮಾಡಲು ಯತ್ನಿಸಿದ. ಭೀತಿಯ ಸ್ಥಾನದಲ್ಲಿ ಪ್ರೀತಿಯು ಬಂದಿತಾದರೂ, ಧಾರ್ಮಿಕತೆಯಾಗಲಿ, ಸಾಂಪ್ರದಾಯಿಕ ಧೋರಣೆಗಳಾಗಲಿ ಅದನ್ನು ಒಪ್ಪಲು ತಯಾರಿರಲಿಲ್ಲ. ರಾಜಕೀಯಪ್ರೇರಿತ ಅಥವಾ ಸ್ವಸ್ಥಾನಕೇಂದ್ರಿತರಾಗಿದ್ದ ಅಂದಿನ ಪುರೋಹಿತರೇ ಯೇಸುವಿನ ವಿಚಾರಗಳನ್ನು ಅವನ ದೇಹ ಸಮೇತ ನಾಶ ಮಾಡಲು ಯತ್ನಿಸಿ ಸಫಲರೂ ಆದರು. ಆದರೆ ಕ್ರೈಸ್ತರಲಿ ಇಂದಿಗೂ ಪಾದ್ರಿಗಳೆಂಬ ಪುರೋಹಿತರು ಇದ್ದಾರೆ ಎಂಬುದು

ವಿಪರ್ಯಾಸವೋ, ಅವಶ್ಯಕವೋ, ವ್ಯಂಗ್ಯವೋ; ವಿಭಿನ್ನ ನೆಲೆಗಳ ವಿಶ್ಲೇಷಣೆಗಳಲ್ಲಿ ವಿಭಿನ್ನ ರೀತಿಗಳಲ್ಲಿ ವ್ಯಕ್ತವಾಗುತ್ತದೆ. ಆದರೆ ಆ ಪಾದ್ರಿಗಳು ಎಂತವರೆಂಬುದು ಧರ್ಮಾಧಾರಿತವಾದುದಲ್ಲ, ವ್ಯಕ್ತಿಗತವಾದದು. ಧರ್ಮದ ಲಾಂಛನದಡಿಯಲ್ಲಿ ತಮ್ಮ ಮಾನವೀಯ ಮತ್ತು ಉದಾರವಾದ ನೆಲೆಗಟ್ಟಿನ ಆಧಾರದಲ್ಲಿ ಧಾರ್ಮಿಕತೆಯನ್ನು ವಿವರಿಸುತ್ತಾರೆ ಮತ್ತು ಆಚರಿಸುತ್ತಾರೆ.

ಇರಲಿ, ಮುಂದೆ ಕ್ರೈಸ್ತ ಧರ್ಮದ ಅವತರಣವಾದ ಮೇಲೆ ಪಿತ, ಸುತ ಮತ್ತು ಪವಿತ್ರಾತ್ಮಗಳೆಂಬ ತ್ರಿಮೂರ್ತಿಯ ಪರಿಕಲ್ಪನೆಯಿಂದ ಸೈದ್ಧಾಂತಿಕವಾಗಿ ಮತ್ತಷ್ಟು ಸಂಕೀರ್ಣಗೊಂಡಂತಹ ವಿಷಯದ ಉಗಮವಾಯ್ತು. ತಮ್ಮನ್ನು ಪಾಪಿಯೆಂದು ನಕಾರಾತ್ಮಕ ಧೋರಣೆಯನ್ನೂ ಮತ್ತು ಪ್ರೀತಿಯೆಂಬ ಸಕಾರಾತ್ಮಕ ಧೋರಣೆಯನ್ನೂ ಒಟ್ಟೊಟ್ಟಿಗೇ ಸ್ವೀಕರಿಸಿದ್ದಾರೆ. ಒಂದು ವೇಳೆ ಯೇಸುವೆಂಬ ಸುಧಾರಕನು ತನ್ನ ವಿಷನ್ ಮತ್ತು ಮಿಷನ್‌ಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿದ್ದರೆ, ಇಂದು ಕ್ರೈಸ್ತಮತವೆಂಬುದೇ ಇರುತ್ತಿರಲಿಲ್ಲವೆಂದು ನನ್ನ ಗ್ರಹಿಕೆ. ಪಿತ, ಸುತ ಮತ್ತು ಪವಿತ್ರಾತ್ಮಗಳೂ ಇರುತ್ತಿರಲಿಲ್ಲ, ಆತನ ಸಾವಿನಾಧಾರಿತವಾದ ಆರಾಧನೆಗಳಾಗಲಿ, ಸಂಪ್ರದಾಯಗಳಾಗಲಿ ಇರುತ್ತಿರಲಿಲ್ಲ. ಪೂರ್ಣವಾಗಿ ಸಂಪಹಿಸದ ಯೇಸುವಿನ ವಿಚಾರಗಳ ಅಲ್ಪ ಗ್ರಹಿಕೆಗಳು ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರಗಳಾಗುತ್ತಾ ವಿಷಯಾಂತರವೇ ಆಗಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಇದೊಂದು ಉದಾಹರಣೆಯಷ್ಟೇ! ಯಾವುದೇ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಸುಧಾರಕನಿಗೆ ಹಲವಾರು ರಾಜಕೀಯ, ಸಾಮಾಜಿಕ ಅಡೆತಡೆಗಳಿದ್ದು ಅಷ್ಟು ಸುಲಭವಾಗಿ ಆತನ ದೃಷ್ಟಿಯಂತೆ ತನ್ನ ಮಿಷನ್‌ನನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ. ಸುಧಾರಕರ, ಹೋರಾಟಗಾರರ ವಿಫಲ ಮಿಷನ್‌ಗಳ ಮುಂದುವರಿಕೆಗಳೇ ಧರ್ಮಗಳಾಗುವವು. ಆದರೆ ಅವು ವಿಕಾಸಕ್ಕೆ ಮಾರ್ಗವಾಗದೇ, ಮಂಡೂಕಗಳ ಕೂಪಕ್ಕೆ ಮತ್ತೊಂದು ಕೊಡುಗೆಯಾಗುವುದು ಮನುಕುಲದ ದುರಾದೃಷ್ಟ. ಬುದ್ಧ ಆದಿನಾಥ, ಮಹಾವೀರ, ಮಹಮದ್, ನಾನಕ್, ಬಸವ, ಬಹಾಯ್ ಯಾರೇ ಆಗಲಿ ಇದರಿಂದ ಹೊರತಲ್ಲ.

ಬೆಳವಣಿಗೆ ಮತ್ತು ವಿಕಾಸದ ಹಾದಿಯಲ್ಲಿಯೇ ಇರುವ ಜಗತ್ತಿನಲ್ಲಿ ಹೊಸ ಪ್ರವಾದಿಗಳು, ತೀರ್ಥಂಕರರು ಹುಟ್ಟಲಾರರೇಕೆ? ಹುಟ್ಟಿದರೂ, ಘೋಷಿಸಿಕೊಂಡರೂ ಕೇಳುವವರಾರು? ಒಪ್ಪುವುದಾದರೂ ಹೇಗೆ ಸಾಧ್ಯ?

ಹಾಗೊಮ್ಮೆ ಯಾರಾದರೂ ವೈಚಾರಿಕವಾಗಿ, ಸೈದ್ಧಾಂತಿಕವಾಗಿ ಮುಂದಾದರೂ ಜನ ಸಮೂಹ ಅವನ ಚಿಂತನೆಗಳ ಧಾರೆಯನ್ನು ಮೆಚ್ಚುವುದಕ್ಕೆ ಇಚ್ಛಿಸುವುದಿಲ್ಲ. ತಮ್ಮ ಸಮಕಾಲೀನ ಯಾವುದೋ ಈ ವ್ಯಕ್ತಿಯನ್ನು ನಂಬಿಕೆಯ ಕೇಂದ್ರಕ್ಕೆ ಒಯ್ಯಲಾಗುವುದಿಲ್ಲ. ವಿಚಾರಗಳನ್ನು ಆಳಕ್ಕೆ ತೆಗೆದುಕೊಳ್ಳಲಾಗುವುದಿಲ್ಲ. ತಮ್ಮಂತೆ ಉಣ್ಣುವ, ಉಡುವಷ್ಟೇ ಮಾಡದೇ ಅತಿಮಾನುಷವಾದುದನ್ನು ಮಾಡಿದರೆ ಒಂದು ಹಂತಕ್ಕೆ ಒಪ್ಪಲು ಸಾಧ್ಯ! ಈ ಕಥೆ ಇಂದಿನದು ಮಾತ್ರವಲ್ಲ, ಅನಾದಿಕಾಲದಿಂದಲೂ ಹಾಗೆಯೇ ಇರುವುದು. ಹಾಗಾಗಿಯೇ ಎಂದೋ, ಯಾವುದೋ ಕಾಲದಲ್ಲಿ ಏನೋ ಮಾಡಿ ಸತ್ತವರಷ್ಟೇ ದೇವರಾಗುತ್ತಾರೆ.

ಈಗ ತಾನು ದೇವರೆಂದು ಘೋಷಿಸಿಕೊಂಡವರೆಲ್ಲಾ ಅಪಹಾಸ್ಯಕ್ಕೆ, ಟೀಕೆಗೆ ಅಥವಾ ವಿಮರ್ಶೆಗೆ ಗುರಿಯಾಗುತ್ತಾರೆ. ತಾನು ದೇವರೆನ್ನದೇ ಬರಿಯ ದೇವರ ಮಗನೆಂದು ಕರೆದುಕೊಂಡ ಕ್ರಿಸ್ತನಿಗೇ ಅಪಾಯ ತಪ್ಪಿರಲಿಲ್ಲ.

ಪುಟ್ಟಪರ್ತಿಯ ಸತ್ಯಸಾಯಿಬಾಬಾನ ಸಮಕಾಲೀನರಾದ ಮತ್ತು ಆತನ ವಿವಿಧ ವಿಷಯಗಳು ಸ್ಪಷ್ಟವಾಗಿ ತಿಳಿದಿರುವಂತಹ ಈ ನಮ್ಮ ಪೀಳಿಗೆಯು ಮುಗಿದ ಮೇಲೆ ಮುಂಬರುವ ಪೀಳಿಗೆಯೊಂದು ಆತನ ಎಲ್ಲಾ ಪ್ಲಸ್ ಮತ್ತು ಮೈನಸ್ಸುಗಳನ್ನು ವಿವಿಧ ರೀತಿಗಳಲ್ಲಿ ಅರ್ಥೈಸುತ್ತಾ, ಈಗಿನ ಕೃಷ್ಣನ ಪರಿಕಲ್ಪನೆಯ ರೀತಿಯಲ್ಲಿ ಒಂದು ದೇವರನ್ನಾಗಿ ಸ್ವೀಕರಿಸಬಹುದು. ದೇವರೆನ್ನುವ ಅಭೂತಪೂರ್ವವಾದ, ಅತ್ಯದ್ಭುತವಾದ ಪರಿಕಲ್ಪನೆಗೆ ಸೇರಿಕೊಳ್ಳಲು ಹಲವು ದಾರಿಗಳುಂಟು.

ಆರ್ಯರ ದೇವ ನಿರ್ಮಾಣ ಕ್ರಮಗಳು

ಹಿಂದೆಯೂ ತಾನೇ ದೇವನೆಂಬ ಬಗೆಯ ಸ್ವಘೋಷಣೆಗಳು ಇದ್ದಿರಲಿಕ್ಕೆ ಎಲ್ಲಾ ಸಾಧ್ಯತೆಗಳಿವೆ. ಆರ್ಯರಲ್ಲಿ ಆಗಾಗಲೇ ದೇವರಾಗಿದ್ದವರು ಶಕ್ತಿಯನ್ನು ವೃದ್ಧಿಸಿಕೊಳ್ಳಲು ಅಥವಾ ಶಕ್ತಿಹೀನರಾಗದಿರಲು ಯಾಗಾದಿಗಳ ಮೂಲಕ ರೀಫ್ಯೂವಲ್‌ನ್ನು ಬಯಸುತ್ತಿದ್ದರೆ, ಹೊಸ ದೇವತೆಗಳ ನಿರ್ಮಾಣಕ್ಕೂ ಯಾಗಾದಿಗಳನ್ನು ಬಳಸಲಾಗುತ್ತಿತ್ತು.

ಪುರೋಹಿತರು ತಮ್ಮ ಭೌತಿಕ ಹಿತಕ್ಕೋಸ್ಕರ ರಾಜರುಗಳನ್ನು ಓಲೈಸಿ ಅವರಿಗೆ ಪ್ರತ್ಯಕ್ಷ ದೈವತಾ ಎಂದು ಹೇಳಿ ಅವರನ್ನು ದೇವರನ್ನಾಗಿ ಮಾಡುವ ಸಂಗತಿಗಳೂ ಆಗ ಸಾಮಾನ್ಯವೇ ಆಗಿತ್ತು.

ಅಯೋಧ್ಯೆಯ ಶ್ರೀರಾಮನೂ ಹಾಗೆ ದೇವರಾದವರಲ್ಲಿ ಒಬ್ಬ. ಆಗಿನ ಮೂಲ ನಿವಾಸಿಗಳಿಗೆ ಆರ್ಯರ ನಡವಳಿಕೆಗಳಿಗೆ ವ್ಯತ್ಯಾಸವಾಗಿ ಕಾಣುವುದಷ್ಟೇ ಅಲ್ಲದೇ ಘನವಾಗಿಯೂ ಕಾಣುತ್ತಿತ್ತು. ತಮ್ಮ ವಿಚಾರಗಳಿಗಿಂತ ಅವರ ವಿದ್ಯೆ ಮತ್ತು ವಿಚಾರಗಳು ಶಿಸ್ತುಬದ್ಧವಾಗಿಯೂ, ಸೋಪಜ್ಞವಾಗಿಯೂ ಕಾಣುತ್ತಿತ್ತು. ಮೋಡಿ ಮಾಡುವಂತಹ, ತಮ್ಮದಕ್ಕೆ ಹೋಲಿಸಿದಾಗ ವಿಶಿಷ್ಟ ಎನಿಸುವಂತಹ ಅವರ ವಿದ್ಯೆ ಮತ್ತು ಸಂಸ್ಕಾರವನ್ನು ಇಲ್ಲಿನ ಮೇಲ್ವರ್ಗದವರು ತಮ್ಮದಾಗಿಸಿಕೊಳ್ಳುವ ಆಸಕ್ತಿ ಮತ್ತು ಆಸೆಯಿಂದ ಆರ್ಯ ಗುರುಗಳು ಸ್ಥಳೀಯರ ಅದರಲ್ಲೂ ಆಳುವ ವರ್ಗಗಳ, ಕುಲೀನರ ಗುರುಗಳಾದರು. ಹಾಗಾಗಿ ಹಣವಿರುವ, ಶಕ್ತಿಯಿರುವ ವರ್ಗದವರು ಇವರಿಗೆ ಪೋಷಕರಾದರು. ಇತರ ಒರಟ, ದೀನ ಅಥವಾ ಬಡವರು ಇವರಿಂದ ದೂರವೇ ಉಳಿಯಬೇಕಾಗಿರುವ ಪರಿಸ್ಥಿತಿ ನಿರ್ಮಾಣವಾಯಿತು.

ಕೆಲವು ದಶಕಗಳ ಹಿಂದೆ ಪಾಶ್ಚಾತ್ಯರ 'ಕ್ಲಾಸಿಕ್ ಶಿಸ್ತು' ಮತ್ತು ಸಂಸ್ಕಾರಗಳೂ ಇದೇ ರೀತಿಯ ಮೋಡಿಯನ್ನು ಮಾಡಿದ್ದರಿಂದಲೇ ಇಂಗ್ಲಿಷ್ ವಿದ್ಯೆಯ ಮೋಹ ನಮ್ಮಲ್ಲಿ ಪ್ರಾರಂಭವಾಗಿದ್ದು. ಇಂಗ್ಲಿಷ್ ಶಿಕ್ಷಣದಿಂದ ಹೊರತಾಗಿದ್ದ ಶ್ರೀಮಂತರು ಮತ್ತು ಮೇಲ್ವರ್ಗದವರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣವನ್ನು ಕೊಡಿಸುತ್ತಿದ್ದರು. ಇಂಗ್ಲಿಷ್ ಶಿಕ್ಷಣ ಬಡವರಿಗಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿತ್ತು. ಈಗಲೂ ಆ ಮಧ್ಯಮ ವರ್ಗದವರಲ್ಲೂ ಇಂಗ್ಲಿಷ್ ಹಿರಿಮೆಯ ಮತ್ತು ಹೆಗ್ಗಳಿಕೆಯ ವಿಚಾರವೇ ಆಗಿದೆ. ಹಾಗಾಗಿಯೇ ಮಾತೃ ಭಾಷಾ ಶಿಕ್ಷಣವು ಸಾಮಾನ್ಯ ಜನಬೆಂಬಲವನ್ನು ಪಡೆಯುವುದೇ ಇಲ್ಲ.

ಅಂತೆಯೇ ಯುದ್ಧ ವಿದ್ಯೆಯನ್ನು, ಇತರ ಸಂಸ್ಕಾರವನ್ನು ರಘುವಂಶದ ರಾಮನು ತನ್ನ ಆಚಾರ್ಯರಿಂದ ಪಡೆಯುತ್ತಿದ್ದಾಗ, ಆಚಾರ್ಯರ ವಿರುದ್ಧವಾಗಿ ನಡೆಯುವ ಯಾವ ಬಂಡಾಯಗಳನ್ನೂ ಅವನು ಸಹಿಸದೇ ಬಗ್ಗು ಬಡಿಯುತ್ತಿದ್ದನು. ಇದೇ ಜಾಡಿನಲ್ಲಿ ಮುಂದುವರಿದ ರಾಜಕುಮಾರ ರಾಮಚಂದ್ರನು ಮುಂದೆ ಶ್ರೀರಾಮನಾಗಿ ಆಚಾರ್ಯ ಪುರೋಹಿತರಿಂದ ಪೂಜಿಸಲ್ಪಟ್ಟ. ಅವನನ್ನೂ ದೈವತ್ವದ ಪಟ್ಟಕ್ಕೆ ಒಯ್ಯುವಂತಹ ಪ್ರಯತ್ನಗಳು ನಡೆದವು. ನಂತರ ಆ ದೇವರುಗಳ ಯಾದಿಯಲ್ಲಿ ಸೇರಿಯೂ ಹೋದ.

ದೇವರನ್ನಾಗಿಸುವುದು ದೈವತ್ವದ ಪಟ್ಟ ಇತ್ಯಾದಿಗಳು ಆರ್ಯರ ಪ್ರಾಯೋಗಿಕ ರಾಜಕೀಯ. ಶಕ್ತಿಶಾಲಿ ಅನಾರ್ಯರೆಲ್ಲರೂ ದೇವರಾದರು. ಗಣಪತಿ, ಕೃಷ್ಣ ಇತ್ಯಾದಿ ವ್ಯಕ್ತಿಗಳು. ಯಾಕೆಂದರೆ ಆರ್ಯರಿಗೆ ಅವರನ್ನು ಎದುರು ಹಾಕಿಕೊಂಡು ಬಾಳ್ವೆ ನಡೆಸುವುದು ಸಾಧ್ಯವಾಗುತ್ತಿರಲಿಲ್ಲ. ಅದರಿಂದ ಅವರನ್ನು ಓಲೈಸಲು ಅಥವಾ ತಮ್ಮವರಲ್ಲಿ ಅವರನ್ನು ಒಬ್ಬರನ್ನಾಗಿಸಿಕೊಳ್ಳಲು ಮಾಡಿದಂತಹ ತಂತ್ರಗಳಲ್ಲಿ ಕಟ್ಟ ಕಡೆಯದು ದೇವರನ್ನಾಗಿ ಮಾಡಿ ಸ್ವೀಕರಿಸುವುದು.

ಬೇಡರ ಬುಡಕಟ್ಟಿನವನಾಗಿದ್ದಿರಬಹುದಾದ, ಅರಣ್ಯಕನಾದ, ಅನಾರ್ಯನಾದ ಶಿವನು ದೇವರಂತೆ ಆರ್ಯರಿಂದ ಸ್ಥಾನ ಪಡೆದು ಆರಾಧಿಸಲ್ಪಟ್ಟರೂ, ಆತನು ಸ್ವಯಂ ಮಹಾದೇವನಾದ ಪ್ರಕ್ರಿಯೆಗಳ ಅಧ್ಯಯನ ಬಹಳ ಆಸಕ್ತಿಕರವಾದದ್ದು. ಅದನ್ನು ಮುಂದೆ ತಿಳಿಯೋಣ. ■


ನಮೋ ಯಕ್ಷಗಾನಕ್ಕೆ ಮೋಹನನ ಭಾಗವತಿಕೆ




'ಅಭಿವೃದ್ಧಿ' ಭಜನೆ, 'ಮೇಕ್ ಇನ್ ಇಂಡಿಯಾ' ಹರಿಕಥೆ, 'ಸ್ವಚ್ಛತಾ' ಹೋಮ, 'ಹಿಂದೂ' ಮೈಕಲ್ ಜಾಕ್‌ಸನ್ ರಾಕ್ ಶೋ ವಗೈರೆ ವಗೈರೆ ವಿವಿಧ ವಿನೋದಾವಳಿಗಳಿಂದ ಕೂಡಿದ ನಮೋ ಯಕ್ಷಗಾನದಿಂದ ಸಮ್ಮೋಹಿನಿಗೊಳಗಾಗಿರುವ ಜನರ ಮಧ್ಯದಲ್ಲಿ ಎದ್ದುಕಾಣುವವರೆಂದರೆ ಫಾರಿನ್‌ನಲ್ಲಿ ಆರಾಮಾಗಿರುವ ಎನ್ನಾರೈಗಳು. 'ಬುಲೆಟ್ ರೈಲು', 'ಸ್ಮಾರ್ಟ್ ಸಿಟಿ'ಯಂತಹ ನೀರ ಮೇಲಣ ಗುಳ್ಳೆಗಳನ್ನು ನಿಜವೆಂದು ನಂಬಿ ಭ್ರಮಾಲೋಕದಲ್ಲಿ ತೇಲುವವರಿವರು. ವಾಸ್ತವಲೋಕದಲ್ಲಿ ಕಾರ್ಪೋರೇಟುಗಳು, ವಾಣಿಜ್ಯೋದ್ಯಮಿಗಳಂಥವರಿಗೆ 'ಅಚ್ಛೇ ದಿನ್'ಗಳು ಬರುತ್ತಿದ್ದರೆ ಭಾರತದ ಬಹುಸಂಸ್ಕೃತಿಯ ಮೇಲೆ 'ಬುರೇ ದಿನ್'ಗಳ ಕಾರ್ಮೋಡ ಕವಿಯುತ್ತಿದೆ. 'ಹಿಂದೂ ರಾಷ್ಟ್ರ'ದ ಕನಸು ಕಾಣುತ್ತಿರುವ ಸಂಘ ಪರಿವಾರ ಅದನ್ನು ನನಸಾಗಿಸಲು ಶತಾಯಗತಾಯ ಪ್ರಯತ್ನಿಸುತ್ತಿರುವುದು ನಿಚ್ಚಳವಾಗಿದೆ. ಅದರ ಗುಪ್ತ ಕಾರ್ಯಸೂಚಿಗಳು ಎಲ್ಲಿಲ್ಲದ ವೇಗ ಪಡೆದುಕೊಳ್ಳುತ್ತಿವೆ. ಅದರ ವಿವಿಧ ಪದಾಧಿಕಾರಿಗಳ, ಅಂಗಸಂಸ್ಥೆಗಳ ದಾರ್ಷ್ಟ್ಯ ಮೇರೆ ಮೀರುತ್ತಿದೆ. ಇವರ ಅಲ್ಪಸಂಖ್ಯಾತ ವಿರೋಧಿ ಹೇಳಿಕೆ, ಕಾರ್ಯಾಚರಣೆ ಮತ್ತು ದಾಳಿಗಳನ್ನು ನಿಯಂತ್ರಿಸುವವರಿಲ್ಲದಂತಾಗಿದೆ.

ಮೋದಿ ಸರ್ಕಾರದಡಿ ಭಾರತದ ಪ್ರಜಾಸತ್ತೆಯ ವಿವಿಧ ಅಂಗಗಳು ನಿಧಾನಕ್ಕೆ, ಒಂದೊಂದಾಗಿ ತಮ್ಮ ಸ್ವಾಯತ್ತತೆಯನ್ನು, ಕೆಲವು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ. ಕಾರ್ಪೋರೇಟ್‌ಗಳಿಗೆ ಕೆಂಪುಗಂಬಳಿ ಹಾಸಿ ದೇಶದ ನೆಲ, ಜಲ, ತೈಲ, ಅನಿಲ, ಖನಿಜ, ಮಾನವ ಸಂಪನ್ಮೂಲ ಎಲ್ಲವನ್ನೂ ಅವರ ಪರತ್ತುಗಳಿಗೆ ಅನುಗುಣವಾಗಿ ಅವರ ಕಾಲಬುಡಕ್ಕೆ ಸುರಿಯಲಾಗುತ್ತಿದೆ. ಇನ್ನೊಂದೆಡೆ ಮುಂದಿನ ಪೀಳಿಗೆಗಳನ್ನು 'ಹಿಂದೂ ರಾಬಾಟ್'ಗಳಾಗಿಸಲು ಸಕಲ ಸಿದ್ಧತೆ ನಡೆಯುತ್ತಿದೆ. ಶಾಲಾ ಪಠ್ಯಕ್ರಮಗಳು ಬದಲಾಗುತ್ತಿವೆ: ಸಂಸ್ಕೃತ ಸಪ್ತಾಹ, ಹಿಂದಿ ದಿವಸ್ ಇತ್ಯಾದಿಗಳು ಈಗಾಗಲೆ ಶುರುವಾಗಿವೆ. ಸದ್ಯದಲ್ಲೆ ಗೀತಾಬೋಧನೆ ಆರಂಭಗೊಂಡರೂ ಅಚ್ಚರಿಯಿಲ್ಲ. ಇತಿಹಾಸದ ತಿರುಚುವಿಕೆಗೆ ಚಾಲನೆ ದೊರೆತಿದೆ. ಆರ್ಯರು ಭಾರತದ ಮೂಲನಿವಾಸಿಗಳು, ಮಿಕ್ಕವರೆಲ್ಲರೂ ಹೊರಗಿನಿಂದ ಬಂದವರು, ಆರ್ಯ ಸಂಸ್ಕೃತಿ ವಿಶ್ವದ ಅತ್ಯಂತ ಪುರಾತನ ಮತ್ತು ಅತ್ಯಂತ ಶ್ರೇಷ್ಠ ಸಂಸ್ಕೃತಿ, ಅದು ಅನ್ಯ ಸಂಸ್ಕೃತಿಗಳನ್ನು ಪ್ರಭಾವಿಸಿದೆ ಎಂಬ ಸುಳ್ಳನ್ನು ಸತ್ಯವಾಗಿಸುವ ಪ್ರಯತ್ನ ಆರಂಭವಾಗಿದೆ. ಈ 'ಮಹತ್ಕಾರ್ಯ'ವನ್ನು ಜಾತಿಪದ್ಧತಿಯ ಸಮರ್ಥಕನೂ ಸಾಮಾಜಿಕ ಅನಿಷ್ಟಗಳಿಗೆ ಮುಸ್ಲಿಮರ ಆಳ್ವಿಕೆಯೇ ಕಾರಣವೆಂದು ಹೇಳುವವನೂ ಆದ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ಮುಖ್ಯಸ್ಥ ವೈಎಸ್ ರಾವ್ ಸಹಕಾರದೊಂದಿಗೆ ದೆಹಲಿ ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗಕ್ಕೆ ವಹಿಸಲಾಗಿದೆ.

ಇದೀಗ ಆರೆಸ್ಸೆಸ್‌ನ ಸರಸಂಘಚಾಲಕನಿಗೆ ವಿಜಯದಶಮಿ ದಿನದಂದು ಸರ್ಕಾರದ ಅಧಿಕೃತ ಪ್ರಸಾರಾಂಗವಾದ ದೂರದರ್ಶನದಲ್ಲಿ ದೇಶವನ್ನುದ್ದೇಶಿಸಿ ಮಾತನಾಡುವ ಅವಕಾಶವೂ ಲಭಿಸಿದೆ. ಆರೆಸ್ಸೆಸ್ ಹೇಳಿಕೇಳಿ ಭಾರತವನ್ನು ಮತಾಧಾರಿತ ದೇಶವಾಗಿ ಪರಿವರ್ತಿಸಲು ಹವಣಿಸುತ್ತಿರುವ ಸಂಘಟನೆ. ಗಾಂಧಿ ಹತ್ಯೆ ಜೊತೆ ಥಳಕು ಹಾಕಿಕೊಂಡ ಅದು ಈಗಾಗಲೆ ಎರಡೆರಡು ಬಾರಿ ನಿಷೇಧಕ್ಕೊಳಗಾಗಿದೆ. ಮಾತ್ರವಲ್ಲ ದೇಶಾದ್ಯಂತ ಕೋಮು ಗಲಭೆಗಳನ್ನು ಹುಟ್ಟುಹಾಕಿರುವ, ಬಾಂಬ್ ಸ್ಫೋಟ ನಡೆಸಿರುವ ಆರೋಪಗಳನ್ನೆದುರಿಸುತ್ತಿದೆ. ಆರೆಸ್ಸೆಸ್‌ನ ದ್ವೇಷದ ಗುರು ಗೋಲ್ವಲ್ಕರ್, ಜಾತಿಪದ್ಧತಿಯನ್ನು ಎತ್ತಿಹಿಡಿಯುವ ಮನುವನ್ನು "ವಿಶ್ವದ ಪ್ರಪ್ರಥಮ ಹಾಗೂ ಅತಿ ಶ್ರೇಷ್ಠ ಕಾನೂನು ರಚನಾಕಾರ"ನೆಂದು ಕೊಂಡಾಡಿದಾತ. ಆರೆಸ್ಸೆಸ್‌ನ ನಿಷ್ಠೆ ಮನುಸ್ಮೃತಿಗೇ ಹೊರತು ಸಂವಿಧಾನಕ್ಕೆ ಅಲ್ಲ. ಈ ಮನುಸ್ಮೃತಿ ರಚಿಸಲ್ಪಟ್ಟಿರುವುದು ಮುಸ್ಲಿಮರು ಭಾರತಕ್ಕೆ ಕಾಲಿಡುವುದಕ್ಕೂ ಮೊದಲು. ಆದರೆ ಈಗ ಭಾಗವತ್ ಮತ್ತಾತನ ಚೇಲಾಗಳು ಭಾರತದಲ್ಲಿರುವವರೆಲ್ಲ ಹಿಂದೂಗಳೆಂದೂ ಜಾತಿಪದ್ಧತಿ ಮತ್ತು ಜಾತ್ಯಾಧಾರಿತ ದೌರ್ಜನ್ಯಗಳೆಲ್ಲ ಮುಸ್ಲಿಮರ ಆಕ್ರಮಣಗಳ ಪರಿಣಾಮವಾಗಿ ಹುಟ್ಟಿಕೊಂಡದ್ದೆಂದೂ ಹಸಿಹಸಿ ಸುಳ್ಳು ಹೇಳಲಾರಂಭಿಸಿದ್ದಾರೆ. ಇದು ದಲಿತ, ಹಿಂದುಳಿದ ವರ್ಗಗಳನ್ನು ಪೂರ್ತಿಯಾಗಿ ಸಂಘ ಪರಿವಾರದ ತೆಕ್ಕೆಗೆ ತೆಗೆದುಕೊಳ್ಳುವ ಹುನ್ನಾರವೆಂ[...] ತಪ್ಪಾಗಲಾರದು. ಇಂಥಾ ಒಂದು ಮಹಾ ಜಾತಿವಾ[...] ಮತೀಯವಾದಿ, ಕೋಮುವಾದಿ, ಸಂವಿಧಾನ ವಿರೋ[...] ಸಂಘಟನೆಗೆ ನಮ್ಮನಿಮ್ಮೆಲ್ಲರ ತೆರಿಗೆ ದುಡ್ಡಿನಲ್ಲಿ ನಡೆಯ[...] ದೂರದರ್ಶನದಲ್ಲಿ ಅವಕಾಶ ಹೇಗೆ, ಯಾರಿಂದ, ಯಾ[...] ಸಿಕ್ಕಿತು? ಸಹಜವಾಗಿಯೇ ವಿಜಯದಶಮಿಯಂ[...] ಮಾತನಾಡುವವರು ನಾಳೆ ಈದ್, ಕ್ರಿಸ್ಮಸ್, ಬೈಸ[...] ಮೊದಲಾದ ದಿನಗಳಂದೂ ಮಾತನಾಡುವರೇ ಎ[...] ಪ್ರಶ್ನೆಗಳು ಉದ್ಭವಿಸಲಿವೆ. ಸರ್ಕಾ[...] ಜಾತ್ಯತೀತವಾಗಿರಬೇಕೆಂದು ಸಂವಿಧಾನ ಸ್ಪಷ್ಟವಾಗಿ ಹೇಳು[...] ಇದರರ್ಥ ಯಾವುದೇ ಮತಧರ್ಮವನ್ನು ಓಲೈಸಬಾರ[...] ಪ್ರೋತ್ಸಾಹಿಸಬಾರದು. ನೂರು ದಿನಗಳ ಹಿಂದೆ ಸಂವಿಧಾ[...] ಮೇಲೆ ಕೈ ಇರಿಸಿ ಪ್ರಮಾಣವಚನ ಸ್ವೀಕರಿಸಿರುವ[...] ಜಾತ್ಯತೀತ ಮೌಲ್ಯಗಳನ್ನು ಇಷ್ಟು ಬೇಗ ಮರೆತರೆ[...] ದೇಶದ ಪ್ರಜಾಸತ್ತೆ, ಸಂವಿಧಾನ ಮತ್ತು ಬಹುಸಂಸ್ಕೃತಿಗ[...] ಗಂಭೀರ ಅಪಾಯ ಎದುರಾಗಿದೆ ಎಂದಲ್ಲವೇ?





ಮಂಗಳಯಾನಕ್ಕೆ ಮಂಗಳಾರತಿ

ರವಿಕುಮಾರ್ ಹಾಸನರವರು ಶೋಧಿಸಿ ಹೊರಹಾಕಿದ ಮಂಗಳಯಾನದ ಹೆಗ್ಗಳಿಕೆ ಹೊತ್ತವರ ಹುಳುಕುಗಳು ನಮ್ಮೆಲ್ಲರನ್ನ ಮರುಚಿಂತನೆಗೊಳಪಡಿಸುವಂತಿದೆ. ಅನಕ್ಷರಸ್ಥ ಮುಗ್ಧನಿಗಿಂತ ಅಕ್ಷರಸ್ಥ ಮೂಢ ಬಹಳ ಅಪಾಯಕಾರಿ ಎನ್ನುವಂತೆ ಅಕ್ಷರಸ್ಥರಲ್ಲೇ ಅದರಲ್ಲೂ ವಿಜ್ಞಾನಿ- ಸಂಶೋಧಕರುಗಳೆಂದೆನಿಸಿ ಕೊಂಡವರುಗಳಲ್ಲೇ ಈ ಮೌಢ್ಯಗಳು ಅಧಿಕ. ಇದು ನನ್ನ ಅನುಭವದ ಮಾತು. ಉದಾಹರಣೆಗೆ ಜನಸಾಮಾನ್ಯನೊಬ್ಬ ವಾಸ್ತು ಜೋತಿಷ್ಯ ಇವನ್ನೆಲ್ಲ ಮುಗ್ಧತೆಯಿಂದ ತೆಗೆದುಕೊಂಡರೆ ಮೂಢ ಅಕ್ಷರಸ್ಥ ಯಾ ವಿಜ್ಞಾನಿಯೊಬ್ಬ ತನ್ನದೇ ಮೊಂಡು ವಾದದಿಂದ ಅದನ್ನು ಸಮರ್ಥಿಸಿಕೊಂಡು ಮೌಢ್ಯವನ್ನು ಮತ್ತಷ್ಟು ಗಟ್ಟಿಗೊಳಿಸುತ್ತಾನೆ. ಸಂಶೋಧನೆಗಳ ಮೂಲಕ ಗರ್ಭದೊಳಗಿನ ಕೂಸು ಹೊರಗಿನ ಶಬ್ದಗಳಿಗೆ ಸ್ಪಂದಿಸುವುದು ಸಾಬೀತಾದರೆ ಇದನ್ನೇ ಆಧರಿಸಿಕೊಂಡು ಅಭಿಮನ್ಯುವಿನ ಕಥೆ ಸತ್ಯ ಎಂದು ವಾದಿಸುತ್ತಾರೆ. ಇಲ್ಲಿ ಸ್ಪಂದನೆಗೂ ಶಾಲೆಯಲ್ಲಿ ಕೇಳಿದಂತೆ ಪಾಠ ಕೇಳುವುದಕ್ಕೂ ಇರುವ ವ್ಯತ್ಯಾಸ ಗಣನೆಗೇ ಬರುವುದಿಲ್ಲ. ಭಾಷಾ ಜ್ಞಾನವೇ ಇಲ್ಲದ ಭ್ರೂಣಾವಸ್ಥೆಯ ಅಭಿಮನ್ಯು ಚಕ್ರವ್ಯೂಹ ಬೇಧನೆಯ ಜಟಿಲ ಹಾಗು ಸುದೀರ್ಘವಾದ ಕಥೆಯನ್ನೇ ಹೊಟ್ಟೆಯಲ್ಲಿದ್ದುಕೊಂಡು ಕೇಳಿ ಅರ್ಥೈಸುವುದಕ್ಕೂ ಮಾಮೂಲಿ ಜೈವಿಕ ಸ್ಪಂದನೆಗೂ ಅಜಗಜಾಂತರ ವ್ಯತ್ಯಾಸವಿದೆ. ಆದರೆ ಅದನ್ನು ಅವರು ಉದ್ದೇಶಪೂರ್ವಕವಾಗಿ ಮರೆಮಾಚುತ್ತಾರೆ. (ಗಣಪತಿ ತಲೆಕಸಿಯನ್ನೂ ಸತ್ಯ ಎನ್ನುವವರಿದ್ದಾರೆ. ಆದರೆ ಮೈ ಮಣ್ಣಿನಿಂದ ಮಾಡಿದಂತ ಪುಟ್ಟ ಬಾಲಕನ ಕುತ್ತಿಗೆಗೂ ಆನೆಯೊಂದರ ಕುತ್ತಿಗೆಗೂ ಕಸಿಯೆಂದರೆ ಕತ್ತರಿಸಿದ ಪಡುವಲಕಾಯಿ ಮೇಲೆ ಕುಂಬಳಕಾಯಿ ಇಟ್ಟಂತೆ ಹೊಂದದ ವಿಚಾರ ಎನ್ನುವುದು ಯಾರಿಗೂ ಇಲ್ಲಿ ಬೇಕಿಲ್ಲ)

ಒಂದೆರಡು ತಿಂಗಳ ಹಿಂದೆ ಕನ್ನಡ ನ್ಯೂಸ್ ಚಾನೆಲ್ ಒಂದರಲ್ಲಿ ಸಂಜೀವಿನಿ ಗಿಡ ಹಿಮಾಲಯದಲ್ಲಿ ಸಿಕ್ಕ ಬಗ್ಗೆ ಚರ್ಚೆ ನಡೆಯುತ್ತಿತ್ತು, ಅದರಲ್ಲಿ ಸಂಶೋಧಕ ಜೀ.ವಿ.ಗಣೇಶಯ್ಯನವರು ಹನುಮಂತ ಟನ್‌ಗಟ್ಟಲೆ ತೂಕಕ್ಕೂ ನಿಲುಕದ ಮರಗಿಡಗಳುಳ್ಳ ಸಂಜೀವಿನಿ ಪರ್ವತವನ್ನೇ ಹೊತ್ತು ಹಿಮಾಲಯ ಟು ಲಂಕೆ ಮತ್ತೆ ತಿರುಗಿ ಲಂಕೆ ಟು ಹಿಮಾಲಯ ಹಾರಿದ್ದು ಉತ್ಪ್ರೇಕ್ಷೆಯ ಮಾತು ಎಂದರೆ ಮತ್ತೊಬ್ಬ ಸಂಶೋಧಕ ಸೆಲ್ವಪಿಳ್ಳೆ ಅಯ್ಯಂಗಾರ್ ಎನ್ನುವಾತ ಅದನ್ನು ಸಾರಾ ಸಗಟಾಗಿ ಅಲ್ಲಗಳೆದು ತನ್ನದೇ ಮೊಂಡುವಾದಗಳ ಮೂಲಕ ಅದು ಅಕ್ಷರಶಃ ನಡೆದಂತಹ ಸತ್ಯಸಂಗತಿ ಎಂದು ತರ್ಕಿಸಿ ಗಣೇಶಯ್ಯನವರ ಬಾಯಿ ಮುಚ್ಚಿಸಿದ್ದ. ಯಾಕೆಂದರೆ ಅಯ್ಯಂಗಾರ್ ರಾಮಾಯಣ ಗ್ರಂಥದ ಸಾಕ್ಷಿ ಹೇಳಿದರೆ ಅದು ಹಾಗಲ್ಲ ಎಂದು ಹೇಳಲು ಗಣೇಶಯ್ಯನವರು ಸ್ವತಃ ಹನುಮಂತನನ್ನೇ ಹುಡುಕಿ ಕರೆತರಬೇಕಿತ್ತೇ ವಿನಃ ಹುಂಬರ ನಡುವೆ ಅವರ ಮಾತಿಗಲ್ಲಿ ಬೆಲೆ ಇರಲಿಲ್ಲ.

- ರವಿ ಪುತ್ತೂರು, ದ.ಕ.



ಅಮ್ಮ-ಉಪ್ಪು ತಿಂದ ಮೇಲೆ ಅಮ್ಮ-ನೀರು ಕುಡಿಯಲೇ ಬೇಕು!

ತಮಿಳುನಾಡಿನಲ್ಲಿ ಜಯಲಲಿತಾ ಜಾರಿಗೆ ತಂದ ಅಮ್ಮ-ಇಡ್ಲಿ, ಅಮ್ಮ-ದೋಸೆ, ಅಮ್ಮ-ಟಿವಿ, ಅಮ್ಮ-ಉಪ್ಪು, ಅಮ್ಮ-ನೀರು ಇವೆಲ್ಲ ತುಂಬಾ ಜನಪ್ರಿಯವಾಗಿದ್ದವು. ಹಾಗಾಗಿ ಕೆಲವರು ಹೇಳುತ್ತಿರುವ ಹೊಸ ಗಾದೆಯೆಂದರೆ 'ಅಮ್ಮ-ಉಪ್ಪು ತಿಂದ ಮೇಲೆ ಅಮ್ಮ-ನೀರು ಕುಡಿಯಲೇ ಬೇಕು'!

ಜಯಲಲಿತಾ ಜೈಲಿಗೆ ಹೋದನಂತರ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವಾಗ ಪನ್ನೀರ್‌ಸೆಲ್ವನ್ ಗೊಳೋ ಎಂದು ಅತ್ತದ್ದರಿಂದ ಅವರಿಗೆ ಕಣ್ಣೀರ್-ಸೆಲ್ವನ್ ಎಂಬ ಅಡ್ಡ ಹೆಸರು ಬದ್ದಿದೆಯಂತೆ. ಜಯಲಲಿತಾ ಮುಖ್ಯಮಂತ್ರಿಯಾಗಿರುವಾಗ ಅಮ್ಮ-ಇಡ್ಲಿ, ಅಮ್ಮ-ದೋಸೆ ಜನಪ್ರಿಯವಾದುದರಿಂದ ಈಗ ಪನೀರ್‌ಸೆಲ್ವನ್ ಮುಖ್ಯಮಂತ್ರಿಯಾದ ನಂತರ ಪನೀರ್-ಮಸಾಲ, ಪನೀರ್-ಟಿಕ್ಕಾ, ಪನೀರ್-ಮಕ್ಕನಿ ಮುಂತಾದ ಮೊಘಲೈ ಡಿಷ್‌ಗಳು ತಮಿಳುನಾಡಿನಲ್ಲಿ ಜನಪ್ರಿಯವಾಗಬಹುದು ಎಂಬುದು ವಿರೋಧಿಗಳ ಕುಹಕ.

ಭಾರತೀಯರಲ್ಲಿ ವ್ಯಕ್ತಿಪೂಜೆ ಮಾಡುವ ಪ್ರವೃತ್ತಿ ಪುರಾಣಕಾಲದಿಂದಲೂ ರಕ್ತಗತವಾಗಿದೆ. ಹಾಗಾಗಿಯೇ ಪುರಾಣ ಕಾಲದಲ್ಲಿ ಸಣ್ಣ ಪುಟ್ಟ ಸಾಧನೆ ಮಾಡಿದ ರಾಜರೆಲ್ಲ ಇಂದು ರಾಮ-ಕೃಷ್ಣ ದೇವರೆಂದು ನಮ್ಮಿಂದ ಪೂಜೆಗೊಳ್ಳುತ್ತಿದ್ದಾರೆ. ಸಚಿನ್ ತೆಂಡೂಲ್ಕರ್‌ನನ್ನು ದೈವತ್ವಕ್ಕೇರಿಸಿದಂತಹ ಮಾನಸಿಕತೆಯೇ ಜಯಲಲಿತಾ ಜೈಲಿಗೆ ಹೋದಾಗ ಹದಿನಾರು ಜನರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣ.

ಯಾರೋ ಸಂಖ್ಯಾ ಶಾಸ್ತ್ರಿಯ ಸಲಹೆಯಂತೆ ಒಂಬತ್ತು ವರ್ಷಗಳ ಹಿಂದೆ ಜಯಲಲಿತಾ ತನ್ನ ಹೆಸರಿನ ಇಂಗ್ಲಿಷ್ ಸ್ಪೆಲ್ಲಿಂಗ್ ಬದಲಾಯಿಸಿದ ನಂತರ ಅದೇ ವರ್ಷ ಅಧಿಕಾರ ಕಳೆದುಕೊಂಡರು. ಈಗ ಅದಕ್ಕಿಂತ ಹೆಚ್ಚಿನ ಕಷ್ಟ ಅನುಭವಿಸುತ್ತಿದ್ದಾರೆ. ಯಡಿಯೂರಪ್ಪ ಸಹ ಒಬ್ಬ ನ್ಯೂಮರಾಲಾಜಿಸ್ಟ್‌ನ ಸಲಹೆಯಂತೆ ತನ್ನ ಹೆಸರಿನ ಇಂಗ್ಲಿಷ್ ಸ್ಪೆಲ್ಲಿಂಗ್ ಬದಲಾಯಿಸಿದ ಎರಡೇ ತಿಂಗಳಲ್ಲಿ ಅಧಿಕಾರ ಕಳೆದುಕೊಂಡರು. ಇದರ ಅರ್ಥ ಇಷ್ಟೆತ್ತಾರು ಇಂಗ್ಲಿಷ್ ಅಕ್ಷರ ಆಧಾರಿತ ನ್ಯೂಮರಾಲಾಜಿ ಶುದ್ಧ ಬೊಗಳೆ. ಭಾರತೀಯ ಅದೃಷ್ಟ ದೇವತೆಗೆ ಕೇವಲ ಇಂಗ್ಲಿಷ್ ಅಕ್ಷರ ಮಾತ್ರ ಓದಲು ಬರುತ್ತದೆ ಹಾಗೂ ಆ ಹಿಂದೂ ದೇವತೆಗೆ ಯಾವುದೇ ಭಾರತೀಯ ಭಾಷೆ ಓದಲು ಬರುವುದೇ ಇಲ್ಲ ಎಂದು ನಂಬುವಷ್ಟು ವಿವೇಕಹೀನರು ನಾವು ಭಾರತೀಯರು. ಇಂಗ್ಲಿಷ್ ಓದಲು-ಬರೆಯಲು ಬಾರದ ಒಬ್ಬ ಹಳ್ಳಿಗನ ಹೆಸರಿನ ಸ್ಪೆಲ್ಲಿಂಗ್ ನಾವು ಬದಲಾಯಿಸಿದ ಕೂಡಲೇ ಅವನ ಅದೃಷ್ಟ ಬದಲಾಯಿಸಿ ಬಿಡುತ್ತದೆಯೇ? ಆ ನಿರಕ್ಷರಿಗೆ ಇಂಗ್ಲಿಷ್ ಓದಲು ಬಾರದಿದ್ದರೂ ಅದೃಷ್ಟ ದೇವತೆಗೆ ಇಂಗ್ಲಿಷ್ ಮಾತ್ರ ಓದಲು ಬರುವುದರಿಂದ ಆ ಭಾರತೀಯ ನಿರಕ್ಷರಿಯ ಅದೃಷ್ಟ ಖುಲಾಯಿಸುತ್ತದೆಯೇ?

ಭ್ರಷ್ಟಾಚಾರಕ್ಕಾಗಿ ಜಯಲಲಿತಾ ಜೈಲಿಗೆ ಹೋಗಿರುವುದು ಕೇವಲ ಹಿಮ ಪರ್ವತದ ಒಂದು ತುದಿ ಅಷ್ಟೇ. ಜಯಲಲಿತಾಗಿಂತ ಹೆಚ್ಚು ಭ್ರಷ್ಟರಾಗಿರುವ ಇನ್ನೂ ನೂರಾರು ರಾಜಕಾರಣಿಗಳು ನಮ್ಮ ಭಾರತದ ಎಲ್ಲಾ ರಾಜ್ಯಗಳಲ್ಲಿ ಮಜವಾಗಿದ್ದಾರೆ. ಯಾಕೆಂದರೆ ಅವರ ಹಿಂದೆ ಸುಬ್ರಹ್ಮಣ್ಯ ಸ್ವಾಮಿಯಂತಹ ಮನುಷ್ಯ ಬಿದ್ದಿಲ್ಲ. ಕರ್ನಾಟಕದ ಒಬ್ಬ ರಾಜಕಾರಣಿ 1978 ರಲ್ಲಿ ಕೇವಲ ಒಂದು ಸೆಕೆಂಡ್-ಹ್ಯಾಂಡ್ ಫಿಯಟ್ ಕಾರಿನಲ್ಲಿ ತಿರುಗುತ್ತಿದ್ದವರು ಈಗ ಬೆಂಗಳೂರಿನ ಪದ್ಮನಾಭ ನಗರದಂತಹ ಇಡೀ ಉಪನಗರವನ್ನೇ ಕೊಂಡುಕೊಂಡಿರುವ, ಹಲವು ಫೈವ್‌ಸ್ಟಾರ್ ಹೋಟೆಲುಗಳು, ಹೈ-ಟೆಕ್ ಆ[...] ಪೆಟ್ರೋಲ್ ಬಂಕ್, ಸಾವಿರಾರು ಎಕರೆ ಭೂಮಿ[...] ಒಡೆತನ ಹೊಂದಿರುವಷ್ಟು ಭ್ರಷ್ಟಾಚಾರ ಮಾಡಿದ್ದ[...] ಕಾನೂನಿನ ಕೈಗೆ ಸಿಕ್ಕಿ ಬಿದ್ದಿಲ್ಲ! ನಿತಿನ್ ಗಡ್ಕರಿ, ಮುಲಾಂ[...] ಮಾಯಾವತಿ, ಶರದ್ ಪವಾರ್ ಇವರೆಲ್ಲ ಜಯಲಲಿತಾ[...] ಹೆಚ್ಚು ತಿಂದಿದ್ದರೂ ಸಿಕ್ಕಿ ಬಿದ್ದಿಲ್ಲ. ಸ್ವತಃ ಸುಬ್ರ[...] ಸ್ವಾಮಿ ತನ್ನ ಜನತಾ ಪಾರ್ಟಿಯನ್ನು ವಿಜಯ ಮಲ[...] ಕೋಟ್ಯಾಂತರ ರೂಪಾಯಿಗೆ ಮಾರಿಕೊಂಡು ಭ[...] ಹಣಮಾಡಿ ಕೊಂಡಿದ್ದಾನೆ.

ಸಿಕ್ಕಿ ಬಿದ್ದವ ಮಾತ್ರ ಕಳ್ಳ, ಸಿಕ್ಕಿ ಬೀಳದವರು ಸ[...] ಎಂದೇನೂ ಭಾವಿಸಬೇಕಿಲ್ಲ. ಆದುದರಿಂದ ಉಪ್ಪು ತಿಂ[...] ನೀರು ಕುಡಿಯಲೇಬೇಕು ಎಂಬ ಗಾದೆ ಭಾರತಿ[...] ಭ್ರಷ್ಟ ರಾಜಕಾರಣಿಗಳಿಗೆ ಅನ್ವಯವಾಗುವುದಿಲ್ಲ. ಭಾರತ[...] ಉಪ್ಪು ತಿಂದ ಹೆಚ್ಚಿನವರು ತುಪ್ಪ ತಿಂದ[...] ಸುಖವಾಗಿರುತ್ತಾರೆ.


- ಗಿರೀಶ್ ಟಿ ಕದಂದಲೆ, ಬೆಂಗಳೂ[...]

ಜಯಲಲಿತಾಗೇನೋ ಶಿಕ್ಷೆಯಾಯಿತು ಸರಿ. ಆ[...] ಕಾದ್ದೆ. ಆದರೆ ಈ ಶಿಕ್ಷೆಗೆ ಜಯಲಲಿತಾಳಷ್ಟೇ ಅ[...] ಆಕೆಗಿಂತಲೂ ಹೆಚ್ಚು ಅರ್ಹತೆ ಗಳಿಸಿರುವ [...] ರಾಜಕಾರಣಿಗಳೂ ಇದ್ದಾರಲ್ಲ... ಅವರೆಲ್ಲರಿಗೂ [...] ಆಗಬೇಕು. ಆಗ ಮಾತ್ರ ಈ ದೇಶಕ್ಕೆ ಮುಕ್ತಿ...

-ವೀರಭ್ಯಾತಯ್ಯ, ಬೆಂಗಳೂ[...]

ವಿವಿಐಪಿಗಳನ್ನು ಕುಣಿಸಿದ ಕಾನೂನು ಕುಣಿಕೆ


ಪ್ರಾಕೃತಿಕ ಸಂಪನ್ಮೂಲಗಳಿಂದ ಹಿಡಿದು ಮಾ[...] ಸಂಪನ್ಮೂಲಗಳವರೆಗೆ ಎಲ್ಲವೂ ಭರ್ಜರಿ ಇದ್ದೂ[...] ದೇಶ ಅಭಿವೃದ್ಧಿ ಸಾಧಿಸದಿರುವುದಕ್ಕೆ ಇಲ್ಲಿನ ಭ್ರಷ್ಟಾಚಾ[...] ಮೂಲಕಾರಣ. ಅಧಿಕಾರಸ್ಥರು ಮತ್ತು ಅವರ ಹ[...] ಬಳಸಿಕೊಳ್ಳುವವರು ಏನೇ ಮಾಡಿದರೂ [...]



ನಡೆಯುತ್ತದೆಂಬ ಕಾನೂನಿನ ಭಯ ಇಲ್ಲದಿರುವಿ[...] ಭ್ರಷ್ಟಾಚಾರ ತಾಂಡವವಾಡುತ್ತಿದೆ. ಲಾಲೂ-ಜಯ[...] ರಂತಹ ಬಹುತೇಕ ರಾಜಕಾರಣಿಗಳು ವ[...] ಅಭಿವೃದ್ಧಿಯನ್ನು ಬದಿಗಿಟ್ಟು ಬಹಿರಂಗವಾಗಿ [...]

ಅಂಬರೀಶ್ ಎಂಬ ಕನ್ವರ್ ಲಾಲ್





ಅಂಬರೀಶ್ ಯಾಕೆ ಕನ್ನಡದ ಪ್ರಮುಖ ನಟ ...ಬ ಪ್ರಶ್ನೆಯ ಬೆನ್ನತ್ತಿ ಹೊರಟಾಗ 'ಅಂತ', ...ಕ್ರವ್ಯೂಹ', 'ಇಂದ್ರಜಿತ್', 'ಮಸಣದ ಹೂವು', ...ಲವಿನ ಉಡುಗೊರೆ', 'ಹೃದಯ ಹಾಡಿತು', 'ಮಣ್ಣಿನ ...ೋಣಿ', 'ಸೋಲಿಲ್ಲದ ಸರದಾರ', 'ಸಪ್ತಪದಿ', ...ಂಡ್ಯದ ಗಂಡು' ತರಹದ ಚಿತ್ರಗಳು ಉತ್ತರವಾಗಿ ...ುತ್ತವೆ. ಈ ಬಗೆಯ ಚಿತ್ರಗಳನ್ನು ಜ್ಞಾಪಿಸಿಕೊಂಡು ...ಬರೀಶ್ ಅವರ ಬಗ್ಗೆ ಆಲೋಚಿಸಿದಾಗ ಒಂದು ...ಷ್ಟಿಯಕಾರಿ ಜಗತ್ತು ಕಣ್ಣೆದುರು ನಿಲ್ಲುವುದು ಸುಳ್ಳಲ್ಲ.

ಈ ನಟ ಕೇವಲ ಅರವತ್ತೆರಡು ವರ್ಷಕ್ಕೇ ಈ ... ಕಳೆಗುಂದಿ ಹೋದದ್ದು ನೋವಿನ, ಬೇಜಾರಿನ ...ಷಯ; ಅಂಬರೀಶ್ ಕುಡಿತ ಕಮ್ಮಿ ಮಾಡಿದ್ದರೆ... ...ರೇಟು ಬಿಟ್ಟಿದ್ದರೆ ಇನ್ನೂ ಒಂದಷ್ಟು ಕಾಲ ...ಮಕನಿಂದಿರಬಹುದಿತ್ತು; ಅಂಬರೀಶ್ ತರಹದ ...ಲ್ಲಾ ಸವಲತ್ತುಗಳಿರುವ ಮಂದಿ ಮುಪ್ಪು?, ...ನಾರೋಗ್ಯ ಅಸಹಾಯಕತೆಗಳನ್ನೆಲ್ಲ ಎದುರಿಸುತ್ತಾ ...ುಕುವುದು ಭೀಕರವಾದದ್ದು. ಹಾಗೆಯೇ ಮತ್ತೆ ...ದಲಿನಂತೆ ಪುಟಿದೇಳುವುದು ಅಷ್ಟೇ ...ೀಮಾಂಚಕಾರಿ ಸಂಗತಿ.

ಅಂಬರೀಶ್ ಯಾರಿಗೆ ತಾನೇ ಗೊತ್ತಿಲ್ಲ? ಇವರದೇ ...ಮ ಇಮೇಜ್ ಕನ್ನಡಿಗರ ಮನಸ್ಸಿನಲ್ಲಿದೆ. ನಿರ್ದೇಶಕ ...ಪಿಸಿದ ಪಾತ್ರವೇ ತಾವಾಗಿ ಜನರೆದುರು ತಮ್ಮೊಳಗಿನ ...ವಿದನನ್ನು ತೆರೆದುಕೊಳ್ಳುವುದು ಇವರ ಗುರಿಯಾಗಿತ್ತು. ...ಭದಲ್ಲಿ ವಿಲನ್ ಪಾತ್ರಗಳಲ್ಲಿ ನಟಿಸಿದ ಅಂಬರೀಶ್ ...ನಂತರ ಎಲ್ಲಾ ಬಗೆಯ ಪಾತ್ರಗಳಿಗೂ ಒಗ್ಗಿಕೊಳ್ಳಬಲ್ಲ ...ಮರ್ಥ್ಯ ಹೊಂದಿದರು. ಅವರು ಸ್ವೀಕರಿಸಿದ ಚಾಲೆಂಜ್ ...ವುದೆಂದರೆ, ಸಾಧ್ಯವಾದಷ್ಟು ಆಕ್ಷನ್ ಚಿತ್ರಗಳಲ್ಲಿ ...ಚುತ್ತಾ ಅಭಿಮಾನಿವಲಯದಲ್ಲಿ ತಮ್ಮ ಇಮೇಜನ್ನೂ ಕಾಪಾಡಿಕೊಳ್ಳುತ್ತಾ ಸಾಂಸಾರಿಕ ಕತೆ, ಪ್ರೇಮಕತೆಗಳಲ್ಲೂ ನಟಿಸಿ ಸೈ ಎನ್ನಿಸಿಕೊಂಡು ವರ್ಸಟೈಲ್ ನಟ ಎನ್ನಿಸಿಕೊಳ್ಳುವುದು. ಅವರು 'ಒಲವಿನ ಉಡುಗೊರೆ' ಮಾಡುವ ಮೊದಲು ಆಕ್ಷನ್ ಹೀರೋ ಎಂದೇ ಬಿಂಬಿತರಾಗಿದ್ದವರು; ಡಿ.ರಾಜೇಂದ್ರಬಾಬು ನಿರ್ದೇಶನದ 'ಒಲವಿನ ಉಡುಗೊರೆ' ಚಿತ್ರದಲ್ಲಿ ಫೈಟಿಂಗ್ ದೃಶ್ಯಗಳಿಗಿಂತಲೂ ಭಾವನಾತ್ಮಕ ದೃಶ್ಯಗಳಿಗೆ ಹೆಚ್ಚು ಮಹತ್ವವಿತ್ತು. ಆ ನೆಪದಲ್ಲಿ ಹೊಸ ಅಂಬರೀಶ್ ನಮಗೆ ಸಿಕ್ಕಿದರು. ಆಮೇಲೆ 'ಬಜಾರ್ ಭೀಮ', 'ನ್ಯೂ ಡೆಲ್ಲಿ', 'ಇನ್ಸ್‌ಪೆಕ್ಟರ್ ಕ್ರಾಂತಿಕುಮಾರ್', 'ಅಜಿತ್' ತರಹದ ಚಿತ್ರಗಳ ನಡುವೆಯೇ ಅಂಬರೀಶ್ 'ಪೂರ್ಣಚಂದ್ರ' ಚಿತ್ರದಲ್ಲಿ ನಟಿಸಿ ಬೆರಗು ಮೂಡಿಸಿದರು. ಪ್ರೇಕ್ಷಕರನ್ನು ಒಮ್ಮೆಲೇ ತಮ್ಮ ಹೊಡೆದಾಟದ ದೃಶ್ಯಗಳ ಮೂಲಕ, ಪಂಚಿಂಗ್ ಡೈಲಾಗ್ಸ್ ಮೂಲಕ ರಂಜಿಸುತ್ತಿದ್ದ ಅಂಬರೀಶ್, ಮರುಕ್ಷಣವೇ ಭಾವನಾತ್ಮಕವಾಗಿ ಪರಿಣಮಿಸಿ ಅದೇ ಪ್ರೇಕ್ಷಕರ ಕಣ್ಣಲ್ಲಿ ನೀರು ತರಿಸುತ್ತಿದ್ದರಲ್ಲದೆ, ಹೃದಯವನ್ನು ಮೆತ್ತಗೆ ಮಾಡಿಬಿಡುತ್ತಿದ್ದರು. 'ಒಡಹುಟ್ಟಿದವರು' ಚಿತ್ರದ ತುಂಬಿದ ಕುಟುಂಬದಲ್ಲಿನ ಆದರ್ಶ ತಮ್ಮನಾಗಿ ಕಾಣುವುದು, 'ಪುಕ್ಸಟ್ಟೆ ಗಂಡ ಹೊಟ್ಟೆ ತುಂಬ ಉಂಡ' ಚಿತ್ರದಲ್ಲಿ ನಕ್ಕು ನಲಿಸುವುದು, 'ಚಕ್ರವ್ಯೂಹ'ದ ನಾಯಕನ ಕೆಚ್ಚೆದೆಯ, ಬಂಡಾಯದ ಗುಣವನ್ನು ಸಮರ್ಥವಾಗಿ ನಿಭಾಯಿಸುವುದು, 'ಶ್ರೀ ಮಂಜುನಾಥ'ದ ದೊರೆಯ ಗಾಂಭೀರ್ಯತೆ, 'ದಿಗ್ಗಜರು' ಚಿತ್ರದಲ್ಲಿನ ಸ್ನೇಹಮಯಿ ವ್ಯಕ್ತಿತ್ವ- ಇದ್ದು ಒಂದಿಷ್ಟು ಮೆಲುಕು.

ಅಂಬರೀಶ್ ಬಿಂದಾಸ್ ಮನುಷ್ಯ, ಸ್ನೇಹಕ್ಕೆ, ಸಹಾಯಹಸ್ತಕ್ಕೆ ಹೆಸರಾದ ಅಂಬರೀಶ್ ಕರ್ನಾಟಕ ಕಂಡ ಅಪರೂಪದ ನಟ. ಅಂಬರೀಶ್ ಅವರ ಮೈಕಟ್ಟು, ಧ್ವನಿ, ನೇರವಂತಿಕೆ, ಮುಕ್ತ ಮನಸ್ಸೇ ಅವರ ವ್ಯಕ್ತಿತ್ವ. ಅವರ ವ್ಯಕ್ತಿತ್ವ ಮತ್ತು ಅವರು ನಿರ್ವಹಿಸುತ್ತಿದ್ದ ಪಾತ್ರಗಳ ನಡುವೆ ಸಂಬಂಧ ಬೆಸೆದು ಯಾವುದೇ ನಾಟಕೀಯತೆಗೆ ದಾರಿ ಮಾಡಿಕೊಡದೆ ಸಹಜ ಕಲಾವಿದರನ್ನಾಗಿ ರೂಪಿಸಿದ್ದು ಸುಳ್ಳಲ್ಲ. ಚಿತ್ರವೊಂದರಲ್ಲಿ ನಾಯಕನ ಜವಾಬ್ದಾರಿ ಎಷ್ಟಿರುತ್ತದೆ ಎಂಬುದಕ್ಕೆ ಒಂದು ಉದಾಹರಣೆ: ನಿರ್ದೇಶಕನ ಆಣತಿಯಂತೆ ಯಾವುದೋ ಶಾಟ್‌ನಲ್ಲಿ ಅಳಬೇಕಾಗಿ ಬಂದಾಗ ನಟನಾದವನು ಪಾತ್ರದ ಭಾವನೆಗಳನ್ನು, ಅದರ ಆಳದ ಮಿಡಿತಗಳನ್ನು ಜೀರ್ಣಿಸಿಕೊಂಡು ಆ ಪಾತ್ರವು ತಾನೇ ಆಗುವ ಮೂಲಕ ಪರವಶತೆ ಕಾಯ್ದುಕೊಂಡು ಅಳಬೇಕಾಗುತ್ತದೆ ಅಥವಾ ತನ್ನ ಬದುಕಿನಲ್ಲಿ ಅಂಥದೊಂದು ದಾರುಣ ಸಂದರ್ಭ ಎದುರಾಗಿದ್ದರೆ ತಾನು ಹೇಗೆ ಅದಕ್ಕೆ ಪ್ರತಿಕ್ರಿಯಿಸುತ್ತಿದ್ದೆ ಎಂಬುದನ್ನು ಊಹಿಸಿಕೊಂಡು, ತನ್ನೊಳಗಿನ ಮಾನವೀಯ ಸಂವೇದನೆ ಜಾಗೃತವಾಗುವಂತೆ ನೋಡಿಕೊಂಡು ಅಳಬೇಕಾಗುತ್ತದೆ ಅರ್ಥಾತ್ ನಟಿಸಬೇಕಾಗುತ್ತದೆ. ಆತನ ಅಳು, ಅಭಿವ್ಯಕ್ತಿ ಮುಖದಲ್ಲಾಗುವ ಬದಲಾವಣೆಗಳು ಪಾತ್ರಕ್ಕೆ, ಆ ಸಂದರ್ಭಕ್ಕೆ, ಆ ದೃಶ್ಯದ ಆ ಶಾಟ್‌ಗೆ ಎಷ್ಟು ಪೂರಕ ಎನ್ನಿಸುವುದರ ಜೊತೆಗೆ ಮನುಷ್ಯನ ಆಳದಲ್ಲಿ ಅಡಗಿರಬಹುದಾದ ಸಹಜ ಭಾವನೆಗಳ ತೀವ್ರತೆ ಅಲ್ಲಿ ಪ್ರತಿಬಿಂಬಿತವಾಗುತ್ತದೆ; ಆ ಮೂಲಕ ನೋಡುಗನಲ್ಲಿ ಸಂವೇದನೆ, ಭಾವ ತೀವ್ರತೆ ಉಂಟುಮಾಡುತ್ತದೆ. ಒಬ್ಬ ನಟನಿಗಿರಬೇಕಾದ ಇಂತಹ ಸೂಕ್ಷ್ಮತೆಗಳು ಅಂಬರೀಶ್‌ರಲ್ಲಿದ್ದವು; ಕನ್ನಡದ ಮಟ್ಟಿಗೆ ರಾಜಕುಮಾರ್ ಈ ವಿಷಯದಲ್ಲಿ ಅಗ್ರಗಣ್ಯರು.

ದಿನಗಳೆದಂತೆ ಅಂಬರೀಶ್ ಅವರನ್ನು ಸಪ್ಪೆ ಮಾಡತೊಡಗಿದ್ದು ಅವರ ರಾಜಕೀಯದ ಸೆಳೆತ ಮತ್ತು ಲಿಮಿಟ್ಟಿಲ್ಲದ ಕುಡಿತ ಎಂಬುದು ಕೂಡ ಕೌತುಕಮಯವಾದದ್ದು. 'ಮುಂಜಾನೆಯ ಮಂಜು', 'ಮಿಡಿದ ಹೃದಯಗಳು', 'ಎಂಟೆದೆ ಭಂಟ', 'ಸಪ್ತಪದಿ', 'ಒಂಟಿ ಸಲಗ'ದಂತಹ ಚಿತ್ರಗಳ ಮೇರುತನ, ಪಕ್ವತೆ ಮತ್ತು ಲವಲವಿಕೆಗಳ ಜಾಗವನ್ನು 'ಅಣ್ಣಾವ್ರು', 'ವೀರ ಪರಂಪರೆ', 'ಕಠಾರಿವೀರ ಸುರಸುಂದರಾಂಗಿ', 'ವಾಯುಪುತ್ರ', 'ರಣ' ತರಹದ ಚಿತ್ರಗಳಲ್ಲಿನ ಖಾಲಿತನ, ಅಪೂರ್ಣತೆ, ಅಸಂಬದ್ಧತೆ, ಮಂದಮಯ ವಾತಾವರಣ ಇವೆಲ್ಲಾ ಕವಿದುಕೊಂಡಿದ್ದವು. ಯಾರ ಕಾಂಬಿನೇಶನ್ನಿನಲ್ಲಿ ಬೇಕಾದರೂ ಸಮರ್ಥವಾಗಿ ನಟಿಸಬಲ್ಲೆ ಎಂಬ ಉತ್ಸಾಹದಿಂದಾಗಿ 'ತಂದೆಗೆ ತಕ್ಕ ಮಗ' ಎಂಬ ಚಿತ್ರದಲ್ಲಿ ಉಪೇಂದ್ರರ ಜೊತೆ ನಟಿಸಿ ತಾವೂ ಜಡ್ಜ್‌ಮೆಂಟಿಗೆ ಸಿಗದಂತಾದರು; ತಮಿಳಿನ ಸೂಪರ್ ಹಿಟ್ ಸಿನಿಮಾ 'ದೇವರ್ ಮಗನ್' ಕನ್ನಡದಲ್ಲಿ ಸೋಲುವಂತಾಯಿತಲ್ಲದೆ ಶಿವಾಜಿ ಗಣೇಶನ್ ಮಾಡಿದ್ದ ಅದ್ಭುತ ಪಾತ್ರ ಪ್ರಶ್ನೆಯಾಗಿ ಕಾಡಿತ್ತು. ಇದರೊಂದಿಗೆ ಯಾವ್ಯಾವ ಪಾತ್ರಗಳನ್ನು ಮಾಡಬೇಕು? ಮಾಡಿದರೂ ಈ ಜಮಾನದಲ್ಲಿ ಯಾರ್‍ಯಾರ ಕಾಂಬಿನೇಶನ್ ತಮಗೆ ಸರಿಹೊಂದುತ್ತದೆ ಎಂಬುದರ ಬಗ್ಗೆ ಅಂಬರೀಶ್ ಆಳದಲ್ಲಿ ಧ್ಯಾನಿಸದ ಹಾಗೆ ಮಾಡಿತ್ತು.

ಸಿನಿಮಾ ಜಗತ್ತಿನಾಚೆಗೆ ರಾಜಕೀಯವಾಗಿ ತಮ್ಮನ್ನು ತೊಡಗಿಸಿಕೊಂಡ ಅಂಬರೀಶ್ ಲೋಕಸಭಾ ಸದಸ್ಯರಾಗಿ, ವಿಧಾನಸಭಾ ಸದಸ್ಯರಾಗಿ, ಸಚಿವರಾಗಿ ಕೆಲಸ ಮಾಡಿದವರು. ಆಳದಲ್ಲಿ ಸಮಾಜಕ್ಕೆ ಏನಾದರು ಸೇವೆ ಸಲ್ಲಿಸಬೇಕೆಂಬ ತುಡಿತ ಹೊಂದಿದ್ದರೂ ಪ್ರಾಕ್ಟಿಕಲ್ಲಾಗಿ, ಅಧಿಕಾರಯುತವಾಗಿ ಜನಸೇವೆ ಮಾಡುವಲ್ಲಿ ಅಂಬರೀಶ್ ಅಷ್ಟು ಪಳಗಿದವರು ಎನ್ನಿಸಲೇ ಇಲ್ಲ; ಕಾಂಗ್ರೆಸ್ ಹಾಗೂ ಜನತಾ ದಳ ಪಾರ್ಟಿಗಳಲ್ಲಿ ಗುರುತಿಸಿಕೊಂಡು ಕರ್ನಾಟಕ ರಾಜಕಾರಣದ ದ್ವಂದ್ವಕ್ಕೆ ಸಾಕ್ಷಿಯಾದರಲ್ಲದೇ ಮಂಡ್ಯ ಜನತೆ ತಮ್ಮ ಸಿನಿಮಾಗಳ ದೆಸೆಯಿಂದ, ತಮ್ಮ ತವರಿನ ಕಾರಣದಿಂದ, ತಾವೊಬ್ಬ ಒಕ್ಕಲಿಗ ಎಂಬ ಸೆಂಟಿಮೆಂಟಿನಿಂದ ತಮ್ಮ ಮೇಲಿಟ್ಟಿದ್ದ ಅಭಿಮಾನವನ್ನು ಓಟುಗಳನ್ನಾಗಿ ಪರಿವರ್ತಿಸುವಲ್ಲಿ ಅಂಬರೀಶ್ ಯಶಸ್ವಿಯಾದರು; ಈ ಬೆಳವಣಿಗೆಯಿಂದ ಸ್ವತಃ ಅಂಬರೀಶ್ ಅವರಿಗೆ ಅಥವಾ ಮಂಡ್ಯ ಜನತೆಗೆ ಉಪಯೋಗವಾಯಿತೋ ಇಲ್ಲವೋ ಗೊತ್ತಿಲ್ಲ, ಆದರೆ ರಾಜಕೀಯ ಪಕ್ಷಗಳಿಗಂತೂ ಖಂಡಿತ ವರ್ಕ್ ಔಟ್ ಆಯಿತು.

ಅಂಬರೀಶ್ ಅವರು ದಂತಕತೆ ಎನ್ನಿಸುತ್ತಿರುವ ಈ ದಿನಗಳಲ್ಲಿ 'ರೆಬೆಲ್ ಸ್ಟಾರ್', 'ಕಲಿಯುಗದ ಕರ್ಣ', 'ಕೊಡುಗೈ ದಾನಿ', 'ಮಂಡ್ಯದ ಗಂಡು' ಇತ್ಯಾದಿ ಅಸಂಬದ್ಧ ಹೊಗಳಿಕೆಗಳಿಂದ ಈ ಬರಹ ಮುಗಿಸುವುದು ಸರಿಯಲ್ಲ. ಅಂಬರೀಶ್ ಕನ್ನಡಿಗರನ್ನು ಖುಷಿಪಡಿಸಿದ್ದಾರೆ; ಅನೇಕರಿಗೆ ಸಹಾಯಹಸ್ತ ಚಾಚಿದ್ದಾರೆ. ಮಿಗಿಲಾಗಿ, ತಮ್ಮ ನೇರನುಡಿಗಳಿಂದ ಮತ್ತು ಪಾರದರ್ಶಕ ವ್ಯಕ್ತಿತ್ವದಿಂದ, ಸ್ನೇಹಮಯ ಗುಣದಿಂದ ಹಾಗೇ ಪ್ರಧಾನವಾಗಿರುವ ಇವತ್ತಿನ ಕನ್ನಡ ಚಿತ್ರರಂಗದಲ್ಲಿ ಅಪ್ಪಟ ಮನುಷ್ಯರಾಗಿ ಕಾಣುತ್ತಾರೆ.

● ಹೃದಯಶಿವ

...ಗನಂತಿರುವ ಸದಾನಂದ ಗೌಡರಂತೆ ಬೇನಾಮಿಯಾಗಿ ...ಪ್ತಿ ಹೊಡೆಯುವುದರಲ್ಲೇ ಮುಳುಗಿದ್ದು ನಂತರ ...ನಾವಣೆ ಬಂದಾಗ ಚಿಲ್ಲರೆ ಗಿಮಿಕ್‌ಗಳನ್ನು ಮುಂದಿಟ್ಟು ... ಬರುತ್ತಾರೆ. ಹೀಗಿದ್ದರೆ ನಿಜ ಅಭಿವೃದ್ಧಿ ಸಾಧಿಸು...ವುದರೂ ಹೇಗೆ? ಭಾರೀ ಖುಷಿಪಡುವಂತಾದ್ದಲ್ಲದಿದ್ದರೂ ...ವರು ತಡವಾದರೂ (ಜಯಲಲಿತಾ ಜೈಲುಪಾಲಾಗಲು ...ವರ್ಷ ಬೇಕಾಯ್ತು) ಶಿಕ್ಷೆಗೊಳಗಾಗುತ್ತಿರುವುದು ಒಂದು ...ಯ ಬೆಳವಣಿಗೆಯೇ ಸೈ.

...ವ್ಯಕ್ತಿ ಪೂಜೆಯ ಪರಾಕಾಷ್ಠೆ ಅಥವಾ ಈ ದೇಶದ ...ಂತ ನೋಡಿ. ಭಾರೀ ಕಷ್ಟದಿಂದಲೇ ಜಯಲಲಿತಾ ...ನು ಪ್ರಕ್ರಿಯೆಯ ಕಾರಣಕ್ಕೆ ಜೈಲುಪಾಲಾದರೆ ಅಲ್ಲಿನ ...ರು, ಅಧಿಕಾರಿಗಳು, ಜನರು ಇದರ ವಿರುದ್ಧ ತೀವ್ರ ...ಭಟನೆ ನಡೆಸುತ್ತಾರೆ. ಸುಭಾಷ್ ಚಂದ್ರ ಭೋಸರ ...ಯೋ ಎಂಬಂತೆ ಇವಳ ಬಿಡುಗಡೆಗಾಗಿ ರಕ್ತದಲ್ಲಿ ...ಸ ಪತ್ರವನ್ನು ರಾಷ್ಟ್ರಪತಿಗೆ ಕಳಿಸುತ್ತಾರೆ. ಅಂದರೆ ...ಪಿಗಳ ವಿರುದ್ಧ ಕಾನೂನು ಪ್ರಕ್ರಿಯೆ ಸುಲಭ ಸಾಧ್ಯವಲ್ಲ ...ವಾಯ್ತು. ಇಂಥವರ 'ಸೌ ಖೂನ್ ಮಾಫ್' ...ಯದಾದರೆ ಇಂತಹ ಕಳ್ಳ-ಕ್ರಿಮಿನಲ್‌ಗಳೇ ಅಧಿಕಾರಸ್ಥರಾಗಿ ... ಈ ದೇಶ ಉದ್ಧಾರವಾಗುವುದಾದರೂ ಹೇಗೆ?

...ನೊಬ್ಬ ಸ್ವಾಮಿಯ ವಿರುದ್ಧ ಹೆಣ್ಣೊಬ್ಬಳು ಅತ್ಯಾಚಾರ ... ಹಾಕಿದಾಗ ಪಿತೂರಿ ಹಾಗು ಪ್ರಭಾವದಿಂದ ಆವಳನ್ನು ...ಗೆ ತಳ್ಳಲಾಯ್ತೇ ವಿನಃ ಆ ಸ್ವಾಮಿ ಇನ್ನೂ ತನ್ನ ಭದ್ರ ...ಪೆಯಲ್ಲಿ ಕಾನೂನು ಪ್ರಕ್ರಿಯೆಯಿಂದ ನುಣುಚಿಕೊಂಡೇ ... 'ಮೊನ್ನೆ ಮೊನ್ನೆ ಹುಟ್ಟಿದ ಪೊಲೀಸ್ ಇಲಾಖೆ ... ವರ್ಷ ಇತಿಹಾಸವಿರೋ ಈ ಮಠದ ನನ್ನನ್ನು ...ಟ್ಟಿ ನೋಡುವಾ...' ಎಂದು ನೇರ ಧಮಕಿಯ ...ಯಲ್ಲಿ ಆವಾಜ್ ಹಾಕುತ್ತಾನೆ. ಇನ್ನೂ ತಮಾಷೆಯೆಂದರೆ ...ಯಲಲಿತಾ ಜೈಲು ಪಾಲಾದಾಗ ನಮ್ಮ ಸ್ಟೇಟ್‌ಮೆಂಟ್ ...ಣಿ ಡಿ.ವಿ.ಸದಾನಂದ ಗೌಡರು ಹೇಳಿಕೆ ನೀಡಿ ...ಪಿಸಿದುರು ಎಲ್ಲರೂ ತಲೆಬಾಗಲೇ ಬೇಕು" ಎಂದು ...ದ್ದನ್ನು ಕೇಳಿ ಜನ ನಗಬಾರದ ಜಾಗದಲ್ಲಿ ನಕ್ಕಿದ್ದರು. ... ಮಗಳ ವಿಚಾರದಲ್ಲಿ ಪೊಲೀಸರು ಹಾಗು ಕಾನೂನನ್ನು ... ರೀತಿ ಪ್ರಭಾವ ಬೀರಿ ಯಾಮಾರಿಸಿ ತನಿಖೆಗೆ ...ದಲ್ಲಿ ಸಹಕರಿಸದೇ ಮಗನನ್ನು ಅಡಗಿಸಿಡಲಾಗಿತ್ತೆಂಬು...ದೀ ದೇಶವೇ ನೋಡಿತ್ತಲ್ಲವೇ?

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

...ರಾಮಚಂದ್ರಾಪುರ ಮಠದ ಶಿಷ್ಯನಾದ ನಾನು ಕೆಲವು ...ದಿನಗಳನ್ನು ಮನವರಿಕೆ ಮಾಡುತ್ತಿದ್ದೇನೆ. ಮಠದ ...ಯ ಮಹಿಳೆಯರ ಬಗ್ಗೆ ದೌರ್ಜನ್ಯ ಎಸಗಿರುವುದು ... ಕಾಲಲ್ಲಿ ಒಬ್ಬರುವುದನ್ನು ಕಣ್ಣಾರೆ ಕಂಡಿದ್ದೇನೆ. ... ಮಹಿಳೆಯರು ಮಾನದ ಭೀತಿಯಿಂದ ಸ್ವಾಮಿಯ ... ದೌರ್ಜನ್ಯವನ್ನು ಬಹಿರಂಗವಾಗಿ ಹೇಳಲಾಗದೆ ...ಡುಸುತ್ತಿದ್ದಾರೆ. ಸ್ವಾಮಿಯನ್ನು ಎದುರು ಹಾಕಿಕೊಂಡರೆ ...ವರು ಹುಟ್ಟಿಸಿ ಸಾಯಿಸುವುದಾಗಿ ಹೇಳುತ್ತಾರೆ. ...ಧಿಕಾರಿಗಳು ಸ್ವಾಮಿಯ ಅನುಯಾಯಿಯಾಗಿದ್ದು ಸ್ವಾಮಿಯ ಆದೇಶದಂತೆ ತೀರ್ಪು ನೀಡುತ್ತಿದ್ದಾರೆ. ಈ ತೀರ್ಪನ್ನು ಸ್ವಾಮಿಯೇ ಮೊದಲು ಹೇಳಿರುತ್ತಾರೆ.

ತಮ್ಮ ವಿರುದ್ಧ ದೂರು ಕೊಟ್ಟಿರುವ ಮಹಿಳೆಯನ್ನು ಕೊಲ್ಲಲು ಸಂಚು ಮಾಡಲಾಗಿದೆ. ಆ ಕೊಲೆಯನ್ನು ಆತ್ಮಹತ್ಯೆ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ. ಇದನ್ನು ತಡೆಯುವವರು ಯಾರು?

- ನೊಂದವರು

ಸಾವಿನಲ್ಲೂ ಜನಪರತೆ ತೋರಿದ ಕವಿತಾ ಕರ್ಕರೆ ಅವರಿಗೆ ನಮ್ಮ ಹೃತ್ಪೂರ್ವಕ ನಮನ. ಇಂಥವರು ನಮ್ಮ ಸಮಾಜಕ್ಕೆ ಮಾದರಿಯಾಗಲಿ.

-ಯೂಸುಫ್, ಬಬಲೇಶ್ವರ

ಮಂಗಳಯಾನದ ಬಗ್ಗೆ ಗೌರಿ ಲಂಕೇಶ್ ತಮ್ಮ 'ಕಂಡಹಾಗೆ' ಅಂಕಣದಲ್ಲಿ ಬರೆದ ಅಭಿಪ್ರಾಯ ನೂರು ಪರ್‌ಸೆಂಟ್ ಸರಿಯಾದದ್ದು.

-ಓದುಗ, ಎಸ್‌ಎಂಎಸ್ ಮೂಲಕ

ಪತ್ರಿಕೆಯ ಅಕ್ಟೋಬರ್ 8, 2014ರ ಸಂಚಿಕೆ ಚೆನ್ನಾಗಿ ಮೂಡಿಬಂದಿದೆ. ಯೋಗೇಶ್ ಮಾಸ್ಟರ್ ಅವರ 'ವಿಜಯದಶಮಿ: ನಾಡಹಬ್ಬ ಎಂಬ ಹುಸಿ ಸಂಸ್ಕೃತಿ' ಲೇಖನ ಅದ್ಭೂರಿಯಾಗಿತ್ತು. ನನಗೆ ಮತ್ತು ನನ್ನಂಥವರಿಗೆ ಹಬ್ಬದೂಟವಾಯಿತು.

ಭಾರತವೆಂಬುದು ಒಂದು ಅಸಂಬದ್ಧ ನಾಡು. ಒಂದು ಸುಳ್ಳನ್ನು ಸಾವಿರ ಬಾರಿ ಅರಚಿ ಅದನ್ನು ನಿಜವಾಗಿಸಲು ಹೆಣಗಾಡುವ ಚಾಳಿಯನ್ನು ಟಿವಿ ಮತ್ತು ಎಫ್‌ಎಂ ರೇಡಿಯೋ ಚಾನೆಲ್‌ಗಳಲ್ಲಿ ನೀಡುವ ಜಾಹೀರಾತುಗಳಲ್ಲೇ ಜಗಜ್ಜಾಹೀರು ಮಾಡಿಕೊಂಡಿದ್ದಾರೆ. ಇದೇ ಇವರ ಬೀದಿ ಸಂಸ್ಕೃತಿ.

ಪತ್ರಿಕೆಯ ಮುಂದಿನ ಹೂರಣವನ್ನು ಎದುರು ನೋಡುತ್ತಿದ್ದೇನೆ.

- ಬಿ.ಜೆ.ಕುಶಲೇಂದ್ರ, ಎಸ್‌ಎಂಎಸ್ ಮೂಲಕ

ಜಾತಿ ಮತ್ತು ಬಾಲಂಗೋಚಿ

ಜಾತಿ ಮತ್ತು ಹೆಸರು ಕುರಿತ ಡಾ. ಹೆಚ್.ವಿ. ವಾಸುರವರ ಲೇಖನ (ಗೌರಿ ಲಂಕೇಶ್, 8.9.14) ಜಾತಿಯ ಕೆಸರನ್ನು ಮೈ ಮತ್ತು ಮನಸ್ಸುಗಳಿಗೆ ಬಳಿದುಕೊಂಡವರ ಮುಸುಡಿಗಳಿಗೆ ಹಿಡಿದ ಕನ್ನಡಿಯಂತಿದೆ. ಆಟೋ ಚಾಲಕರು ಸೇರಿದಂತೆ ಇತರರೂ ಸಹ ಅವರಿಗೆ ಸೇರಿದ ವಾಹನಗಳ ಮೇಲೆ ಬೇರೆ ಜಾತಿಯವರಿಗೆ ಇರಿಸುಮುರಿಸಾಗುವಂತೆ ತಮ್ಮ ತಮ್ಮ ಜಾತಿಯ 'ಬಾಲಂಗೋಚಿ'ಗಳನ್ನು ಬರೆಸಿಕೊಂಡಿರುವುದನ್ನು ನಾನೂ ಸಹ ಗಮನಿಸಿ ನಾಚಿಕೆಯಿಂದ ತಲೆತಗ್ಗಿಸಿದ್ದೇನೆ. ಜಾತಿಯ ರೋಗವನ್ನು ಬಗಲ ಗೂಟದಂತೆ ಬದಿಸಿಕೊಂಡಿರುವ ಈ ರೋಗಗ್ರಸ್ತ ಮನಸ್ಸುಗಳನ್ನು ಕಂಡು ನಿಜಕ್ಕೂ ಹೇಸಿದ್ದೇನೆ. ಇಂಥವರ ಮನಸ್ಸುಗಳಿಗೆ ಹಿಡಿದಿರುವ ಕಾಯಿಲೆಗಳನ್ನು ಗುಣಪಡಿಸಲು ಅಲಾವಿಖಾನ್‌ರಂತಹ ಅದೆಷ್ಟು ಹಕೀಮರು ಬರಬೇಕೋ?

ಮೇಲುಜಾತಿ ಎಂದು ತಮ್ಮಷ್ಟಕ್ಕೆ ತಾವು ಬಿಂಬಿಸಿಕೊಂಡಿರುವ ಅಥವಾ ಭ್ರಮಿಸಿಕೊಂಡಿರುವ ಬುದ್ಧಿಗೇಡಿಗಳಿಗೆ ಬಾಲಂಗೋಚಿ ಒಂದು ಪ್ರತಿಷ್ಠಿತ 'ಲೇಬಲ್.' ಆದಿಕಾಲದಿಂದಲೂ ಈ ನೀಚ ಸಮಾಜವು ಜಾತಿ ಗೋಡೆಗಳು ಕುಸಿದು ಬೀಳದಂತೆ ಮತ್ತು ಅದು ಸದಾ ಕಾಲವೂ ಯಥಾಸ್ಥಿತಿಯಲ್ಲೇ ಮುಂದುವರೆಯುವಂತೆ ಸಕಲ ರೀತಿಯಲ್ಲೂ ಸಿದ್ಧತೆ ಮಾಡಿಕೊಂಡೇ ಬಂದಿದೆ. 'ಜಾತ್ಯತೀತ ದೇಶ'ವೆಂದೇ ಹೆಸರಾಗಿರುವ ನಮ್ಮ ಈ ಭರತ ಖಂಡದಲ್ಲಿ ಕೆಳಸ್ತರದವರ ಪರ ವಹಿಸಿಕೊಂಡ ಪಕ್ಷಪಾತಿಯಾಗಿ ಹೇಳಬೇಕೆಂದರೆ, ಈ ತಳ ಸಮುದಾಯಗಳು ಬಾಲಂಗೋಚಿಗಳನ್ನು ತಮ್ಮ ಹೆಸರಿನ ಮುಂದೆ ಹಾಕಿಕೊಳ್ಳುವುದು ಅವರ ಮಟ್ಟಿಗೆ ಒಂದು ಪ್ರತಿಷ್ಠೆಯ ಸಂಕೇತವಾಗಿದೆ. ಇದು ಹೇಗೆ ಎಂದರೆ 'ಜಾತಿಯ ಕಾರಣಕ್ಕೆ, ನೀನು ಶ್ರೇಷ್ಠನಾಗಿದ್ದರೆ, ನಾನೂ ಶ್ರೇಷ್ಠನೇ' ಎಂದು ತಿಳಿ ಹೇಳುವ ಎದುರುತ್ತರವಾಗಿದೆ. ಮಾತ್ರವಲ್ಲ, ಇದು ಅವರ ಸ್ವಾಭಿಮಾನ ಮತ್ತು ಎದೆಗಾರಿಕೆಯ ಪ್ರಶ್ನೆಯೂ ಆಗಿದೆ. ಮತ್ತಷ್ಟು



ಬಿಡಿಸಿ ಹೇಳಬೇಕೆಂದರೆ, ಶಾಸ್ತ್ರಿ ಭಟ್ಟ ಶ್ರೇಷ್ಠರಾದರೆ (ಬಾಲಂಗೋಚಿಯ ಕಾರಣಕ್ಕೆ) ಹೊಲೆಯ, ಮಾದಿಗ ಯಾಕೆ ಮತ್ತು ಯಾವ ಕಾರಣಕ್ಕೆ ಶ್ರೇಷ್ಠರಲ್ಲ ಎಂದು ಪ್ರಶ್ನಿಸಿದಂತೆ.

ಮೆಚ್ಚುಗೆಯ ಮಾತೆಂದರೆ, ಇವತ್ತು ಅನೇಕ ಬ್ರಾಹ್ಮಣರೂ ಸೇರಿದಂತೆ ಇತರೆ ಜಾತಿಯವರು ಬಾಲಂಗೋಚಿಗಳನ್ನು ಬಿಟ್ಟಿರುವುದು ಮತ್ತು ಬಿಡುತ್ತಿರುವುದು. ಆದರೆ ಆ ಕೊಳೆಯನ್ನು ಇಂದಿಗೂ ಮೆತ್ತಿಕೊಂಡು ಸಂಭ್ರಮಿಸುತ್ತಿರುವ ಕೆಲವರನ್ನು ಕುರಿತು ಒಂದು ನಗು ನಕ್ಕು ಸುಮ್ಮನಾಗಬೇಕು, ಅಷ್ಟೇ.

ಲೇಖಕರಿಗೆ ಅಭಿನಂದನೆಗಳು.

ಎನ್.ಕೆ. ವರದರಾಜ್, ಕೋಲಾರ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 22-10-2014 RNI No. KARKAN2003/14



ವಿಷ್ಣು ಸ್ಮಾರಕಕ್ಕೆ ಚಾಲನೆ


ವಿಷ್ಣುವರ್ಧನ್ ಹೆಸರಿನಲ್ಲಿ ಒಂದು ಸ್ಮಾರಕ ನಿರ್ಮಾಣವಾಗಬೇಕು ಎಂಬುದು ತುಂಬಾ ಹಿಂದಿನ ಮಾತು. ಆ ನಿಟ್ಟಿನಲ್ಲಿ ಸರ್ಕಾರ ಎರಡೆಕರೆ ಜಾಗವನ್ನು 'ಅಭಿಮಾನ್ ಸ್ಟುಡಿಯೋ'ದಲ್ಲಿ ಮೀಸಲಿರಿಸಿತ್ತಾದರೂ ಅದೇನೇನೋ ತಕರಾರುಗಳ ದೆಸೆಯಿಂದ ಆ ಜಾಗದಲ್ಲಿ ಸ್ಮಾರಕ ನಿರ್ಮಿಸಲು ಸಾಧ್ಯವಾಗಲಿಲ್ಲ. ಬಳಿಕ ಸರ್ಕಾರ ಅಲ್ಲೇ ಹತ್ತಿರದಲ್ಲೇ ಬೇರೆ ಕಡೆ ಎರಡೆಕರೆ ಜಾಗ ಕೊಡುವುದಾಗಿ ಹೇಳಿತ್ತು. ಕೊಟ್ಟಿತು ಕೂಡ. ಈಗ ಆ ಜಾಗದಲ್ಲಿ ವಿಷ್ಣು ಹೆಸರಿನಲ್ಲಿ ನಿರ್ಮಾಣವಾಗಬೇಕಿರುವ ಸ್ಮಾರಕಕ್ಕೆ ಗುದ್ದಲಿ ಪೂಜೆ ಜರುಗುವ ಸಂಭವವಿದೆ. ಈ ಕಾರ್ಯಕ್ರಮಕ್ಕೆ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರಂತೆ. ಒಂದು ಅಂದಾಜಿನ ಪ್ರಕಾರ ಈ ಸ್ಮಾರಕ ನಿರ್ಮಾಣಕ್ಕೆ ಸುಮಾರು ಹನ್ನೊಂದು ಕೋಟಿಯಷ್ಟು ಹಣವು ವ್ಯಯವಾಗಲಿದ್ದು ಆ ಕೆಲಸ ಯಾವುದೇ ಅಡೆತಡೆಗಳಿಲ್ಲದೆ ಸಾಗುತ್ತದೆಯಂತೆ.

ನೀವೆಲ್ಲ ವೆರಿಗುಡ್ ಪ್ರೇಕ್ಷಕರು



'ಬಿಗ್ ಬಾಸ್' ಎಂಬ ಕಾರ್ಯಕ್ರಮ ಯಾವ ಪರಿ ಜನರಿಗೆ ಸಿಟ್ಟು ಹಿಡಿಸಿದೆ ಎಂಬುದು ನಿಮಗೆ ಗೊತ್ತು. ಇಂತಹ ಕಾರ್ಯಕ್ರಮ ತನ್ನ ಮೂರನೇ ಸೀಸನ್ ಆರಂಭಿಸಿಕೊಳ್ಳಲು ಯೋಜನೆ ರೂಪಿಸುತ್ತಿದೆ. ಇಂತಹ ಸಂದರ್ಭದಲ್ಲಿ ಈ ಬಾರಿ ಈ ಕಾರ್ಯಕ್ರಮವನ್ನು ಯಾರು ನಡೆಸಿಕೊಡುತ್ತಾರೆ ಎಂಬ ಕುತೂಹಲ ಕೆಲವರಲ್ಲಾದರೂ ಇದೆ. ಮೊದಲೆರಡು ಸೀಸನ್‌ಗಳನ್ನು ನಡೆಸಿಕೊಟ್ಟ ಸುದೀಪ್ ಈ ಬಾರಿಯೂ ನಡೆಸಿಕೊಡುತ್ತಾರಾ ಎಂಬ ಸಾಮಾನ್ಯ ಪ್ರಶ್ನೆಗೆ ಸುದೀಪ್ "ಮೂರನೇ ಬಾರಿಯೂ ನಾನೇ ಖಂಡಿತವಾಗಿ ನಡೆಸಿಕೊಡಲು ಇಚ್ಛಿಸುತ್ತೇನೆ. ನೀವೆಲ್ಲ ವೆರಿಗುಡ್ ಪ್ರೇಕ್ಷಕರು. ಅದೇ ... ಎನರ್ಜಿ" ಎಂಬರ್ಥದಲ್ಲಿ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ. ಇಷ್ಟಕ್ಕೂ 'ಬಿಗ್ ಬಾಸ್' ಒಂದು ಆವರೇಜ್ ... ಕಾರ್ಯಕ್ರಮ ಎಂಬುದು ಸ್ವತಃ ಸುದೀಪ್‌ಗೂ ಗೊತ್ತಿರುತ್ತದೆ. ಆದರೂ ಹೀಗೆ ಹೇಳಬೇಕಾದುದು ಅ... ಅನಿವಾರ್ಯ. ಅಂದಹಾಗೆ ಸುದೀಪ್ ಅವರಲ್ಲಿ ಒಂದೇ ಒಂದು ಮನವಿ ಎಂದರೆ ಬಿಗ್ ಬಾಸ್, ಸ್ಮಾಲ್ ಬಾಸ್ ಇಂಥವನ್ನೆಲ್ಲ ಬಿಟ್ಟು, ಯಾವುದೇ ಬ... ರಿಮೇಕ್ ಚಿತ್ರದತ್ತ ಕಣ್ಣು ನೆಡದೆ ಒಂದು ಅಪ್ಪಟ ಕನ್ನಡ ಚಿತ್ರ ಮ... ಎಂಬುದು. ಯಾಕೆಂದರೆ ಅವರ 'ಹುಚ್ಚ', 'ವಾಲಿ', 'ಸ್ವಾತಿಮ...' 'ಕಾಶಿ ಫ್ರಮ್ ವಿಲೇಜ್', 'ಸೈ', 'ನಮ್ಮಣ್ಣ', 'ಮೈ ಆಟೋಗ...' 'ಕಾಮಣ್ಣನ ಮಕ್ಕಳು', 'ವೀರ ಮದಕರಿ', 'ಮಿ.ತೀರ್ಥ', 'ಕಿಚ್ಚ ...' 'ಕೆಂಪೇಗೌಡ', 'ವರದನಾಯಕ', 'ಮಾಣಿಕ್ಯ' ಸೇರಿದಂತೆ ಬಹು... ಚಿತ್ರಗಳು ಪರಭಾಷೆಗಳಿಂದ ಭಟ್ಟಿ ಇಳಿಸಿದ ಅಪ್ಪಟ ರಿ... ಚಿತ್ರಗಳೇ. ಅವರ ಮುಂದಿನ ಚಿತ್ರ 'ರನ್ನ' ಕೂಡ ಅದೇ ... ಸೇರುತ್ತಿದೆ. 'ರನ್ನ' ತೆಲುಗಿನ 'ಅತ್ತಾರಿಂಟಿಕಿ ದಾರೇದಿ' ಚಿತ್ರದ ರಿ...

ವೇಲು ಮೆಚ್ಚಿದ ಬೆಂಕಿ ಸಾಂಗ್ಸ್



'ಬೆಂಕಿಪಟ್ಣ' ಚಿತ್ರದ ಸಿಡಿಗಳು ಹೊರ ಬಂದಿವೆ. ಒಟ್ಟು ಐದು ಹಾಡುಗಳಿರುವ ಈ ಚಿತ್ರದ ಧ್ವನಿಸುರುಳಿ 'ಲಹರಿ' ಸಂಸ್ಥೆಯ ಮೂಲಕ ಬಿಡುಗಡೆಯಾಗಿದೆ. ಹಾಡುಗಳು ಈಗಾಗಲೇ ಎಲ್ಲಾ ಕಡೆ ಸುದ್ದಿಯಲ್ಲಿದ್ದು ಈ ಕುರಿತು ಸ್ವತಃ 'ಲಹರಿ' ಆಡಿಯೋ ಸಂಸ್ಥೆಯ ವೇಲು, "'ಎ', 'ಅಮೃತವರ್ಷಿಣಿ', 'ರೋಜಾ' ಚಿತ್ರಗಳ ನಂತರ ನನ್ನನ್ನು ಡಿಸ್ಟರ್ಬ್ ಮಾಡಿದ, ಕಾಡಿದ ಹಾಡುಗಳು ಬೆಂಕಿಪಟ್ಣ ಚಿತ್ರದ್ದು" ಎಂದಿದ್ದಾರೆ. ಈಗಾಗಲೇ ಈ ಚಿತ್ರದ ಪ್ರೊಮೊ ನೋಡಿದವರಲ್ಲಿ ಕುತೂಹಲ ಉಂಟುಮಾಡಿದ್ದು ಚಿತ್ರದ ಬಗ್ಗೆ ನಿರೀಕ್ಷೆ ಹುಟ್ಟಿಸಿರುವುದು ಸುಳ್ಳಲ್ಲ. ಕತೆಗಾರರಾಗಿ ಸಾಕಷ್ಟು ಪ್ರಯೋಗ, ಕ್ರಿಯಾಶೀಲತೆ ತೋರಿಸಿರುವ ಟಿ.ಕೆ.ದಯಾನಂದ್ 'ಬೆಂಕಿಪಟ್ಣ' ಚಿತ್ರದ ಮೂಲಕ ಒಬ್ಬ ನಿರ್ದೇಶಕರಾಗಿ ಗೆಲ್ಲಲಿ ಎಂಬುದು ನಮ್ಮ ಆಶಯ.




ಮಿಷ್ಟಿ ಮಿಷ್ಟಿಯಾಗಿ ಗಣೇಶ್ ಅಮೂಲ್ಯ

ಕೋಮಲ್ ಈಗ ಡೀಲ್ ರಾಜ



'ಡೀಲ್ ರಾಜ' ಕೋಮಲ್ ಅಭಿನಯಿಸುತ್ತಿರುವ ಹೊಸ ಚಿತ್ರದ ಹೆಸರು. ಈ ಚಿತ್ರದಲ್ಲಿ ಕೋಮಲ್ ಅವರಿಗೆ ಇಬ್ಬರು ಹೀರೋಯಿನ್‌ಗಳಿದ್ದು ಇಬ್ಬರೂ ಪೊಲೀಸ್ ಕಾನ್ಸ್‌ಟೇಬಲ್‌ಗಳಾಗಿ ಕಾಣಿಸಿಕೊಳ್ಳುತ್ತಿದ್ದಾರೆ. 'ಸಡಗರ' ಎನ್ನುವ ಚಿತ್ರವನ್ನು ಮಾಡಿದ್ದ ಗೋಪಿ ಸೂರ್ಯ ಈ ಚಿತ್ರದ ನಿರ್ದೇಶಕರು. ಇದೊಂದು ಪಕ್ಕಾ ಕಾಮಿಡಿ ಚಿತ್ರವಾಗಿದ್ದು ಕೋಮಲ್ ಸಾಕಷ್ಟು ನಗಿಸುವ ಸೂಚನೆಗಳು ಕಂಡುಬರುತ್ತಿದೆ. ಈಗಾಗಲೇ 'ಚಮ್ಕಾಯ್ಸಿ ಚಿಂದಿ ಉಡಾಯ್ಸಿ', 'ಮಿ.ಗರಗಸ', 'ಕಳ್ ಮಂಜ', 'ಗೋವಿಂದಾಯ ನಮಃ', 'ವಾರೆ ವ್ಹಾ' ಮೂಲಕ ಜನರನ್ನು ರಂಜಿಸಿದ್ದ ಕೋಮಲ್ ಇತ್ತೀಚೆಗಷ್ಟೇ ತಮ್ಮ ಸ್ವಂತ ಬ್ಯಾನರಿನಡಿ 'ನಮೋ ಭೂತಾತ್ಮ' ಎಂಬ ಚಿತ್ರವನ್ನು ಆರಂಭಿಸಿ ಶೂಟಿಂಗ್ ಮುಗಿಸಿದ್ದಾರೆ. ಕನ್ನಡದಲ್ಲಿ ತಮಗೆ ಸರಿಯಾಗಿ ಸಪೋರ್ಟ್ ಸಿಗುತ್ತಿಲ್ಲ, ಪತ್ರಿಕೆಗಳಲ್ಲಿ, ಮಾಧ್ಯಮದಲ್ಲಿ ಸಿಗಬೇಕಾದ ಮನ್ನಣೆ, ಸಹಕಾರ ಸಿಗುತ್ತಿಲ್ಲ ಎಂಬ ಬೇಸರ ವ್ಯಕ್ತಪಡಿಸಿರುವ ಕೋಮಲ್ ಮುಂದಿನ ದಿನಗಳಲ್ಲಿ ತಮಿಳು ಚಿತ್ರರಂಗದತ್ತ ಗಮನ ಹರಿಸುವ ಸಾಧ್ಯತೆ ಇರುವುದನ್ನೂ ತಳ್ಳಿ ಹಾಕುವಂತಿಲ್ಲ. ಅಂದಹಾಗೆ ಶರಣ್ ಒಂದರ ಹಿಂದೆ ಒಂದು ಹಿಟ್ ಕೊಡಲು ಶುರು ಮಾಡಿದ ಮೇಲೆ ಅದೇಕೋ ಕೋಮಲ್ ಚಿತ್ರಗಳು ಅಷ್ಟು ಪ್ರಮಾಣದಲ್ಲಿ ಸಕ್ಸಸ್ ಕಾಣುತ್ತಿಲ್ಲ. ಇನ್ನಾದರೂ ಕೋಮಲ್ ಚಿತ್ರಗಳು ಗೆಲ್ಲುವಂತಾಗಲಿ ಅಲ್ಲವೇ?

ಸಿದ್ದಾಪುರ ಎಂ... ರೌಡಿಗಳ ಅ...



'ಜಾಸ್ಮಿನ್ 5' ಎಂಬ ಸೆಕ್ಸ್ ಫಿಲಂ ಮಾಡಿದ್ದ ನಿರ್ದೇಶಕ ಕೃಷ್ಣ ಈ ಬಾರಿ 'ಸಿದ್ದಾಪುರ' ಮಾಡಲು ಹೊರಟಿದ್ದಾರೆ. 'ಸಿದ್ದಾಪುರ' ಪಕ್ಕಾ ರೌಡಿಸಂ ಚಿತ್ರವಾಗಿದ್ದು ಈ ಚಿತ್ರದಲ್ಲಿ ಪ್ರೀತಿಯೂ ಕಾಣಿಸಿಕೊಳ್ಳುತ್ತದಂತೆ. ಬೆಂಗಳೂರಿನ ಲಾಲ್ ಬಾಗ್ ಪಕ್ಕದಲ್ಲಿರುವ ಈ ಸಿದ್ದಾಪುರ ನಿರ್ದೇಶಕ ಕೃಷ್ಣ ವಾಸಿಸುತ್ತಿರುವ ಏರಿಯಾ ಆಗಿದ್ದು ಇಲ್ಲಿ ಈ ಮನುಷ್ಯ ರೌಡಿಸಂಗೆ ಸಂಬಂಧಿಸಿದ ಅದೆಷ್ಟೋ ಘಟನೆಗಳನ್ನು ಕಣ್ಣಾರೆ ನೋಡಿದ್ದಾರಂತೆ. ಈಗ ಅವನ್ನೆಲ್ಲ 'ಸಿದ್ದಾಪುರ'ದ ಮೂಲಕ ತೋರಿಸುವ ಪ್ರಯತ್ನವಂತೆ. ಇಷ್ಟಕ್ಕೂ ರೌಡಿಸಂ ಚಿತ್ರಗಳನ್ನು ನೋಡುವ ... ಪ್ರೇಕ್ಷಕರೆಲ್ಲ ಆ ಬಗೆಯ ಚಿತ್ರಗಳನ್ನು ನೋಡುವ ಆಸಕ್ತಿ... ಸಂಪೂರ್ಣವಾಗಿ ಕಳೆದುಕೊಂಡಿರುವಾಗ, ಮಚ್ಚು, ಲಾಂಗುಗ... 'ವ್ಯಾ' ಎನ್ನುವಂತಾಗಿರುವಾಗ ಈ ಕೃಷ್ಣ ಎಂಬ ಆಸಾಮಿಗೆ ಬೇರೆ ಕ... ಸಿಗಲಿಲ್ಲ ಎಂಬಂತೆ ರೌಡಿಸಂ ಕತೆಯ ಮೊರೆ ಹೋಗಿರುವುದು ... ಬೌದ್ಧಿಕ ದಿವಾಳಿತನಕ್ಕೆ ಹಿಡಿದ ಕನ್ನಡಿಯಾಗಿದೆ. ಅಂದಹಾಗೆ ಈ... 'ಸಿದ್ದಾಪುರ'ದಲ್ಲಿ ಅದೇನೇನು ನೋಡಿದ್ದಾರೋ, ಅದೆಲ್ಲವನ್ನು ... 'ಸಿದ್ದಾಪುರ' ಚಿತ್ರದಲ್ಲಿ ತೋರಿಸುತ್ತಾರೋ ಕಾದು ನೋಡಬೇಕಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427,
Fax : 26604536, E-mail :lankesh70@rediffmail.com